

# ಶ್ರೀ ವೇಂಕಟೇಶ್ವರ ವ್ರತಕಲ್ಪ

ಸಾಕ್ಷಾತ್ ಶ್ರೀ ವೇಂಕಟೇಶ್ವರ ಸ್ವಾಮಿಯವರಿಂದ ಅನುಗ್ರಹಿಸಲ್ಪಟ್ಟ ಅದ್ಭುತ ವ್ರತಕಲ್ಪ



ವಿಶ್ವಪತಿ



ಶ್ರೀವಾರಿ ಪಾದಗಳು – ನಾರಾಯಣಗಿರಿ (ತಿರುಮಲ)

ಶ್ರೀರಸ್ತು ಶುಭಮಸ್ತು ಅವಿಘ್ನಮಸ್ತು

# ಶ್ರೀ ವೇಂಕಟೇಶ್ವರ ವ್ರತಕಲ್ಪ

ಸಾಕ್ಷಾತ್ ಶ್ರೀ ವೇಂಕಟೇಶ್ವರ ಸ್ವಾಮಿಯವರಿಂದ ಅನುಗ್ರಹಿಸಲ್ಪಟ್ಟ ಅದ್ಭುತ ವ್ರತಕಲ್ಪ




**ವಿಶ್ವಪತಿ**

(ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿ)



श्रीं

**SHRI DESIGNS**

**VEDIC LOGO DESIGNERS**

www.lordofsevenhills.com

Cell : +91 9849443752

**HYDERABAD**

**2021**

ಶ್ರೀ ವೇಂಕಟೇಶ್ವರ ವ್ರತಕಲ್ಪ

**ಸಾಕ್ಷಾತ್ ಶ್ರೀ ವೇಂಕಟೇಶ್ವರ ಸ್ವಾಮಿಯವರಿಂದ ಅನುಗ್ರಹಿಸಲ್ಪಟ್ಟ ಅದ್ಭುತ ವ್ರತಕಲ್ಪ**

**ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿ**

**© All rights are with Author**

**First Edition : 2017**

**Second Edition : 2021**

**Printed at :**
**VENUS PRINTERS**
# 72, Dharmaraja Koil Street
Bangalore - 560001
Mobile : +91 9880283410 / 11

**All book written by Timmaraju Viswapathi Ramakrishna Murthy can be accessed at**

**www.lordofsevenhills.com**

**T.V.R.K. MURTHY,** M.Tech
F-Block, Flat No.903, Vertex Sadguru Krupa Apartments
Beside Sanghamitra School, Nizampet Road
HYDERABAD - 500 085, India
Cell : +91 9849443752
Email : viswapathi@yahoo.com, shridesigns@gmail.com

# ಮುನ್ನುಡಿ

ವೇಂಕಟಾದ್ರಿ ಸಮಂಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ ।
ವೇಂಕಟೇಶ ಸಮೋ ದೇವೋ ನ ಭೂತೋ ನ ಭವಿಷ್ಯತಿ ॥

ಈ ಬ್ರಹ್ಮಾಂಡದಲ್ಲಿ ವೇಂಕಟಾದ್ರಿಯನ್ನು ಮೀರಿದ ಪುಣ್ಯಕ್ಷೇತ್ರ ಬೇರೊಂದಿಲ್ಲ. ಶ್ರೀ ವೇಂಕಟೇಶನಿಗೆ ಸಮನಾದ ದೈವ ಮತ್ತೊಂದಿಲ್ಲ ಮತ್ತು ಇನ್ನು ಮುಂದೆಯೂ ಇರುವುದಿಲ್ಲ. ವೈಕುಂಠಪತಿಯಾದ ಸಾಕ್ಷಾತ್ ಶ್ರೀಮನ್ನಾರಾಯಣನೇ ನಮ್ಮೆಲ್ಲರನ್ನೂ ಅನುಗ್ರಹಿಸಲೆಂದು ಈ ಕಲಿಯುಗದಲ್ಲಿ ಭೂಲೋಕದಲ್ಲಿರುವ ಪರಮಪವಿತ್ರವಾದ ತಿರುಮಲ ಬೆಟ್ಟದ ಮೇಲೆ ಶ್ರೀ ಶ್ರೀನಿವಾಸನಾಗಿ ಅವತರಿಸಿರುವನು.

ಶ್ರೀ ಶ್ರೀನಿವಾಸನ ಲೀಲೆಗಳು ಅದ್ಭುತ. ನಂಬಿದ ಭಕ್ತರಿಗೆ ಆತ್ಮಬಂಧು ಇವನು, ಅನಂತನು ಮತ್ತು ಆಪದ್ಬಾಂಧವನು. ತನ್ನನ್ನು ನಂಬಿದ ಭಕ್ತರನ್ನು ಶ್ರೀ ಶೀನಿವಾಸನು ವಿಧವಿಧವಾಗಿ ಕಾಪಾಡುತ್ತಾನೆ ಮತ್ತು ಮೋಕ್ಷವನ್ನೂ ಕರುಣಿಸುತ್ತಾನೆ.

ಶ್ರೀ ವೇಂಕಟೇಶ್ವರ ವ್ರತಕಲ್ಪವನ್ನು 2005ರಲ್ಲಿ ಬರೆಯಲಾಯಿತು. ಇದು ಆ ಶ್ರೀ ಶ್ರೀನಿವಾಸನ ಅನುಗ್ರಹ ವಿಶೇಷವಲ್ಲದೇ ಬೇರೇನೂ ಅಲ್ಲ. ಕಲಿಯುಗದಲ್ಲಿ ನಮ್ಮೆಲ್ಲರನ್ನೂ ಬಾಧಿಸುವ ವಿಧವಿಧವಾದ ಬಾಧೆಗಳಿಂದ ಸಂರಕ್ಷಿಸಿ ಅನುಗ್ರಹಿಸಲೆಂದೇ ಈ ಶ್ರೀ ವೇಂಕಟೇಶ್ವರ ವ್ರತಕಲ್ಪವನ್ನು ಸ್ವಾಮಿಯು ಅನುಗ್ರಹಿಸಿದ್ದಾನೆಂಬುದು ನನ್ನ ದೃಢ ನಂಬಿಕೆ. 2005ರಿಂದ ಪ್ರತಿ 6 ತಿಂಗಳಿಗೊಮ್ಮೆ ಸಾಧ್ಯವಾದಷ್ಟು ಈ ಶ್ರೀ ವೇಂಕಟೇಶ್ವರ ವ್ರತಕಲ್ಪದ ಪುಸ್ತಕಗಳನ್ನು ಮುದ್ರಿಸಿ ಉಚಿತವಾಗಿ ಭಕ್ತರಿಗೆ ತಲುಪಿಸುವ ಕಾರ್ಯ ಸಾಗುತ್ತಲೇ ಬರುತ್ತಿದೆ. ಈಗ, ಈ ಪುಸ್ತಕವನ್ನು 12 ಭಾಷೆಗಳಿಗೆ ಅನುವಾದಿಸಲಾಗಿದೆ. ಮೇಲಾಗಿ, ಈ ಪುಸ್ತಕದ ಸಹಾಯದಿಂದ, ದೇಶ ವಿದೇಶಗಳಲ್ಲಿ ಲಕ್ಷಾಂತರ ಭಕ್ತರಿಂದ ದಿನನಿತ್ಯ ಈ ವ್ರತವು ಆಚರಿಸಲ್ಪಡುತ್ತಿದೆ. ಈ ವ್ರತಾಚರಣೆಯಿಂದ ಅನುಗೃಹೀತರಾಗಿ ಐಹಿಕಾಮುಷ್ಮಿಕ ಅಭಿಲಾಷೆಗಳನ್ನು ಈಡೇರಿಸಿಕೊಂಡು ಸಂತೃಪ್ತರಾದ ಅನೇಕ ಭಕ್ತಜನರಿಂದ ಪ್ರತಿನಿತ್ಯ ಫೋನ್‌ಕಾಲ್‌ಗಳು ಬರುತ್ತಲೇ ಇವೆ. ಎಷ್ಟೋ ಪತ್ರಗಳು, ಈ-ಮೇಲ್‌ಗಳು ಸಹ ಸಾಗರೋಪಾದಿಯಲ್ಲಿ ಬರುತ್ತಿವೆ. ಪ್ರತಿ ಶನಿವಾರ, ವಿಶ್ವಾದ್ಯಂತ ಲಕ್ಷಾಂತರ ಜನರು ಈ ಕೌತುಕಮಯ ಕಥೆಗಳನ್ನು ಓದುತ್ತಿದ್ದಾರೆ. ಅದರಿಂದ ಅವರ ಜೀವನವು ಅತ್ಯಂತ ಸುಖ, ಸಂತೃಪ್ತಿ, ಸಂತೋಷಗಳಿಂದ ಸಾಗುತ್ತಿರುವುದಾಗಿ ಹೇಳಿಕೊಳ್ಳುತ್ತಿದ್ದಾರೆ. ಶ್ರೀ ಶ್ರೀನಿವಾಸನು ಅತ್ಯಂತ ದಯಾಮಯನು, ಕರುಣಾಶಾಲಿಯು. ತನ್ನ ಭಕ್ತರೆಂದರೆ ಸ್ವಾಮಿಗೆ ಎಣೆಯಿಲ್ಲದ ಅನುರಾಗ, ಆಪ್ಯಾಯತೆ ಮತ್ತು ಪ್ರೀತಿ. ಈ ದಿನಗಳಲ್ಲಿ, ವಿಶ್ವಾದ್ಯಂತ ಈ ವ್ರತವು ಲಕ್ಷೋಪಲಕ್ಷ ಭಕ್ತರಿಂದ ಅನುಸರಿಸಲ್ಪಡುತ್ತಿರುವುದು, ಆಚರಿಸಲ್ಪಡುತ್ತಿರುವುದು ಮತ್ತು ಪ್ರಚಾರವನ್ನು ಪಡೆಯುತ್ತಿರುವುದು ಶ್ರೀ ಶ್ರೀನಿವಾಸನ ಕೃಪಾಕಟಾಕ್ಷವಲ್ಲದೆ ಮತ್ತೇನು!

ಶ್ರೀ ಶ್ರೀನಿವಾಸನಿಗೆ ತನ್ನ ಭಕ್ತರೆಂದರೆ ಅತಿಶಯವಾದ ಪ್ರೀತಿ. ತಮ್ಮೆಲ್ಲ ಅಹಂಕಾರವನ್ನು ತೊರೆದು, ಇಹಲೋಕದ ವಿಷಯಾಸಕ್ತಿಗಳನ್ನು ಕಡೆಗಣಿಸಿ ಶ್ರೀ ಶ್ರೀನಿವಾಸನನ್ನು ಅನನ್ಯ ಭಕ್ತಿಯಿಂದ ಪ್ರಾರ್ಥಿಸಿದರೆ ಅವನು ತನ್ನ ಭಕ್ತರ ಸರ್ವಾಭೀಷ್ಟಗಳನ್ನು ನೆರವೇರಿಸುತ್ತಾನೆ

ಮತ್ತು ಅವರ ಪರಿಪೂರ್ಣ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಾನೆ. ಕಲಿಯುಗದಲ್ಲಿ ಶ್ರೀ ಶ್ರೀನಿವಾಸನಿಗೆ ಮಿಗಿಲಾದ ಅನ್ಯ ದೇವರಿಲ್ಲ. ಪ್ರತಿನಿತ್ಯ ಸಹಸ್ರಾರು ಸಂಖ್ಯೆಯಲ್ಲಿ ಬಂದು ಸ್ವಾಮಿಯ ಕ್ಷಣಮಾತ್ರದ ದರ್ಶನಭಾಗ್ಯವನ್ನು ಪಡೆಯುತ್ತಿರುವುದು ಜನರಿಗೆ ಆತನ ಮೇಲಿರುವ ನಂಬಿಕೆಗೆ ದ್ಯೋತಕವಾಗಿದೆ. ಪ್ರತಿನಿತ್ಯ ಸಹಸ್ರಾರು ಭಕ್ತರು ಆತನನ್ನು ನೋಡುತ್ತಾರೆ, ಪ್ರಾರ್ಥಿಸುತ್ತಾರೆ, ಆರಾಧಿಸುತ್ತಾರೆ.

ಶ್ರೀ ಶ್ರೀನಿವಾಸನ ಲೀಲೆಗಳು ಅನಂತಾದ್ಭುತ. ಶ್ರೀ ಶ್ರೀನಿವಾಸನನ್ನು ಮನಸಾರೆ ಒಮ್ಮೆ ನೆನೆದರೆ ಆ ಮಹಾಮಹಿಮನು ನಮ್ಮ ದೃಷ್ಟಿಗೆ ಗೋಚರಿಸುವುದಿಲ್ಲ. ಶ್ರೀ ಶ್ರೀನಿವಾಸನ ಮಹಿಮೆಯನ್ನು ಅರ್ಥಮಾಡಿಕೊಂಡರೆ ದೊರೆಯುವ ಆನಂದ, ಆತ್ಮತೃಪ್ತಿ ಬ್ರಹ್ಮಾನಂದಕ್ಕೆ ಸಮಾನವಾದುದು.

ಶ್ರೀ ವೇಂಕಟೇಶ್ವರ ವ್ರತಕಲ್ಪವೇಂದು ಕರೆಯಲಾದ ಈ ವ್ರತವು ಶ್ರೀ ಶ್ರೀನಿವಾಸನ ಅನುಗ್ರಹ ವಿಶೇಷದಿಂದಲೇ ರಚಿಸಲ್ಪಟ್ಟಿದೆ. ಕಲಿಯುಗದಲ್ಲಿ ಎಲ್ಲ ಮಾನವರೂ ಅನೇಕಾನೇಕ ಬಾಧೆಗಳನ್ನು ಪ್ರತಿಕ್ಷಣದಲ್ಲಿ ಅನುಭವಿಸುತ್ತಿರುವರು. ಈ ವ್ರತವನ್ನು ಒಮ್ಮೆ ಆಚರಿಸಿದರೆ ಸಾಕು, ಮಾನವರು ತಮ್ಮೆಲ್ಲ ಬಾಧೆಗಳಿಂದ ಮುಕ್ತರಾಗುತ್ತಾರೆ, ಸುಖ, ಶಾಂತಿ ನೆಮ್ಮದಿಗಳನ್ನು ಹೊಂದುತ್ತಾರೆಂಬುದರಲ್ಲಿ ಸಂಶಯವಿಲ್ಲ.

ಶ್ರೀ ವೇಂಕಟೇಶ್ವರ ವ್ರತಕಲ್ಪದ ಮೊದಲ ಅಧ್ಯಾಯವನ್ನು ಪರಮಪಾವನವಾದ ತಿರುಮಲ ಬೆಟ್ಟದ ಮೇಲೇ ರಚಿಸಲ್ಪಟ್ಟಿತು. ಉಳಿದ ನಾಲ್ಕು ಅಧ್ಯಾಯಗಳು ಮಹಾ ಯೋಗೀಶ್ವರರಾದ ವಿಶ್ವಾಮಿತ್ರ ಮಹರ್ಷಿ, ಭಾರದ್ವಾಜ ಮಹರ್ಷಿ, ವಸಿಷ್ಠ ಮಹರ್ಷಿ ಹಾಗೂ ಅತ್ರಿ ಮಹರ್ಷಿಗಳ ಅನುಗ್ರಹದಿಂದ ರಚಿಸಲ್ಪಟ್ಟವು. ಅಂತಹ ಮಹನೀಯರ ಅನುಗ್ರಹ ದೊರೆತುದು ಜನ್ಮಜನ್ಮಾಂತರಗಳ ಪುಣ್ಯವಿಶೇಷವಲ್ಲದೆ ಮತ್ತೇನು!

ಈ ಅಧ್ಯಾಯವನ್ನು ಬರೆಯುವಾಗ ನನಗಾದ ಅನುಭವವೂ ಒಂದು ಅದ್ಭುತ. ಇದನ್ನು ಬರೆಯುತ್ತಿದ್ದಷ್ಟು ಸಮಯವೂ ಶ್ರೀ ಶ್ರೀನಿವಾಸನ ಚರಣಕಮಲಗಳ ಸ್ಪರ್ಷಾನುಭವ, ಆತನ ಪ್ರಾರ್ಥನೆಯು ಮನದಾಳದಲ್ಲಿ ಸ್ಫುರಿಸುತ್ತಲೇ ಇದ್ದು ಬರವಣಿಗೆಯು ನಿರಾತಂಕವಾಗಿ ಸಾಗುತ್ತಿತ್ತು. ಇದೊಂದು ವಿಶಿಷ್ಠ ಅನುಭವ, ಅವರ್ಣನೀಯ ಸಂತಸ.

ಶ್ರೀ ವೇಂಕಟೇಶ್ವರ ವ್ರತಕಲ್ಪವನ್ನು ಆಚರಿಸುವುದು ಅತ್ಯಂತ ಸರಳ ಹಾಗೂ ಸುಲಭ. ಸಾಕ್ಷಾತ್ ಶ್ರೀ ಶ್ರೀನಿವಾಸನ ಅನುಗ್ರಹದಿಂದಲೇ ಹೊರಹೊಮ್ಮಿರುವ ಈ ವ್ರತವನ್ನು ಯಥಾಶಕ್ತಿ, ಯಥಾಮತಿ ಆಚರಿಸಬಹುದು. ಎಂತಹ ಕಷ್ಟಗಳು ಎದುರಾದರೂ, ಈ ವ್ರತಾಚರಣೆಯ ಅಲ್ಪ ಸಮಯದಲ್ಲೇ ಅವುಗಳೆಲ್ಲ ದೂರವಾಗುವುವು. ಆದರೆ, ವ್ರತಾಚರಣೆಗೆ ಭಕ್ತಿಯೇ ಪ್ರಧಾನ. ಭಕ್ತಿರಹಿತ ವ್ರತಾಚರಣೆಯಿಂದ ಯಾವ ಪ್ರಯೋಜನವೂ ಇಲ್ಲ. ಪ್ರಶಾಂತ ಚಿತ್ತದಿಂದ ಪರಮಾತ್ಮನನ್ನು ಪೂಜಿಸಿ, ಮನಸ್ಸಿನಲ್ಲಿ ಆತನ ಪಾದಸ್ಮರಣೆಯನ್ನು ಮಾಡುತ್ತಾ ವ್ರತವನ್ನು ಆಚರಿಸಿದಲ್ಲಿ, ಸ್ವಾಮಿಯೂ ತಕ್ಷಣ ಅನುಗ್ರಹಿಸುತ್ತಾನೆಂಬುದರಲ್ಲಿ ಸಂಶಯವಿಲ್ಲ.

ಕಲಿಯುಗ ನಿವಾಸಿಗಳ ಜನರ ಸಂಕಷ್ಟ, ಪ್ರಾಪಂಚಿಕ ಹಾಗೂ ಸಾಮಾಜಿಕ ಕಟ್ಟುಪಾಡು, ಪರಿಮಿತಿಗಳು ಮತ್ತು ನಿರ್ಬಂಧಗಳು ಶ್ರೀಮನ್ನಾರಾಯಣನಿಗೆ ಅರಿವಿದೆ. ಆದ್ದರಿಂದ, ನಮ್ಮೆಲ್ಲ ಸಂಕಷ್ಟಗಳಿಂದ ಬಿಡುಗಡೆ ಪಡೆಯಲು ಆ ಶ್ರೀನಿವಾಸನನ್ನೇ ಮೊರೆಹೋಗದೆ, ಭಕ್ತಿಯಿಂದ ಪೂಜಿಸದೆ, ನಮ್ಮ ಅಹವಾಲುಗಳನ್ನು ಹೇಳಿಕೊಳ್ಳದೆ ಅನ್ಯೋಪಾಯಗಳಿಲ್ಲ. ಆತನನ್ನು ಮೆಚ್ಚಿಸಲು ಶ್ರೀ ವೇಂಕಟೇಶ್ವರ ವ್ರತಕಲ್ಪವು ಅತ್ಯಂತ

ಸುಲಭೋಪಾಯವಾಗಿರುವುದು. ಈ ವ್ರತವನ್ನು ಆಚರಿಸುವವರಿಗೂ, ವ್ರತಕಥೆಗಳನ್ನು ಕೇಳುವವರಿಗೂ ಮತ್ತು ಪ್ರಸಾದವನ್ನು ಸ್ವೀಕರಿಸುವವರಿಗೂ ಶ್ರೀ ಶ್ರೀನಿವಾಸನ ವಿಶೇಷ ಅನುಗ್ರಹವಾಗುವುದರಲ್ಲಿ ಯಾವ ಸಂಶಯವೂ ಇಲ್ಲ. ಎಲ್ಲ ಜನರ ಕಷ್ಟಕಾರ್ಪಣ್ಯಗಳು ಕ್ಷಣಮಾತ್ರದಲ್ಲಿ ಸೋಜಿಗದಂತೆ ಕರಗಿಹೋಗುತ್ತವೆ.

ಪರಮಾತ್ಮನಲ್ಲಿ ಭಕ್ತಿಮಾಡಲು ಯಾವ ಚೌಕಟ್ಟೂ ಇರುವುದಿಲ್ಲ. ದೊಡ್ಡ ಭಕ್ತ ಅಥವಾ ಸಣ್ಣ ಭಕ್ತರೆಂಬ ಯಾವ ಭೇದಗಳೂ ಇಲ್ಲ. ಭಕ್ತಿಯೆಂಬುದು ಒಂದು ಅಮೃತ ಭಾವನೆ. ಭಕ್ತ–ಭಗವಂತರ ನಡುವಿನ ಸಂಬಂಧ ಅಪ್ರಮೇಯವಾದುದು, ಅನೂಹ್ಯವಾದುದು ಮತ್ತು ಅಚಿಂತ್ಯವಾದುದು. ಎಲ್ಲ ಜನರ ಭಕ್ತಿಗೆ ಮೂಲ ಉಪಾಸಕನೇ ಪರಮಪುರುಷನಾದ ಶ್ರೀಮನ್ನಾರಾಯಣ. ಶ್ರೀ ಶ್ರೀನಿವಾಸನ ಆಪ್ತರಾದ ತಮಗೆಲ್ಲರಿಗೂ ನನ್ನ ಸಪ್ರೇಮ ನಮನಗಳು.

ಶ್ರೀ ಶ್ರೀನಿವಾಸನಿಗೆ ಅತ್ಯಂತ ಪ್ರಿಯವಾದ ಈ ವ್ರತಕಲ್ಪವನ್ನು ರಚಿಸಿ ಭಗವದ್ಭಕ್ತರಿಗೆ ನೀಡುವ ಪರಮಪಾವನವಾದ ಈ ಕಾರ್ಯಕ್ಕಿಂತ ಮಿಗಿಲಾದ ಪುಣ್ಯಕಾರ್ಯವು ಮತ್ತ್ಯಾವುದಿರಲು ಸಾಧ್ಯ? ಇದಕ್ಕಿಂತ ಉತ್ತಮ ಕಾರ್ಯ ಬೇರೆ ಇರಲು ಸಾಧ್ಯವೇ? ಇಂತಹ ಸೇವಾಭಾಗ್ಯವನ್ನು ನನಗೆ ಕರುಣಿಸಿರುವ ಆ ಶ್ರೀ ಶ್ರೀನಿವಾಸನಿಗೆ ನನ್ನ ಅನಂತಾನಂತ ಪ್ರಣಾಮಗಳು. ಶ್ರೀ ಶ್ರೀನಿವಾಸನ ಸೇವೇಯಲ್ಲಿರುವಂತಹ ಆಸಕ್ತಿ, ನೆಮ್ಮದಿ, ಶ್ರೀ ವೇಂಕಟತತ್ತ್ವವನ್ನು ಎಲ್ಲ ಜನರ ಹೃದಯಗಳಿಗೆ ಹತ್ತಿರ ತೆಗೆದುಕೊಂಡುಹೋಗುವಂತಹ ಇಂತಹ ಪ್ರಯತ್ನದಲ್ಲಿ ನನ್ನ ಜೀವಿತವು ಸತತ ನಿರತವಾಗಿರಲೆಂದು ಆ ಸ್ವಾಮಿಯಲ್ಲಿ ಪ್ರಾರ್ಥಿಸುತ್ತೇನೆ.

ಈ ವ್ರತಕಲ್ಪದ ರಚನೆಯಲ್ಲಿ ಪ್ರತ್ಯಕ್ಷವಾಗಿ ಶ್ರೀ ಶ್ರೀನಿವಾಸ ಸ್ವಾಮಿಯ ವಿಶೇಷ ಭಕ್ತರೂ, ಶ್ರೀ ವೇಂಕಟತತ್ತ್ವ ಪ್ರಚಾರಕಾರ್ಯದಲ್ಲಿ ತುಂಬಾ ಆಸಕ್ತರೂ ಆದ ಶ್ರೀಮತಿ ರಾಧಿಕ ದಾಸು ಹಾಗೂ ಶ್ರೀ ತ್ರಿವಿಕ್ರಮ ದಾಸು ದಂಪತಿಗಳನ್ನು ಮತ್ತು ಅಪೂರ್ವ ಕನ್ನಡ ಭಾಷೆಗೆ ತರ್ಜಮೆ ಮಾಡಿದ ಶ್ರೀ ಎಸ್. ದ್ವಾರಕಾನಾಥ್ ಶಿವಮೊಗ್ಗ ಅವರಿಗೂ, ಈ ಪುಸ್ತಕವನ್ನು ಹೊರತರಲು ತಮ್ಮ ಅಮೂಲ್ಯ ಸಮಯ, ಸಲಹೆ ನೀಡಿದ ಶ್ರೀಮತಿ ವಸುಧಾ ಸಂಜಯ ಕಾಮತರಿಗೆ ನಾನು ಹೃತ್ಪೂರ್ವಕ ವಂದನೆಗಳನ್ನು ಅರ್ಪಿಸುತ್ತೇನೆ. ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿರುವ ವೀನಸ್ ಪ್ರಿಂಟರ್ಸ್‌ನ ಮಾಲೀಕರಾದ ವಿ. ಕಾರ್ತಿಕೇಯನ್ ಮತ್ತು ಅವರ ಸಿಬ್ಬಂದಿವರ್ಗದವರಿಗೂ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ. ಪರೋಕ್ಷವಾಗಿ ಸಹಕರಿಸಿರುವ ಸರ್ವರಿಗೂ, ವ್ರತವನ್ನು ಆಚರಿಸಿರುವ ತಮಗೂ, ವ್ರತಕಥೆಯನ್ನು ಹೇಳಿದ/ ಕೇಳಿದವರಿಗೂ, ಪ್ರಸಾದವನ್ನು ಸ್ವೀಕರಿಸಿದವರಿಗೂ ಆ ಶ್ರೀ ಲಕ್ಷ್ಮೀ ಶ್ರೀನಿವಾಸರು ಸಕಲ ಸೌಭಾಗ್ಯ, ಆಯುರಾರೋಗ್ಯಗಳನ್ನೂ ಅನುಗ್ರಹಿಸುವನೆಂದು ನಂಬಿರುತ್ತೇನೆ ಮತ್ತು ಆತನಲ್ಲಿ ಪ್ರಾರ್ಥಿಸುತ್ತೇನೆ.

ಸರ್ವೇ ಜನಾಃ ಸುಖಿನೋ ಭವಂತು ॥

ಶ್ರಿಯಃ ಕಾಂತಾಯ ಕಲ್ಯಾಣ ನಿಧಯೇ ನಿಧಯೇಽರ್ಥಿನಾಮ್ ।

ಶ್ರೀ ವೇಂಕಟನಿವಾಸಾಯ ಶ್ರೀನಿವಾಸಾಯ ಮಂಗಳಂ ॥

ಹೈದರಾಬಾದ್ ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿ
ದಿನಾಂಕ: 16–1–2021

# ವ್ರತಾಚರಣೆಯ ವಿಧಾನ

ಶ್ರೀ ವೇಂಕಟೇಶ್ವರ ವ್ರತಕಲ್ಪವನ್ನು ಪ್ರಮುಖವಾಗಿ ಎರಡು ರೀತಿಯಲ್ಲಿ ಆಚರಿಸಬಹುದು. ಪ್ರಥಮ ಪದ್ಧತಿಯಲ್ಲಿ ವಿವಾಹ, ಗೃಹಪ್ರವೇಶ, ನೂತನ ವ್ಯಾಪಾರಾರಂಭ ಮುಂತಾದ ಶುಭ ಕಾರ್ಯಗಳ ನಿಮಿತ್ತ ಪುರೋಹಿತರಿಂದ ಕಲಶಸ್ಥಾಪನೆಯನ್ನು ನೆರವೇರಿಸುವ ಮೂಲಕ ಸವಿಸ್ತಾರವಾಗಿ ಶ್ರೀ ವೇಂಕಟೇಶ್ವರ ವ್ರತಕಲ್ಪವನ್ನು ಆಚರಿಸುವುದು ರೂಢಿಯಲ್ಲಿದೆ. ಎರಡನೇ ಪದ್ಧತಿಯಲ್ಲಿ ವ್ರತಾಕಾಂಕ್ಷಿಗಳು ಸ್ನಾನಮಾಡಿ, ಶುಚಿರ್ಭೂತರಾಗಿ ಕೇವಲ ವ್ರತಕಥೆಗಳನ್ನು ಪಠನಮಾಡಿದರೆ ಈ ವ್ರತವನ್ನು ಆಚರಿಸಿದ ಸಂಪೂರ್ಣ ಫಲವನ್ನು ಪಡೆಯಬಹುದು.

## ಪ್ರಥಮ ಪದ್ಧತಿ:

ಕಲಿಯುಗದಲ್ಲಿ ಶ್ರೀ ವೇಂಕಟೇಶ್ವರ ಸ್ವಾಮಿಯ ಅನುಗ್ರಹ ಪಡೆದುಕೊಳ್ಳಲು ಶ್ರೀ ವೇಂಕಟೇಶ್ವರ ವ್ರತಕಲ್ಪವನ್ನು ಆಚರಿಸುವುದು ಅತ್ಯಂತ ಸರಳ ಹಾಗೂ ಸುಲಭೋಪಾಯ. ಈ ವ್ರತವನ್ನು ಆಚರಿಸಿದ ಕೂಡಲೇ ಬೆಟ್ಟದಷ್ಟಿರುವ ಕಷ್ಟಗಳು ಮಂಜಿನಂತೆ ಕರಗಿಹೋಗುತ್ತವೆ. ಮೇಲಾಗಿ, ಸಾಕ್ಷಾತ್ ಶ್ರೀಮನ್ನಾರಾಯಣನಿಂದ ಅನುಗ್ರಹಿಸಲ್ಪಟ್ಟಿರುವ ಶ್ರೀ ವೇಂಕಟೇಶ್ವರ ವ್ರತಕಲ್ಪವನ್ನು ಆಚರಿಸುವುದು ಬಹಳ ಸುಲಭ. ಈ ವ್ರತಾಚರಣೆಯನ್ನು ಎಲ್ಲಾದರೂ, ಯಾವಾಗಲಾದರೂ ನೆರವೇರಿಸಿಕೊಳ್ಳಬಹುದು. ಆರ್ಥಿಕ ತೊಂದರೆ, ಅನಾರೋಗ್ಯ, ಸಾಂಸಾರಿಕ ಕಲಹ, ವೈಮನಸ್ಯ ಮುಂತಾದ ಯಾವುದೇ ದೈನಂದಿನ ಕಷ್ಟಗಳು ಎದುರಾದರೂ, ಈ ವ್ರತವನ್ನು ಭಕ್ತಿಭಾವದಿಂದ ಆಚರಿಸಿದರೆ, ಕೂಡಲೇ ಆ ಕಷ್ಟಗಳು ಪರಿಹಾರವಾಗುತ್ತವೆ. ಅಲ್ಲದೆ, ನಿಮ್ಮ ಕುಟುಂಬದಲ್ಲಿ ಕೈಗೊಳ್ಳಬಹುದಾದ ಯಾವುದೇ ಶುಭಕಾರ್ಯದ ಆರಂಭದಲ್ಲಿ ಈ ವ್ರತವನ್ನು ಆಚರಿಸಿದರೆ, ತಾವು ನಿಶ್ಚಯಿಸಿದ ಕಾರ್ಯವು ನಿರ್ವಿಘ್ನವಾಗಿ ಪೂರ್ಣಗೊಂಡು ನಿಮ್ಮ ಮನೋಭೀಷ್ಟಗಳು ನೆರವೇರುತ್ತವೆ. ಉದ್ಯೋಗ, ವ್ಯಾಪಾರಾಭಿವೃದ್ಧಿ ಮುಂತಾದ ಸಾತ್ವಿಕ ಕಾಮನೆಗಳ ಸಲುವಾಗಿಯೂ ಸಹ ಶ್ರೀ ವೇಂಕಟೇಶ್ವರ ವ್ರತಕಲ್ಪವನ್ನು ಆಚರಿಸಿ ಸಫಲರಾಗಬಹುದು.

ಈ ವ್ರತವನ್ನು ಯಾವಾಗಲಾದರೂ ಆಚರಿಸಬಹುದಾದರೂ ವಿಶೇಷವಾಗಿ ಮಾರ್ಗಶಿರ, ಮಾಘ ಹಾಗೂ ಕಾರ್ತೀಕ ಮಾಸಗಳಲ್ಲಿ, ಹುಣ್ಣಿಮೆ, ಪಂಚಮಿ, ಸಪ್ತಮೀ ಹಾಗೂ ಏಕಾದಶಿ ತಿಥಿಗಳಲ್ಲಿ ಅಥವಾ ಶ್ರವಣ, ಸ್ವಾತಿ ನಕ್ಷತ್ರಗಳಿರುವ ದಿನಗಳಲ್ಲಿ ಆಚರಿಸಿದರೆ ಶೀಘ್ರ ಹಾಗೂ ನಿಶ್ಚಿತ ಫಲವನ್ನು ಪಡೆಯಬಹುದು. ಈ ವ್ರತವು ಐದು ಅಧ್ಯಾಯಗಳಿಂದ ಕೂಡಿದೆ. ವಿಶೇಷವೆಂದರೆ, ಈ ವ್ರತದ ಪ್ರಥಮಧ್ಯಾಯವು ಸಾಕ್ಷಾತ್ ಶ್ರೀ ವೇಂಕಟೇಶ್ವರನೇ ಅನುಗ್ರಹಿಸಿರುವುದು. ಉಳಿದ ನಾಲ್ಕು ಅಧ್ಯಾಯಗಳು ಋಷಿವರೇಣ್ಯರಾದ, ಪ್ರಾತಃಸ್ಮರಣೀಯರಾದ ಗೋತ್ರಪ್ರವರ್ತಕರಾದ ಮಹರ್ಷಿ ವಿಶ್ವಾಮಿತ್ರ, ಬ್ರಹ್ಮರ್ಷಿ ವಸಿಷ್ಠರು, ಭಾರದ್ವಾಜ ಮುನಿಗಳು ಮತ್ತು ಅತ್ರಿ ಮಹಾಮುನಿಗಳು ಪ್ರವಚನ ಮುಖೇನ ಅನುಗ್ರಹಿಸಲ್ಪಟ್ಟವುಗಳಾಗಿವೆ. ಈ ವ್ರತವನ್ನು ಸ್ವಗೃಹದಲ್ಲಾಗಲೀ, ಶ್ರೀ ಶ್ರೀನಿವಾಸನ ದೇವಸ್ಥಾನದಲ್ಲಾಗಲೀ, ತೀರ್ಥಕ್ಷೇತ್ರಗಳಲ್ಲಾಗಲೀ, ಪವಿತ್ರ ನದೀ ತೀರಗಳಲ್ಲಾಗಲೀ ಅಥವಾ ಇತರ ಅನುಕೂಲಕರವಾದ ಆದರೆ ಉತ್ತಮವಾದ ಸ್ಥಳಗಳಲ್ಲಾಗಲೀ ಆಚರಿಸಬಹುದಾಗಿದೆ.

ಅನುಕೂಲವಿದ್ದಲ್ಲಿ, ತಮ್ಮ ಬಂಧುಮಿತ್ರರಿಂದೊಡಗೂಡಿ ಈ ವ್ರತವನ್ನು ಆಚರಿಸಬಹುದು. ಪ್ರಥಮತಃ, ಈ ವ್ರತವನ್ನು ಆಚರಿಸಲು ಉದ್ದೇಶಿಸಿರುವ ಸ್ಥಳವನ್ನು ಶುದ್ಧಿಗೊಳಿಸಿಕೊಳ್ಳಬೇಕು. ನಂತರ, ನಿರ್ದಿಷ್ಟ ಸ್ಥಳದ ಮಧ್ಯಭಾಗದಲ್ಲಿ ಮಂಟಪವೊಂದನ್ನು ನಿರ್ಮಿಸಬೇಕು. ಆ ಮಂಟಪದಲ್ಲಿ ಶ್ರೀ ವೇಂಕಟೇಶ್ವರ ಸ್ವಾಮಿಯ ಅಂದವಾದ ಚಿತ್ರಪಟವೊಂದನ್ನು ಸ್ಥಾಪಿಸಬೇಕು. ಉತ್ಸವಮೂರ್ತಿಯ ಶ್ರೀ ವೇಂಕಟೇಶ್ವರನ ಚಿತ್ರಪಟದಲ್ಲಿ ಪರಮಾತ್ಮನ ಪತ್ನಿಯರಾದ ಶ್ರೀದೇವಿ ಹಾಗೂ ಭೂದೇವಿಯರ ಸನ್ನಿಧಾನವಿದ್ದರೆ ಅತ್ಯಂತ ಶುಭಕರ. ಶ್ರೀ ವೇಂಕಟೇಶನ ಪ್ರತಿಮೆ ಅಥವಾ ಬೆಳ್ಳಿಯ ನಾಣ್ಯವನ್ನಾಗಲೀ ಚಿತ್ರಪಟದ ಮುಂಭಾಗದಲ್ಲಿ ಸ್ಥಾಪಿಸಬೇಕು. ನಂತರದಲ್ಲಿ ಕಲಶಸ್ಥಾಪನೆಯನ್ನು ಕೈಗೊಳ್ಳಬೇಕು.

ಶ್ರೀ ಸತ್ಯನಾರಾಯಣ ವ್ರತದಲ್ಲಿ ನಿರ್ಮಿಸಲಾಗುವ ಮಂಟಪವನ್ನೇ ಅನುಕರಿಸುವುದು ಉತ್ತಮ. ಅಂತೆಯೇ ಕಲಶ ಸ್ಥಾಪನೆಯನ್ನೂ ನೆರವೇರಿಸಿಕೊಳ್ಳಬೇಕು. ನವಗ್ರಹದೇವತೆಗಳನ್ನು ಹಾಗೂ ಅಷ್ಟದಿಕ್ಪಾಲಕರನ್ನು ಆರಂಭದಲ್ಲಿಯೆ ಆಹ್ವಾನಿಸಬೇಕು. ಪ್ರಥಮವಾಗಿ ಅರಿಶಿನದ ಶ್ರೀ ವಿನಾಯಕನನ್ನು ಸ್ಥಾಪಿಸಿ, ಪೂಜಿಸಿ, ವ್ರತಾಚರಣೆಯಲ್ಲಿ ಯಾವುದೇ ವಿಘ್ನಗಳು ಎದುರಾಗದಂತೆ ಅನುಗ್ರಹಿಸಬೇಕೆಂದು ಶ್ರೀ ವಿನಾಯಕನಲ್ಲಿ ಪ್ರಾರ್ಥನೆಯನ್ನು ಸಲ್ಲಿಸಬೇಕು. ಐದು ಅಧ್ಯಾಯಗಳನ್ನು ಓದಿ, ಅತ್ಯಂತ ಭಕ್ತಿ ಹಾಗೂ ಶ್ರದ್ಧೆಗಳಿಂದ ಈ ವ್ರತವನ್ನು ಆಚರಿಸಿದಲ್ಲಿ, ಶ್ರೀ ಶ್ರೀನಿವಾಸನು ಸ್ವತಃ ತನ್ನ ಬಂಧುಗಳ ರೂಪದಲ್ಲಾಗಲಿ, ಅಪರಿಚಿತ ಅತಿಥಿಗಳ ರೂಪದಲ್ಲಾಗಲಿ, ಕ್ರಿಮಿಕೀಟಗಳ ರೂಪದಲ್ಲಾಗಲಿ, ಜಂತುಗಳ ರೂಪದಲ್ಲಾಗಲಿ ಆಗಮಿಸಿ ಪ್ರಸಾದ ಸ್ವೀಕರಿಸುವನೆಂದು ಶ್ರೀ ಶ್ರೀನಿವಾಸನೇ ಆದೇಶಿಸಿದ್ದಾನೆ.

ಪ್ರತಿ ಅಧ್ಯಾಯವು ಪೂರ್ಣಗೊಂಡಾಗ, ಶ್ರೀ ವೇಂಕಟೇಶನಿಗೆ ಒಂದು ನಾರಿಕೇಳಫಲ (ತೆಂಗಿನಕಾಯಿ)ವನ್ನು ನಿವೇದಿಸಿ ನೈವೇದ್ಯ ಮಾಡಬೇಕು. ವ್ರತಕಲ್ಪದ ಎಲ್ಲ ಅಧ್ಯಾಯಗಳೂ ಪೂರ್ಣಗೊಂಡನಂತರ ಗೋಧಿರವೆ ಮತ್ತು ಸಕ್ಕರೆ ಮಿಶ್ರಿತ ಮೃದುಪ್ರಸಾದವನ್ನು ನಿವೇದಿಸಬೇಕು. ಅದರಲ್ಲಿ ಬಾಳೇಹಣ್ಣಿನ ಸಣ್ಣಸಣ್ಣ ಹೋಳುಗಳನ್ನು ಹಾಕಲೇಬೇಕು. ವ್ರತಕಥಾ ಪಠಣ/ಶ್ರವಣ ಪೂರ್ಣವಾದ ನಂತರ ಗೋವಿಂದಾ, ಗೋವಿಂದಾ, ಗೋವಿಂದಾ ಎಂದು ಶ್ರೀಹರಿಯ ಸ್ಮರಣೆಯನ್ನು ಮೂರುಬಾರಿ ಗಟ್ಟಿಯಾಗಿ ಉಚ್ಚರಿಸುವ ಮೂಲಕ ಮಾಡಬೇಕು. ಈ ಪ್ರಥಮ ಪದ್ಧತಿಯು ಮಕ್ಕಳ ಅನ್ನಪ್ರಾಶನ, ನಾಮಕರಣ, ಉಪನಯನ, ವಿವಾಹ, ಗೃಹಪ್ರವೇಶ, ವ್ಯಾಪಾರಾರಂಭ ಮುಂತಾದ ಶುಭಸಂದರ್ಭಗಳಲ್ಲಿ ಮಾಡುವುದರಿಂದ ಕೈಗೊಂಡ ಕಾರ್ಯಗಳು ಸಿದ್ಧಿಸುತ್ತವೆ ಮತ್ತು ಸಫಲವಾಗಿ ನೆರವೇರುತ್ತವೆ.

## ಎರಡನೇ ಪದ್ಧತಿ:

ಸಾಕ್ಷಾತ್ ಶ್ರೀ ಶ್ರೀನಿವಾಸನೇ ಆದೇಶಿಸಿರುವ ಮತ್ತೊಂದು ಮಹತ್ವದ ವಿಚಾರವೇನೆಂದರೆ, ಯಾರಿಗಾದಾರೂ ಯಾವುದೇ ಕಷ್ಟಗಳು ಎದುರಾದಾಗ ವಿಸ್ತೃತ ವ್ರತಾಚರಣೆಗೆ ಅನುಕೂಲವಿಲ್ಲದಿದ್ದಲ್ಲಿ ಈ ಎರಡನೇ ಪದ್ಧತಿಯಲ್ಲಿಯೂ ಶ್ರೀ ವೇಂಕಟೇಶ ವ್ರತಕಲ್ಪದ ಆಚರಣೆಯನ್ನು ಶ್ರದ್ಧಾಭಕ್ತಿಗಳಿಂದ ಆಚರಿಸಿ ಪರಮಾತ್ಮನ ವಿಶೇಷ ಕೃಪೆಗೆ ಪಾತ್ರರಾಗಬಹುದು ಮತ್ತು ಎಲ್ಲ ದುರಿತಗಳ ನಿವಾರಣೆಯನ್ನು ಶ್ರೀ ಶ್ರೀನಿವಾಸನ ಅನುಗ್ರಹದಿಂದ ಮಾಡಿಕೊಳ್ಳಬಹುದು.

ಮನೆಯಲ್ಲೇ ಕುಳಿತು, ಈ ಕಥೆಯನ್ನು ಮನಸ್ಸಿನಲ್ಲೇ ಪ್ರತಿ ಶನಿವಾರ ಪಠಿಸುವುದರಿಂದ (ಅಧ್ಯಯನ ಮಾಡುವುದರಿಂದ) ಸಂಸಾರದಲ್ಲಿ ಸುಖ–ಸಂತೋಷಗಳನ್ನು ಅನುಭವಿಸಲು ಸಾಧ್ಯವಾಗುತ್ತದೆ. ಈಗಾಗಲೇ ಈ ರೀತಿಯ ಅರ್ಚನೆ/ಆಚರಣೆಯನ್ನು ಪ್ರಪಂಚದಾದ್ಯಂತ ಲಕ್ಷಾಂತರ ಜನರು ಕೈಗೊಂಡು ಅನುಗೃಹೀತರಾಗಿರುವುದು ನಮ್ಮ ಗಮನಕ್ಕೆ ಬಂದಿರುತ್ತದೆ.

ಈ ಪದ್ಧತಿಯು ಅತ್ಯಂತ ಸುಲಭಮಾರ್ಗವಾಗಿದ್ದು ಈ ರೀತಿಯ ಆಚರಣೆಯಿಂದಲೂ ಶ್ರೀ ಶ್ರೀನಿವಾಸನ ಪೂರ್ಣಾನುಗ್ರಹಕ್ಕೆ ಪಾತ್ರರಾಗುವುದರಲ್ಲಿ ಸಂಶಯವಿಲ್ಲ. ಈ ವ್ರತವನ್ನು ಆಚರಿಸಲು ನಿಶ್ಚಯಪಡಿಸಿದ ದಿನದಂದು ಪ್ರಾತಃಕಾಲದಲ್ಲಿ ಎದ್ದು ದೈನಂದಿನ ಚಟುವಟಿಕೆಗಳು ಮುಗಿದ ಕೂಡಲೇ ಸ್ನಾನವನ್ನು ಮಾಡಿ ತಮ್ಮ ಮನೆಯ ದೇವರ ಕೋಣೆಯಲ್ಲಿ ಅಥವಾ ದೇವರನ್ನಿಟ್ಟಿರುವ ಸ್ಥಳದಲ್ಲಿ, ಶ್ರೀ ಶ್ರೀನಿವಾಸನ ಚಿತ್ರಪಟವನ್ನಿಟ್ಟು, ಆತನ ಮುಂದೆ ಧ್ಯಾನಾಸನದಲ್ಲಿ ಕುಳಿತುಕೊಂಡು, ಕಣ್ಣುಗಳನ್ನು ಮುಚ್ಚಿಕೊಂಡು ಕೈಗಳಿಂದ ಮುಗಿಯುತ್ತಾ ತಾವು ಕೈಗೊಂಡಿರುವ ವ್ರತವನ್ನು ನಿರ್ವಿಘ್ನವಾಗಿ ನೆರವೇರಿಸಿಕೊಡಬೇಕೆಂದು ಶ್ರೀ ವಿನಾಯಕನನ್ನು ಮನಸಾ ಪ್ರಾರ್ಥಿಸಬೇಕು. ಜೊತೆಯಲ್ಲಿ, ಅಷ್ಟದಿಕ್ಪಾಲಕರನ್ನು ಮತ್ತು ನವಗ್ರಹದೇವತೆಗಳನ್ನು ನಮಸ್ಕರಿಸಿ ಅವರನ್ನೂ ತಮ್ಮ ವ್ರತದಲ್ಲಿ ಉಪಸ್ಥಿತರಿರುವಂತೆ ಪ್ರಾರ್ಥಿಸಬೇಕು. ಸಾಧ್ಯವಾದರೆ, ಶ್ರೀ ವೇಂಕಟೇಶ್ವರ, ಶ್ರೀ ಮಹಾಲಕ್ಷ್ಮೀ ಮತ್ತು ಶ್ರೀ ಪದ್ಮಾವತಿಯರ ಅಷ್ಟೋತ್ತರ ಸ್ತೋತ್ರಗಳನ್ನು ಪಠಿಸುವುದು ಉತ್ತಮ. ಇವೆಲ್ಲದರ ನಂತರ ಮನಃಪೂರ್ವಕವಾಗಿ, ಭಕ್ತಿಭಾವದಿಂದ ಶ್ರೀ ವೇಂಕಟೇಶ್ವರ ವ್ರತಕಲ್ಪದ ಐದು ಅಧ್ಯಾಯಗಳನ್ನು ಪಠಿಸಬೇಕು. ಪ್ರತಿ ಅಧ್ಯಾಯದ ನಂತರ ತೆಂಗಿನಕಾಯಿಯನ್ನು ಸಮರ್ಪಿಸಲು ಸಾಧ್ಯವಾಗದಿದ್ದಲ್ಲಿ ಐದೂ ಅಧ್ಯಾಯಗಳು ಪೂರ್ಣಗೊಂಡನಂತರ ಒಂದು ತೆಂಗಿನಕಾಯಿ ಇಲ್ಲವೇ ಯಾವುದಾದರೂ ಉತ್ತಮವಾದ ಫಲ (ಹಣ್ಣು)ವನ್ನು ಪರಮಾತ್ಮನಿಗೆ ನಿವೇದಿಸಬೇಕು. ಅಥವಾ ಆಗಲೇ ತಯಾರಾದ ಪಾಯಸದಂತಹ ಸಿಹಿ ಪದಾರ್ಥವನ್ನೂ ನಿವೇದಿಸಬೇಕು.

ಇಂತಹ ಯಾವ ಸಮರ್ಪಣೆಯು ಸಾಧ್ಯವಾಗದಿದ್ದಲ್ಲಿ, ಅಲ್ಪಪ್ರಮಾಣದ ಸಕ್ಕರೆಯನ್ನು ಪರಮಾತ್ಮನಿಗೆ ನಿವೇದಿಸಿದರೂ ಸ್ವಾಮಿಯು ತೃಪ್ತನಾಗುತ್ತಾನೆ ಮತ್ತು ಅನುಗ್ರಹಿಸುತ್ತಾನೆ. ಆದರೆ, ಎಲ್ಲ ಅನುಕೂಲಗಳಿದ್ದೂ, ಕೇವಲ ಅಪನಂಬಿಕೆಯಿಂದಲೋ, ಮತ್ತೊಬ್ಬರ ಒತ್ತಾಯಕ್ಕೋ, ಆಡಂಬರಕ್ಕೋ ವ್ರತಾಚರಣೆಯಲ್ಲಿ ಶ್ರದ್ಧೆ, ಭಕ್ತಿಗಳಿಲ್ಲದೆ, ಕೇವಲ ಮತ್ತೊಬ್ಬರನ್ನು ಸಂತೋಷಗೊಳಿಸುವುದಕ್ಕೆಂದೋ ಅಸಮಾಧಾನದಿಂದ ವ್ರತವನ್ನು ಆಚರಿಸುವುದಾಗಲಿ, ಅದರ ಆಚರಣೆಯಲ್ಲಿ ಲೋಪವುಂಟಾಗುವುದಾಗಲೀ ಆಗಬಾರದು. ನಮ್ಮ ಕೈಲಾದಷ್ಟು ಮಟ್ಟಿಗೆ, ನಿಸ್ಸಂಕೋಚವಾಗಿ ವ್ರತವನ್ನು ಆಚರಿಸಬೇಕು. ಶ್ರೀ ಶ್ರೀನಿವಾಸನು ಕೇವಲ ಭಕ್ತಿಯಿಂದ ತೃಪ್ತನಾಗುತ್ತಾನೆ. ಈ ವ್ರತವನ್ನು ಪತಿ–ಪತ್ನಿಯರಿಬ್ಬರೂ ಒಂದಾಗಿ ಆಚರಿಸಬಹುದು. ಉದ್ಯೋಗದ ಅಡಚಣೆಗಳಿದ್ದಲ್ಲಿ ಪತಿ ಹಾಗೂ ಪತ್ನಿಯು ಬೇರೆಬೇರೆಯಾಗಿಯೂ ಈ ವ್ರತವನ್ನು ತಮ್ಮ ಅನುಕೂಲಕ್ಕೆ ಸಾಧ್ಯವಾದ ರೀತಿಯಲ್ಲಿ ಆಚರಿಸಬಹುದು. ಈ ವ್ರತವನ್ನಾಚರಿಸುವ ದಿನ ಉಪವಾಸವಿರಬೇಕೆಂಬ ಕಟ್ಟುಪಾಡಿರುವುದಿಲ್ಲ. ಈ ವ್ರತವನ್ನು ನಿರ್ದಿಷ್ಟ ಸಂಖ್ಯೆಯ ವಾರಗಳಷ್ಟು ಬಾರಿ ಆಚರಿಸಬೇಕೆಂಬ ನಿಯಮವೂ ಇರುವುದಿಲ್ಲ. ಅನುಕೂಲವಿದ್ದಷ್ಟು ಬಾರಿ ಈ ವ್ರತವನ್ನು ಆಚರಿಸಬಹುದು.

ಶ್ರೀ ಶ್ರೀನಿವಾಸನಿಗೆ ತುಳಸೀದಳ ಅತ್ಯಂತ ಪ್ರಿಯ. ಆದ್ದರಿಂದ, ಶ್ರೀ ಶ್ರೀನಿವಾಸನ ಪೂಜಾಸಮಯದಲ್ಲಿ ಎಲ್ಲಕ್ಕಿಂತ ಮುಖ್ಯವಾಗಿ ತುಳಸೀದಳವನ್ನು ಅರ್ಪಿಸಿದರೆ ವಿಶೇಷ ಫಲ ಪ್ರಾಪ್ತವಾಗುತ್ತದೆ. ಶ್ರೀ ವೇಂಕಟೇಶ್ವರ ವ್ರತಕಲ್ಪವು ಪೂರ್ಣಗೊಂಡಮೇಲೆ ಪರಮಾತ್ಮನಿಗರ್ಪಿಸಿದ ತುಳಸೀದಳಗಳನ್ನು ಎಲ್ಲರೂ ಸ್ವೀಕರಿಸಿದರೆ ಎಲ್ಲ ರೋಗಗಳು ಪರಿಹಾರವಾಗಿ, ಆಯುರ್ವೃದ್ಧಿಯಾಗಿ ಅಷ್ಟೈಶ್ವರ್ಯಗಳು ಲಭಿಸುತ್ತವೆ. ವ್ರತವು ಪರಿಸಮಾಪ್ತಿಯಾದ ನಂತರ ತೆಂಗಿನಕಾಯಿಯನ್ನು ಒಡೆದು, ಅದರ ತುಂಡುಗಳನ್ನು ಮಹಾಪ್ರಸಾದವೆಂದು ಸರ್ವರಿಗು ವಿತರಿಸಿದಲ್ಲಿ ವ್ರತಾಚರಣೆಯ ಮಹಾಪುಣ್ಯಫಲವು ದೊರೆಯುತ್ತದೆ.

ಸರ್ವರೂ ಒಂದು ವಿಷಯವನ್ನು ಅತೀ ಮುಖ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕು. ಅದೇನೆಂದರೆ, ಈ ಪ್ರಪಂಚದಲ್ಲಿ ನಮ್ಮೆಲ್ಲ ತಪ್ಪು–ಒಪ್ಪುಗಳನ್ನು, ಕಷ್ಟ–ಕಾರ್ಪಣ್ಯಗಳನ್ನು ಸಂಪೂರ್ಣವಾಗಿ ತಿಳಿದಿರುವವನು ಆ ಪರಮಾತ್ಮನೊಬ್ಬನೇ. ಶ್ರೀ ಶ್ರೀನಿವಾಸನ ಕೃಪೆ, ದಯೆ, ಕಾರುಣ್ಯಗಳನ್ನು ಪಡೆಯಲು ಶ್ರೀ ಶ್ರೀನಿವಾಸನಲ್ಲಿ ಅವಿನಾಭಾವದಿಂದ ಪ್ರಾರ್ಥಿಸಬೇಕು, ಭಕ್ತಿಮಾಡಬೇಕು, ಅರ್ಚಿಸಬೇಕು, ಪೂಜಿಸಬೇಕು. ಈ ಶ್ರೀ ವೇಂಕಟೇಶ್ವರ ವ್ರತಕಲ್ಪವನ್ನಾಚರಿಸಿದರೆ ನಿಸ್ಸಂಶಯವಾಗಿ ಮನೋಗತ ಅಭಿಲಾಷೆಗಳು ಈಡೇರುವುವು, ಎಲ್ಲಾ ದುರಿತಗಳು ದೂರವಾಗುವುವು, ಸರ್ವಾಭೀಷ್ಟಗಳು ನೆರವೇರುವುವು, ಆಯುರಾರೋಗ್ಯ ಸಂಪತ್ತುಗಳು ಲಭಿಸುವುವು.

॥ ಸರ್ವೇ ಜನಾಃ ಸುಖಿನೋ ಭವಂತು । ಸಮಸ್ತ ಸನ್ಮಂಗಳಾನಿ ಭವಂತು ॥

॥ ಶ್ರೀ ಲಕ್ಷ್ಮೀ ಶ್ರೀನಿವಾಸ ಕಟಾಕ್ಷ ಸಿದ್ಧಿರಸ್ತು ॥

॥ ಓಂ ತತ್ಸತ್ ॥

*******

# ಶ್ರೀ ವೇಂಕಟೇಶ್ವರ ವ್ರತಕಲ್ಪ

## ಶ್ರೀ ಗಣಪತಿ ಧ್ಯಾನ

ವಕ್ರತುಂಡ ಮಹಾಕಾಯ ಕೋಟಿಸೂರ್ಯ ಸಮಪ್ರಭ ।
ನಿರ್ವಿಘ್ನಂ ಕುರು ಮೇ ದೇವ ಸರ್ವಕಾರ್ಯೇಷು ಸರ್ವದಾ ॥
ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಂ ।
ಪ್ರಸನ್ನವದನಂ ಧ್ಯಾಯೇತ್ ಸರ್ವವಿಘ್ನೋಪಶಾಂತಯೇ ।
ತದೇವ ಲಗ್ನಂ ಸುದಿನಂ ತದೇವ ತಾರಾಬಲಂ ಚಂದ್ರ ಬಲಂ ತದೇವ ।
ವಿದ್ಯಾಬಲಂ ದೈವಬಲಂ ತದೇವ ಲಕ್ಷ್ಮೀಪತೇ ತೇಽಂಘ್ರಿಯುಗಳಂ ಸ್ಮರಾಮಿ ॥

## ಆಚಮನಂ

ಓಂ ಕೇಶವಾಯ ಸ್ವಾಹಾ (ನಮಃ) ।
ಓಂ ನಾರಾಯಣಾಯ ಸ್ವಾಹಾ (ನಮಃ) ।
ಓಂ ಮಾಧವಾಯ ಸ್ವಾಹಾ (ನಮಃ) ।
ಓಂ ಗೋವಿಂದಾಯ ನಮಃ ।
ಓಂ ವಿಷ್ಣವೇ ನಮಃ ।
ಓಂ ಮಧುಸೂದನಾಯ ನಮಃ ।
ಓಂ ತ್ರಿವಿಕ್ರಮಾಯ ನಮಃ ।
ಓಂ ವಾಮನಾಯ ನಮಃ । (8)
ಓಂ ಶ್ರೀಧರಾಯ ನಮಃ ।
ಓಂ ಹೃಷೀಕೇಶಾಯ ನಮಃ ।
ಓಂ ಪದ್ಮನಾಭಾಯ ನಮಃ ।
ಓಂ ದಾಮೋದರಾಯ ನಮಃ।
ಓಂ ಸಂಕರ್ಷಣಾಯ ನಮಃ ।
ಓಂ ವಾಸುದೇವಾಯ ನಮಃ ।
ಓಂ ಪ್ರದ್ಯುಮ್ನಾಯ ನಮಃ ।
ಓಂ ಅನಿರುದ್ಧಾಯ ನಮಃ । (16)

ಓಂ ಪುರುಷೋತ್ತಮಾಯ ನಮಃ ।

ಓಂ ಅಧೋಕ್ಷಜಾಯ ನಮಃ ।

ಓಂ ನಾರಸಿಂಹಾಯ ನಮಃ ।

ಓಂ ಅಚ್ಯುತಾಯ ನಮಃ ।

ಓಂ ಜನಾರ್ದನಾಯ ನಮಃ ।

ಓಂ ಉಪೇಂದ್ರಾಯ ನಮಃ

ಓಂ ಹರಯೇ ನಮಃ ।

ಓಂ ಶ್ರೀಕೃಷ್ಣಾಯ ನಮಃ । (24)

## ಭೂತೋಚ್ಚಾಟನಂ

ಅಕ್ಷತೆಯನ್ನು ಕೈಯಲ್ಲಿ ಹಿಡಿದು ಕೆಳಗಿನ ಮಂತ್ರವನ್ನು ಹೇಳಿ:

ಆಸನೇ ಉಪವಿಶ್ಯ । ಮಮ ಶರೀರಸ್ಯ ಅಂತರ್ಯಾಮೀಋಷಿಃ । ಸತ್ಯೋದೇವತಾ। ಪ್ರಕೃತಿಪುರುಶ್ಛಂದಃ । ಸಮಸ್ತಭೂತೋಚ್ಚಾಟನೇ ವಿನಿಯೋಗಃ ॥

ಅಪಸರ್ಪಂತು ತೇ ಭೂತಾ ಯೇ ಭೂತಾ ಭುವಿ ಸಂಸ್ಥಿತಾಃ । ಯೇ ಭೂತಾ ವಿಘ್ನಕರ್ತಾರಸ್ತೇ ನಶ್ಯಂತು ಶಿವಾಜ್ಞಯಾ ॥ ಅಪಕ್ರಾಮಂತು ಭೂತಾನಿ ಪಿಶಾಚಾಃ ಸರ್ವತೋ ದಿಶಂ । ಅಪಕ್ರಾಮಂತು ಯೇ ಭೂತಾ ಕ್ರೂರಾಶ್ಚೈವ ತು ರಾಕ್ಷಸಾಃ । ಯೇ ಚಾನ್ಯೇ ನಿವಸಂತ್ಯೇವ ದೇವತಾ ಭುವಿ ಸಂಸ್ಥಿತಾಃ । ತೇಷಾಮಪ್ಯವಿರೋಧೇನ ಪೂಜಾಕರ್ಮ ಸಮಾರಭೇ ॥ ಇತಿ ॥

(ಅಕ್ಷತೆಯನ್ನು ನಿಮ್ಮ ಹಿಂದೆ ಎಸೆದು, ಪ್ರಾಣಾಯಾಮ ಮಾಡಿರಿ.)

## ಪ್ರಾಣಾಯಾಮಂ

ಓಂ ಭೂಃ । ಓಂ ಭುವಃ । ಓಗ್ಂ ಸ್ವಃ । ಓಂ ಮಹಃ । ಓಂ ಜನಃ । ಓಂ ತಪಃ। ಓಗ್ಂ ಸತ್ಯಮ್ ॥ ಓಂ ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ ॥ ಧಿಯೋ ಯೋ ನಃ ಪ್ರಚೋದಯಾತ್ ॥ ಓಂ ಆಪೋ ಜ್ಯೋತೀರಸೋಽಮೃತಂ ಬ್ರಹ್ಮ ಭೂರ್ಭುವಃಸ್ವರೋಮ್ ॥

## ಸಂಕಲ್ಪಂ

ಶುಭೇ ಶೋಭನೇ ಅಭ್ಯುದಯ ಮುಹೂರ್ತೇ, ಶ್ರೀ ಮಹಾವಿಷ್ಣೋರಾಜ್ಞಯಾ ಪ್ರವರ್ತಮಾನಸ್ಯ, ಅದ್ಯ ಬ್ರಹ್ಮಣಃ, ದ್ವಿತೀಯಪರಾರ್ಧೇ ಶ್ರೀ ಶ್ವೇತವರಾಹಕಲ್ಪೇ ವೈವಸ್ವತಮನ್ವಂತರೇ ಕಲಿಯುಗೇ, ಪ್ರಥಮಪಾದೇ, ಜಂಭೂದ್ವೀಪೇ, ಭಾರತ ವರ್ಷೇ, ಭರತಖಂಡೇ ಮೇರೋಃ ದಕ್ಷಿಣದಿಗ್ಭಾಗೇ ಶ್ರೀ ರಾಮಕ್ಷೇತ್ರೇ / ಶ್ರೀ ಪರಶುರಾಮಕ್ಷೇತ್ರೇ (ವ್ರತವನ್ನು ಆಚರಿಸುವವರು,

ಊರು ಯಾವ ದಿಕ್ಕಿನಲ್ಲಿದೆಯೋ, ಆ ದಿಕ್ಕನ್ನು ಹೇಳಬೇಕು) ಪ್ರದೇಶೇ ಕೃಷ್ಣಾ ಕಾವೇರೀ ಮಧ್ಯಭಾಗೆ (ಹತ್ತಿರದ ನದಿಗಳ ಹೆಸರುಗಳನ್ನು ಹೇಳಿಕೊಳ್ಳಿ), ಶೋಭನ ಸ್ವಗೃಹೇ ಸಮಸ್ತ ದೇವತಾ ಬ್ರಾಹ್ಮಣ ಹರಿಹರ ಗುರುಚರಣಸನ್ನಿಧೌ ಅಸ್ಮಿನ್ ವರ್ತಮಾನೇ ವ್ಯಾವಹಾರಿಕೇ ಚಾಂದ್ರಮಾನೇನ, ................ ಸ್ವಸ್ತಿಶ್ರೀ ................ ನಾಮ ಸಂವತ್ಸರೇ (ಈಗಿನ ದಿನಾಂಕ, ದಿನ, ತಿಂಗಳು ಹಾಗೂ ಸಂವತ್ಸರ/ವರ್ಷವನ್ನು ಹೇಳಿರಿ) ................ ಅಯನೇ, ................ ಋತು, ................ ಮಾಸೇ, ................ ಪಕ್ಷೇ, ................ ವಾಸರೇ, ................ ಶುಭ ನಕ್ಷತ್ರ (ನಕ್ಷತ್ರದ ಹೆಸರು) ಶುಭ ಯೋಗ, ಶುಭಕರಣ, ಏವಂಗುಣವಿಶೇಷಣವಿಶಿಷ್ಟಾಯಾಂ, ಅಸ್ಯಾಂ ಶುಭತಿಥೌ ಅಸ್ಮಾಕಂ ಸಹಕುಟುಂಬಾನಾಂ ಶ್ರೀಮತಃ (ನಿಮ್ಮ ಹೆಸರು ಹೇಳಿ) ಗೋತ್ರಸ್ಯ (ನಿಮ್ಮ ಗೋತ್ರ ಹೇಳಿ), ನಾಮಧೇಯಸ್ಯ ಧರ್ಮಪತ್ನೀ ಸಮೇತಸ್ಯ ಕ್ಷೇಮ ಸ್ಥೈರ್ಯ, ಧೈರ್ಯ, ವಿಜಯ, ವೀರ್ಯ, ಆಯುರಾರೋಗ್ಯ ಐಶ್ವರ್ಯಾಭಿವೃಧ್ಯರ್ಥಂ ಸರ್ವಾಭೀಷ್ಟಸಿದ್ಧ್ಯರ್ಥಂ ಧರ್ಮಾರ್ಥಕಾಮಮೋಕ್ಷ ಚತುರ್ವಿಧ ಪುರುಷಾರ್ಥಫಲಸಿದ್ಧ್ಯರ್ಥಂ ಮಮೋಪಾತ್ತದುರಿತಕ್ಷಯದ್ವಾರಾ ಶ್ರೀ ಪರಮೇಶ್ವರ ಪ್ರೀತ್ಯರ್ಥಮ್, ಶ್ರೀ ಲಕ್ಷ್ಮೀ ಪದ್ಮಾವತೀ ಸಮೇತ ಶ್ರೀ ವೇಂಕಟೇಶ್ವರ ದೇವತಾಮುದ್ದಿಷ್ಯ ಶ್ರೀ ವೇಂಕಟೇಶ್ವರ ವ್ರತಕಲ್ಪಮಹಂ ಕರಿಷ್ಯೇ । ಸಂಭವದ್ಭಿಃ ಪದಾರ್ಥೈಃ ಸಂಭವತಾ ನಿಯಾಮೇನ ಯಾವಚ್ಛಕ್ತಿ ಧ್ಯಾನಾವಾಹನಾದಿ ಷೋಡಶೋಪಚಾರಪೂಜಾಂ ಕರಿಷ್ಯೇ ॥

(ಉದ್ಧರಣೆ ನೀರನ್ನು ಕೈಯಲ್ಲಿ ತೆಗೆದುಕೊಂಡು ತಟ್ಟೆಯಲ್ಲಿ ವಿಸರ್ಜಿಸಿ)

## ತದಂಗ ಕಲಶಾರಾಧನಂ ಅಹಂ ಕರಿಷ್ಯೇ

(ಸ್ವಾಮಿಯ ಬಲ ಭಾಗದಲ್ಲಿ ಕಲಶಪಾತ್ರೆಯನ್ನು ಸ್ಥಾಪಿಸಿ, ಅದರಲ್ಲಿ ನೀರು, ಗಂಧ, ಕುಂಕುಮ, ಅಕ್ಷತೆ, ತುಳಸಿ, ಒಂದು ನಾಣ್ಯ ಹಾಗೂ ಹೂವನ್ನು ಹಾಕಿ ಈ ಕೆಳಗಿನ ಶ್ಲೋಕವನ್ನು ಪಠಿಸಿ)

ಕಲಶಸ್ಯ ಮುಖೇ ವಿಷ್ಣುಃ ಕಂಠೇ ರುದ್ರಃ ಸಮಾಶ್ರಿತಃ ॥
ಮೂಲೇ ತತ್ರ ಸ್ಥಿತೋ ಬ್ರಹ್ಮಾ ಮಧ್ಯೇ ಮಾತೃಗಣಾಃ ಸ್ಮೃತಾಃ ।
ಕುಕ್ಷೌತು ಸಾಗರಾಃ ಸರ್ವೇ ಸಪ್ತದ್ವೀಪಾ ವಸುಂಧರಾ ॥
ಋಗ್ವೇದೋಽಥ ಯಜುರ್ವೇದಃ ಸಾಮವೇದೋ ಹ್ಯಥರ್ವಣಃ ।
ಅಂಗೈಶ್ಚಸಹಿತಾಃ ಸರ್ವೇ ಕಲಶಾಂಬುಸಮಾಶ್ರಿತಾಃ ।
ಆಯಾಂತು ದೇವಪೂಜಾರ್ಥಂ ದುರಿತಕ್ಷಯಕಾರಕಾಃ ।
ಗಂಗೇ ಚ ಯಮುನೇ ಚೈವ ಗೋದಾವರೀ ಸರಸ್ವತೀ ।
ನರ್ಮದೇ ಸಿಂಧುಕಾವೇರಿ ಜಲೇಽಸ್ಮಿನ್ ಸನ್ನಿಧಿಂ ಕುರು ॥
ಕಾವೇರಿ ತುಂಗ ಭದ್ರಾ ಚ ಕೃಷ್ಣವೇಣೀ ಚ ಗೌತಮಿ ।
ಭಾಗಿರಥೀ ಚ ವಿಖ್ಯಾತಾಃ ಪಂಚಗಂಗಾಃ ಪ್ರಕೀರ್ತಿತಾಃ ॥

ಓಂ ಆಪೋ ವಾ ಇದಗ್ಂ । ಸರ್ವಂ ವಿಶ್ವಾ ಭೂತಾನ್ಯಾಪಸಃ । ಪ್ರಾಣಾವಾ ಆಪಃ । ಪಶವ ಆಪೋಽನ್ನಮಾಪೋಮೃತಮಾಪಸ್ಸಮ್ರಾಡಾಪೋ ವಿರಾಡಾಪ । ಸ್ವರಾಡಾಪಶ್ಛಂದಾಗ್ ಸ್ಯಾಪೋ ಜ್ಯೋತೀಗ್ಂ ಷ್ಯಾಪೋ ಯಜುಗ್ಂ ಷ್ಯಾಪಃ ಸತ್ಯಮಾಪಃ । ಸರ್ವಾದೇವತಾ ಆಪೋ ಭೂರ್ಭುವಸ್ಸುವ ರಾಪ ಓಂ ॥

(ಕಲಶದಲ್ಲಿ ನೀರನ್ನು ತುಂಬಿಸಿ ಅದರಲ್ಲಿ ತುಳಸೀದಳ ಹಾಕಿ ಕೈಮುಟ್ಟಿ)

ಕಲಶಃ ಕೀರ್ತಿಮಾಯುಷ್ಯಂ ಪ್ರಜ್ಞಾಂ ಮೇಧಾಂ ಶ್ರಿಯಂ ಬಲಮ್ ।

ಯೋಗ್ಯತಾಂ ಪಾಪಹಾನಿಂ ಚ ಪುಣ್ಯವೃದ್ಧಿಂ ಚ ಸಾಧಯೇತ್ ॥

ಸರ್ವತೀರ್ಥಮಯೋ ಯಸ್ಮಾತ್ ಸರ್ವಕ್ಷೇತ್ರಮಯೋ ಯತಃ ।

ಅತೋ ಹರಿಪ್ರೀಯೋಽಸಿ ತ್ವಂ ಪೂರ್ಣಕುಂಭ ನಮೋಸ್ತು ತೇ ॥

(ಇತಿ ಕಲಶದೇವತಾ ಆವಾಹ್ಯ ಪಂಚೋಪಚಾರೈಃ ಪೂಜಯಿತ್ವಾ ಕಲಶೋದಕೇನ ದೇವಂ ಆತ್ಮಾನಂ ಪೂಜಾದ್ರವ್ಯಾಣಿ ಚ ಪ್ರೋಕ್ಷಯೇತ್)

(ಕಲಶದ ನೀರಿನಲ್ಲಿ ಒಂದು ಹೂವನ್ನು ಮುಳುಗಿಸಿ ದೇವರ ಚಿತ್ರ, ಪೂಜಾ ಸಾಮಗ್ರಿ ಮತ್ತು ಸ್ವತಃ ತಮ್ಮ ಮೇಲೆ ನೀರನ್ನು ಪ್ರೋಕ್ಷಿಸುವುದು)

## ಶ್ರೀ ಗಣಪತಿ ಪ್ರಾರ್ಥನ

ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಂ ।

ಪ್ರಸನ್ನವದನಂ ಧ್ಯಾಯೇತ್ ಸರ್ವವಿಘ್ನೋಪಶಾಂತಯೇ ॥

ಅದೌ ನಿರ್ವಿಘ್ನೇನವ್ರತಪರಿಸಮಾಪ್ತ್ಯರ್ಥಮ್ ಗಣಪತಿಪೂಜಾಮ್ ಕರಿಷ್ಯೇ ॥

(2 ವೀಳ್ಯದ ಎಲೆಯ ಮೇಲೆ ಅರಿಷಿಣದ ಗಣಪತಿ ಅಥವಾ ಅಡಿಕೆ ಬೆಟ್ಟ ಇಟ್ಟು ಗಣಪತಿ ಪೂಜೆ ಕೆಳಗಿನಂತೆ ಮಾಡಬೇಕು)

(ಸೂಚಿಸಿದ ಯಾವುದೇ ವಸ್ತು ಇಲ್ಲವಾದಲ್ಲಿ ಶ್ಲೋಕ ಹೇಳಿ ಅಕ್ಷತೆ ಹಾಕಬೇಕು)

## ಅಥ ಗಣಪತಿ ಪೂಜಾಂ

ಓಂ ಗಣಾನಾಂ ತ್ವಾಂ ಗಣಪತಿಗ್ಂ ಹವಾಮಹೇ ।

ಕವಿಂ ಕವೀನಾಮುಪಮಶ್ರವಸ್ತಮಮ್ ॥

ಜ್ಯೇಷ್ಠರಾಜಂ ಬ್ರಹ್ಮಣಾಂ ಬ್ರಹ್ಮಣಸ್ಪತ ।

ಆನಃ ಶೃಣ್ವನ್ ನೂತಿಭಿಃ ಸೀದ ಸಾದನಮ್ ॥

ಶ್ರೀ ಮಹಾಗಣಾಧಿಪತಯೇ ನಮಃ । ಧ್ಯಾಯಾಮಿ ಧ್ಯಾನಂ ಸಮರ್ಪಯಾಮಿ ॥ (ಗಣಪತಿಗೆ ಮನಸಾ ಪ್ರಾರ್ಥನೆಯನ್ನು ಅರ್ಪಿಸಿ)

ಆವಾಹಯಾಮಿ (ಒಂದು ಉದ್ಧರಣೆ ನೀರನ್ನು ಕಲಶದಿಂದ ತೆಗೆದುಕೊಂಡು ಅರ್ಘ್ಯಪಾತ್ರೆಗೆ ಹಾಕಿರಿ) ಆಸನಂ ಸಮರ್ಪಯಾಮಿ । (ಸೂಚನೆ: ಪ್ರತಿಬಾರಿ

ಸಮರ್ಪಯಾಮಿ ಎನ್ನುವಾಗ ಒಂದು ಉದ್ಧರಣೆ ನೀರನ್ನು ಕಲಶದಿಂದ ತೆಗೆದುಕೊಂಡು ಅರ್ಘ್ಯಪಾತ್ರೆಗೆ ಹಾಕಿರಿ.)

ರತ್ನಸಿಂಹಾಸನಂ ಸಮರ್ಪಯಾಮಿ । ಪಾದಯೋಃ ಪಾದ್ಯಂ ಸಮರ್ಪಯಾಮಿ ।

ಹಸ್ತೇ ಅರ್ಘ್ಯಂ ಸಮರ್ಪಯಾಮಿ । ಮಖೇ ಆಚಮನೀಯಂ ಸಮರ್ಪಯಾಮಿ ।

ಅಪೋ ಹಿಷ್ಠಾ ಮಯೋ ಭುವಃ । ತಾನ ಊರ್ಜೇ ದಧಾತನ । ಮಹೇರಣಾಯ ಚಕ್ಷಸೇ ॥

ಯೋ ವಃ ಶಿವತಮೋ ರಸಃ । ತಸ್ಯ ಭಾಜಯತೇಹ ನಃ । ಉಶತೀರಿವ ಮಾತರಃ ॥

ತಸ್ಮಾ ಅರಂ ಗಮಾಮವಃ । ಯಸ್ಯಕ್ಷಯಾಯ ಜಿನ್ವಥ । ಅಪೋ ಜನಯಥಾ ಚ ನಃ ॥

ಶ್ರೀ ಮಹಾಗಣಾಧಿಪತಯೇ ನಮಃ । ಶುದ್ಧೋದಕ ಸ್ನಾನಂ ಸಮರ್ಪಯಾಮಿ ॥

ಸ್ನಾನಾನಂತರಂ ಶುದ್ಧ ಆಚಮನಂ ಸಮರ್ಪಯಾಮಿ ॥

ಅಭಿ ವಸ್ತ್ರಾ ಸುವಾಸನಾನ್ಯರ್ಷಾಭಿ ಧೇನೂಃ ಸುದುಘಾಃ ಪೂಯಮಾನಃ ।

ಅಭಿಚಂದ್ರಾ ಭರ್ತವೇ ನೋ ಹಿರಣ್ಯಾಭ್ಯಶ್ವಾನ್ರಥಿನೋ ಸೋಮ ।

ಶ್ರೀ ಮಹಾಗಣಾಧಿಪತಯೇ ನಮಃ । ವಸ್ತ್ರಯುಗ್ಮಮ್ ಸಮರ್ಪಯಾಮಿ ॥

(ವಸ್ತ್ರ ಸಮರ್ಪಣೆ ಮಾಡಿ ಇಲ್ಲವೆ ಅಕ್ಷತೆ ಹಾಕಿ)

ರಾಜಿತಂ ಬ್ರಹ್ಮಸೂತ್ರಂ ಚ ಕಾಂಚನಂ ಸೋತ್ತರೀಯಕಂ ।

ಗೃಹಾಣ ಚಾರು ಸರ್ವಜ್ಞ ಭಕ್ತಾನಾಮಿಷ್ಟದಾಯಕ ॥

ಯಜ್ಞೋಪವೀತಂ ಪರಮಮ್ ಪವಿತ್ರಂ ಪ್ರಜಾಪತೇರ್ಯತ್ಸಹಜಂ ಪುರಸ್ತಾತ್ ।

ಆಯುಷ್ಯ ಮಗ್ರ್ಯಂ ಪ್ರತಿಮುಂಚ ಶುಭ್ರಂ ಯಜ್ಞೋಪವೀತಂ ಬಲಮಸ್ತು ತೇಜಃ ।

ಶ್ರೀ ಮಹಾಗಣಾಧಿಪತಯೇ ನಮಃ । ಯಜ್ಞೋಪವೀತಂ ಸಮರ್ಪಯಾಮಿ ॥

(ಜನಿವಾರ ಜೋಡಿ ಇದ್ದರೆ ಹಾಕಿ ಇಲ್ಲವೇ ಅಕ್ಷತೆ ಹಾಕಿ)

ಗಂಧಕರ್ಪೂರಸಂಯುಕ್ತಂ ದಿವ್ಯಚಂದನಮುತ್ತಮಂ ।

ವಿಲೇಪನಂ ಸುರಶ್ರೇಷ್ಠ ಪ್ರೀತ್ಯರ್ಥಂ ಪ್ರತಿಗೃಹ್ಯತಾಮ್ ॥

ಗಂಧದ್ವಾರಾಂ ದುರಾಧರ್ಷಮ್ ನಿತ್ಯಪುಷ್ಟಾಂ ಕರೀಷಿಣೀಂ ।

ಈಶ್ವರೀಗ್‌ಂ ಸರ್ವಭೂತಾನಾಮ್ ತಾ ಮಿಹೋಪಹ್ವಯೇ ಶ್ರಿಯಂ ।

ಶ್ರೀ ಮಹಾಗಣಾಧಿಪತಯೇ ನಮಃ । ಗಂಧಂ ಸಮರ್ಪಯಾಮಿ ॥

ಆಯನೇ ತೇ ಪರಾಯಣೇ ದೂರ್ವಾ ರೋಹಂತು ಪುಷ್ಪಿಣೀಃ ।
ಹೃದಾಶ್ಚ ಪುಂಡರೀಕಾಣಿ ಸಮುದ್ರಸ್ಯ ಗೃಹಾ ಇಮೇ ॥
ಶ್ರೀ ಮಹಾಗಣಾಧಿಪತಯೇ ನಮಃ । ಅಕ್ಷತಾನಿ ಸಮರ್ಪಯಾಮಿ ॥

## ಅಥ ಷೋಡಶನಾಮ ಪೂಜಾ

ಓಂ ಸುಮುಖಾಯ ನಮಃ । ಓಂ ಗಣಾಧ್ಯಕ್ಷಾಯ ನಮಃ ।
ಓಂ ಏಕದಂತಾಯ ನಮಃ । ಓಂ ಫಾಲಚಂದ್ರಾಯ ನಮಃ ।
ಓಂ ಕಪಿಲಾಯ ನಮಃ । ಓಂ ಗಜಾನನಾಯ ನಮಃ ।
ಓಂ ಗಜಕರ್ಣಕಾಯ ನಮಃ । ಓಂ ವಕ್ರತುಂಡಾಯ ನಮಃ ।
ಓಂ ಲಂಬೋದರಾಯ ನಮಃ । ಓಂ ಶೂರ್ಪಕರ್ಣಾಯ ನಮಃ ।
ಓಂ ವಿಕಟಾಯ ನಮಃ । ಓಂ ಹೇರಂಬಾಯ ನಮಃ ।
ಓಂ ವಿಘ್ನರಾಜಾಯ ನಮಃ । ಓಂ ಸ್ಕಂದಪೂರ್ವಜಾಯ ನಮಃ ।
ಓಂ ಗಣಾಧಿಪತಯೇ ನಮಃ । ಓಂ ಸರ್ವಸಿದ್ಧಿಪ್ರದಾಯಕಾಯ ನಮಃ ।
ಓಂ ಧೂಮಕೇತವೇ ನಮಃ ।(9) ಓಂ ಶ್ರೀ ಮಹಾಗಣಾಧಿಪತಯೇ ನಮಃ। (18)
ನಾನಾವಿಧ ಪರಿಮಳ ಪತ್ರ – ಪುಷ್ಪಾಣಿ ಸಮರ್ಪಯಾಮಿ ॥

## ಧೂಪ-ದೀಪ

ವನಸ್ಪತ್ಯುದ್ಭವೋ ದಿವ್ಯೋ ಗಂಧಾಢ್ಯೋ ಧೂಪ ಉತ್ತಮಃ ।
ಆಘ್ರೇಯಃ ಸರ್ವದೇವಾನಾಂ ಧೂಪೋಽಯಂ ಪ್ರತಿಗೃಹ್ಯತಾಮ್ ॥

ಶ್ರೀ ಮಹಾಗಣಾಧಿಪತಯೇ ನಮಃ । ಧೂಪಂ ಆಘ್ರಾಪಯಾಮಿ ॥
ಸಾಜ್ಯಂ ತ್ರಿವರ್ತಿಸಂಯುಕ್ತಂ ವಹ್ನಿನಾ ಯೋಜಿತಂ ಮಯಾ ।
ದೀಪಂ ಗೃಹಾಣ ದೇವೇಶ ತ್ರೈಲೋಕ್ಯತಿಮಿರಾಪಹ ॥
ಭಕ್ತ್ಯಾ ದೀಪಂ ಪ್ರಯಚ್ಛಾಮಿ ದೇವಾಯ ಪರಮಾತ್ಮನೇ ।
ತ್ರಾಹಿ ಮಾಂ ನರಕಾತ್ಘೋರ ದೀಪಜ್ಯೋತಿರ್ನಮೋಽಸ್ತುತೇ ॥
ಶ್ರೀ ಮಹಾಗಣಾಧಿಪತಯೇ ನಮಃ । ದೀಪಂ ಸಮರ್ಪಯಾಮಿ ॥
ಧೂಪದೀಪಾನಂತರಂ ಆಚಮನೀಯಂ ಸಮರ್ಪಯಾಮಿ ॥
(ನಿರಾಜನ ಆರತಿ ಮಾಡಿ, ಒಂದು ಉದ್ಧರಣೆ ಕಲಶದ ನೀರನ್ನು ಅರ್ಘ್ಯಪಾತ್ರೆಯಲ್ಲಿ ಬಿಡಿ)

# ನೈವೇದ್ಯಂ

(ಒಂದು ತಟ್ಟೆಯಲ್ಲಿ ಒಂದು ಚೂರು ಬೆಲ್ಲವನ್ನು ಇಟ್ಟು ನೈವೇದ್ಯ ಮಾಡಿ)

ಓಂ ಭೂರ್ಭುವಃ ಸ್ಸುವಃ ಓಂ ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ ।

ಧಿಯೋ ಯೋ ನಃ ಪ್ರಚೋದಯಾತ್ ಸತ್ಯಂ ತ್ವರ್ಥೇನ ಪರಿಷಿಂಚಾಮಿ ॥

ಸತ್ಯಂತ್ವರ್ಥೇನ ಪರಿಷಿಂಚಾಮಿ ॥

(ರಾತ್ರಿ ವೇಳೆ ಪೂಜೆ ಮಾಡುತ್ತಿದ್ದರೆ – ಋತಂ ತ್ವಾ ಸತ್ಯೇನ ಪರಿಷಿಂಚಾಮಿ ಎನ್ನಬೇಕು)

ಶ್ರೀ ಮಹಾಗಣಾಧಿಪತಯೇ ನಮಃ ।

ಗುಡೋಪಹಾರನೈವೇದ್ಯಮ್ ಸಮರ್ಪಯಾಮಿ ॥

। ಅಮೃತಮಸ್ತು । ಅಮೃತೋಪಸ್ತರಣಮಸಿ ।

ಓಂ ಪ್ರಾಣಾಯ ಸ್ವಾಹಾ । ಓಂ ಅಪಾನಾಯ ಸ್ವಾಹಾ । ಓಂ ವ್ಯಾನಾಯ ಸ್ವಾಹಾ। ಓಂ ಉದಾನಾಯ ಸ್ವಾಹಾ । ಓಂ ಸಮಾನಾಯ ಸ್ವಾಹಾ ॥

ಮಧ್ಯೇ ಮಧ್ಯೇ ಪಾನೀಯಂ ಸಮರ್ಪಯಾಮಿ ॥

ಅಮೃತಾಪಿಧಾನಮಸಿ ಸ್ವಾಹಾ । ಉತ್ತರೀಪೋಶನಂ ಸಮರ್ಪಯಾಮಿ ।

ಹಸ್ತೌ ಪ್ರಕ್ಷಾಳಯಾಮಿ । ಶುದ್ಧಾಚಮನೀಯಂ ಸಮರ್ಪಯಾಮಿ ॥

ಪೂಗೀಫಲಸಮಾಯುಕ್ತಂ ನಾಗವಲ್ಲೀದಲೈರ್ಯುತಂ ।

ಮುಕ್ತಾಚೂರ್ಣಸಮಾಯುಕ್ತಮ್ ತಾಂಬೂಲಂ ಪ್ರತಿಗೃಹ್ಯತಾಮ್ ॥

ಶ್ರೀ ಮಹಾಗಣಾಧಿಪತಯೇ ನಮಃ । ತಾಂಬೂಲಂ ಸಮರ್ಪಯಾಮಿ ॥

ಓಂ ಗಣಾನಾಂ ತ್ವಾ ಗಣಪತಿಗಂ ಹವಾಮಹೇ । ಕವಿಂ ಕವಿನಾಮುಪ

ಮಶ್ರವಸ್ತಮಮ್ । ಜ್ಯೇಷ್ಠರಾಜಂ ಬ್ರಹ್ಮಣಾಂ ಬ್ರಹ್ಮಣಸ್ಪತ ।

ಆ ನಃ ಶೃಣ್ವನ್ನೂತಿಭಿ ಸ್ಸೀದಸಾದನಮ್ ।

ಶ್ರೀ ಮಹಾಗಣಾಧಿಪತಯೇ ನಮಃ । ಸುವರ್ಣಪುಷ್ಪಂ ಸಮರ್ಪಯಾಮಿ ॥

(ಕೈಯಲ್ಲಿ ಮಂತ್ರಾಕ್ಷತೆ–ಪುಷ್ಪವನ್ನು ಹಿಡಿದುಕೊಂಡು ಶ್ರೀ ವಿನಾಯಕನಿಗೆ ಸಮರ್ಪಿಸಬೇಕು)

ಮಂತ್ರಹೀನಂ ಕ್ರಿಯಾಹೀನಂ ಭಕ್ತಿಹೀನಂ ಗಣಾಧಿಪ ।

ಯತ್ಕೃತಂ ತು ಮಯಾದೇವ ಪರಿಪೂರ್ಣಂ ತದಸ್ತುತೇ ।

ಯಜ್ಞೇನ ಯಜ್ಞಮಯಜಂತ ದೇವಾಸ್ತಾನಿ ಧರ್ಮಾಣಿ ಪ್ರಥಮಾನ್ಯಾಸನ್ ।
ತೇಹ ನಾಕಂ ಮಹಿಮಾನಃ ಸಚಂತ ಯತ್ರ ಪೂರ್ವೇ ಸಾಧ್ಯಾಃ ಸಂತಿ ದೇವಾಃ ॥
ಪುನರಾಚಮನಂ ಸಮರ್ಪಯಾಮಿ ॥

ಅನೇನ ಧ್ಯಾನಾವಾಹಾನಾದಿ ಶೋಡಷೋಪಚಾರಪೂಜನೇನ ಭಗವಾನ್ ಸರ್ವಾತ್ಮಕಃ ।
ಶ್ರೀ ಮಹಾಗಣಾಧಿಪತಿಃ ಸುಪ್ರೀತೋ ವರದೊ ಭೂತ್ವಾ ಉತ್ತರೇ ಕರ್ಮಣ್ಯ
ನಿರ್ವಿಘ್ನಮಸ್ತ್ವಿತಿ ಭವಂತೋ ಬ್ರುವಂತು । ಉತ್ತರೆ ಕರಮಣ್ಯ ನಿರ್ವಿಘ್ನಮಸ್ತು ।
ಗಣಾಧಿಪತಿ ಪ್ರಸಾದಂ ಶಿರಸಾ ಗೃಹ್ಣಾಮಿ ॥
ಸಹಸ್ರಪರಮಾ ದೇವಿ ಶತಮೂಲಾ ಶತಾಂಕುರಾ ।
ಸರ್ವಗ್ಂ ಹರತು ಮೇ ಪಾಪಂ ದೂರ್ವಾ ದುಃಸ್ವಪ್ನನಾಶಿನೀ ।
ಗಣಪತಿಂ ಯಥಾಸ್ಥಾನಮುದ್ವಾಸಯಾಮಿ ॥
(ಗಣಪತಿಯನ್ನು ಸ್ವಲ್ಪ ಅಲುಗಾಡಿಸಿ)

## ಪ್ರಾಣ ಪ್ರತಿಷ್ಠೆ

(ಕಲಶದ ಕಾಯಿಯ ಕಣ್ಣಿಗೆ ತುಪ್ಪವನ್ನು ಹಚ್ಚಬೇಕು)
ಓಂ ಅಸುನೀ ತೇ ಪುನರಸ್ಮಾಸು ಚಕ್ಷುಃ ಪುನಃ ಪ್ರಾಣಮಿಹ ನೋ ಧೇಹಿ ಭೋಗಮ್।
ಜ್ಯೋಕ್ ಪಶ್ಯೇಮ ಸೂರ್ಯಮುಚ್ಚರಂ ತಮನುಮತೇ ಮೃಳಯಾ ನಃ ಸ್ವಸ್ತಿ ॥
ಓಂ ॥

ಅಮತೃಂ ವೈ ಪ್ರಾಣಾಃ ಅಮೃತಮಾಪಃ ಪ್ರಾಣಾನೇವ
ಯಥಾಸ್ಥಾನಮುಪಾಹ್ವಯತೇ
(ದೇವರ ಮೂರ್ತಿ ಅಥವಾ ಚಿತ್ರವನ್ನು ಮುಟ್ಟಿ)
ಶ್ರೀ ವೇಂಕಟೇಶ್ವರ ಸ್ವಾಮಿನಂ ಆವಾಹಯಾಮಿ, ಸ್ಥಾಪಯಾಮಿ, ಪೂಜಯಾಮಿ ।
ಸ್ಥಿರೋ ಭವ, ವರದೋಭವ ಸುಪ್ರಸನ್ನೋ ಭವ, ಸ್ಥಿರಾಸನಂ ಕುರು ॥

## ಅಥ ಧ್ಯಾನಂ

ಶಾಂತಾಕಾರಂ ಭುಜಗಶಯನಂ ಪದ್ಮನಾಭಂ ಸುರೇಶಂ
ವಿಶ್ವಾಧಾರಂ ಗಗನಸದೃಶಂ ಮೇಘವರ್ಣಂ ಶುಭಾಂಗಮ್ ।
ಲಕ್ಷ್ಮೀಕಾಂತಂ ಕಮಲನಯನಂ ಯೋಗಿಹೃದ್ಧ್ಯಾನಗಮ್ಯಂ
ವಂದೇ ವಿಷ್ಣುಂ ಭವಭಯ ಹರಂ ಸರ್ವಲೋಕೈಕನಾಥಮ್ ॥
ಶ್ರೀ ಲಕ್ಷ್ಮೀ ಪದ್ಮಾವತೀ ಸಮೇತ ಶ್ರೀ ವೇಂಕಟೇಶ್ವರ ಸ್ವಾಮಿನೇ ನಮಃ ॥
ಧ್ಯಾಯಾಮಿ ಧ್ಯಾನಂ ಸಮರ್ಪಯಾಮಿ ॥
(ಒಂದು ಹೂವನ್ನು ಅಥವಾ ಒಂದು ತುಳಸೀದಳ ದೇವರ ಚಿತ್ರ ಅಥವಾ ಅವರ ಮೂರ್ತಿ ಎದುರು ಇಡಿ.)

## ಆವಾಹನಂ

ಆವಾಹಯಾಮಿ ದೇವೇಶ ಸಿದ್ಧಗಂಧರ್ವ ಸೇವಿತ ।
ಯಾದ್ರಹಸ್ಯಮಿದಂ ಪುಣ್ಯಂ ಸರ್ವಪಾಪಹರೋ ಹರಃ ॥
ಶ್ರೀ ಲಕ್ಷ್ಮೀಪದ್ಮಾವತೀ ಸಮೇತ ಶ್ರೀ ವೇಂಕಟೇಶ್ವರ ಸ್ವಾಮಿನೇ ನಮಃ। ಅವಾಹಯಾಮಿ॥
(ಒಂದು ಹೂವನ್ನು ಅಥವಾ ಒಂದು ತುಳಸೀದಳವನ್ನು ಕಲಶ ಅಥವಾ ದೇವರ ಮೂರ್ತಿಯ ಎದುರಿನಲ್ಲಿ ಇಡಿ)

## ಆಸನಂ

ದೇವದೇವ ಜಗನ್ನಾಥ ಪ್ರಣತ ಕ್ಲೇಶನಾಶನ ।
ರತ್ನಸಿಂಹಾಸನಂ ದಿವ್ಯಂ ಗೃಹಾಣ ಮಧುಸೂದನ ॥
ಶ್ರೀ ಲಕ್ಷ್ಮೀ ಪದ್ಮಾವತೀ ಸಮೇತ ಶ್ರೀ ವೇಂಕಟೇಶ್ವರ ಸ್ವಾಮಿನೇ ನಮಃ
ರತ್ನಸಿಂಹಾಸನಂ ಸಮರ್ಪಯಾಮಿ ॥
(ಒಂದು ಹೂವನ್ನು ಅಥವಾ ಒಂದು ತುಳಸೀದಳವನ್ನು ಕಲಶ ಅಥವಾ ದೇವರ ಮೂರ್ತಿ ಎದುರು ಇಡಿ)

## ಪಾದ್ಯಂ

ವಾಂಛಿತಂ ಕುರು ಮೇ ದೇವ ದುಷ್ಕೃತಂ ಚ ವಿನಾಶಯ ।
ಪಾದ್ಯಂ ಗೃಹಾಣ ಭಗವನ್ ಮಾತುರುತ್ಸಂಗಸಂಸ್ಥಿತ ॥

ಶ್ರೀ ಲಕ್ಷ್ಮೀ ಪದ್ಮಾವತೀ ಸಮೇತ ಶ್ರೀ ವೇಂಕಟೇಶ್ವರ ಸ್ವಾಮಿನೇ ನಮಃ ।
ಪಾದಯೋಃ ಪಾದ್ಯಂ ಸಮರ್ಪಯಾಮಿ ॥
(ಒಂದು ಚಮಚದಲ್ಲಿ ನೀರನ್ನು ತೆಗೆದುಕೊಂಡು ತಟ್ಟೆಯಲ್ಲಿ ಸುರಿಯಿರಿ)

## ಅರ್ಘ್ಯಂ

ಕುರುಷ್ವ ಮೇ ದಯಾಂ ದೇವ ಸಂಸಾರಾರ್ತಿಭಯಾಪಹ ।
ದಧಿಕ್ಷೀರ ಫಲೋಪೇತಂ ಗೃಹಾಣಾರ್ಘ್ಯಂ ನಮೋಸ್ತುತೇ ॥
ಶ್ರೀ ಲಕ್ಷ್ಮೀ ಪದ್ಮಾವತೀ ಸಮೇತ ಶ್ರೀ ವೇಂಕಟೇಶ್ವರ ಸ್ವಾಮಿನೇ ನಮಃ ।
ಹಸ್ತಯೋಽರರ್ಘ್ಯಂ ಸಮರ್ಪಯಾಮಿ ॥
(ಕಲಶದಿಂದ ಒಂದು ಉದ್ಧರಣೆ ನೀರನ್ನು ತೆಗೆದುಕೊಂಡು ಅರ್ಘ್ಯಪಾತ್ರೆಯಲ್ಲಿ ವಿಸರ್ಜಿಸಿ)

## ಆಚಮನಂ

ನಮಃ ಕಾಂತಾಯ ಶುದ್ಧಾಯ ನಿತ್ಯಾಯ ಜ್ಞಾನರೂಪಿಣೇ ।
ಗೃಹಾಣಾಚಮನಂ ದೇವ ಸರ್ವಲೋಕೈಕನಾಯಕ ॥
ಶ್ರೀ ಲಕ್ಷ್ಮೀ ಪದ್ಮಾವತೀ ಸಮೇತ ಶ್ರೀ ವೇಂಕಟೇಶ್ವರ ಸ್ವಾಮಿನೇ ನಮಃ ॥
ಮುಖೇ ಆಚಮನೀಯಂ ಸಮರ್ಪಯಾಮಿ ॥
(ಕಲಶದಿಂದ ಒಂದು ಉದ್ಧರಣೆ ನೀರನ್ನು ತೆಗೆದುಕೊಂಡು ಅರ್ಘ್ಯಪಾತ್ರೆಯಲ್ಲಿ ವಿಸರ್ಜಿಸಿ)

## ಪಂಚಾಮೃತ ಸ್ನಾನಂ

ಪಂಚಾಮೃತಂ ಮಯಾನೀತಂ ಪಯೋದಧಧಿಘೃತಂ ಮಧುಃ ।
ಶರ್ಕಾರಾ ಸಹಿತಂ ಚೈವ ದೇವ ತ್ವಂ ಪ್ರತಿಗೃಹ್ಯತಾಮ್ ॥
ಶ್ರೀ ಲಕ್ಷ್ಮೀ ಪದ್ಮಾವತೀ ಸಮೇತ ಶ್ರೀ ವೇಂಕಟೇಶ್ವರ ಸ್ವಾಮಿನೆ ನಮಃ ।
ಪಂಚಾಮೃತ ಸ್ನಾನಂ ಸಮರ್ಪಯಾಮಿ ॥
(ಪಂಚಾಮೃತ ಹಸುವಿನ ಹಾಲು, ಮೊಸರು, ತುಪ್ಪ, ಜೇನುತುಪ್ಪ ಮತ್ತು ಸಕ್ಕರೆಯಿಂದ ಮಂತ್ರಪೂರ್ವಕ ಅಭಿಷೇಕ ಮಾಡುವುದು)

## ಸ್ನಾನಂ

ಸ್ವರ್ಣಪಾತ್ರೋದಕಮ್ ಗಂಗಾ ಯಮುನಾದಿಸಮನ್ವಿತಮ್ ।
ಶುದ್ಧೋದಕ ಗೃಹಾಣೇಶ ಸ್ನಾನಂ ಕುರು ಯಥಾವಿಧಿ ॥
ಶ್ರೀ ಲಕ್ಷ್ಮೀ ಪದ್ಮಾವತೀ ಸಮೇತ ಶ್ರೀ ವೇಂಕಟೇಶ್ವರ ಸ್ವಾಮಿನೇ ನಮಃ ।
ಶುದ್ಧೋದಕಸ್ನಾನಂ ಸಮರ್ಪಯಾಮಿ ॥
(ಕಲಶದಿಂದ ಒಂದು ಉದ್ಧರಣೆ ನೀರನ್ನು ತೆಗೆದುಕೊಂಡು ಅರ್ಘ್ಯಪಾತ್ರೆಯಲ್ಲಿ ವಿಸರ್ಜಿಸಿ)

## ವಸ್ತ್ರಂ

ತಪ್ತಕಾಂಚನ ಸಂಕಾಶಂ ಪೀತಾಂಬರಮಿದಂ ಹರೇ ।
ಸುಗೃಹಾಣ ಜಗನ್ನಾಥ ಶ್ರೀನಿವಾಸ ನಮೋಸ್ತುತೇ ॥
ಶ್ರೀ ಲಕ್ಷ್ಮೀ ಪದ್ಮಾವತೀ ಸಮೇತ ಶ್ರೀ ವೇಂಕಟೇಶ್ವರ ಸ್ವಾಮಿನೇ ನಮಃ ।
ವಸ್ತ್ರಯುಗ್ಮಂ ಸಮರ್ಪಯಾಮಿ ॥

## ಯಜ್ಞೋಪವೀತಂ

ಯಜ್ಞೋಪವೀತಂ ಪರಮಂ ಪವಿತ್ರಂ ಪ್ರಜಾಪತೇಃ ಯತ್ಸಹಜಂ ಪುರಸ್ತಾತ್ ।
ಆಯುಷ್ಯಮಗ್ರ್ಯಂ ಪ್ರತಿಮುಂಚ ಶುಭ್ರಂ ಯಜ್ಞೋಪವೀತಂ ಬಲಮಸ್ತು ತೇಜಃ ॥
ಶ್ರೀ ಲಕ್ಷ್ಮೀ ಪದ್ಮಾವತೀ ಸಮೇತ ಶ್ರೀ ವೇಂಕಟೇಶ್ವರ ಸ್ವಾಮಿನೇ ನಮಃ, ಯಜ್ಞೋಪವೀತಂ ಸಮರ್ಪಯಾಮಿ ॥

## ಗಂಧಂ

ಚಂದನಾಗರುಕಸ್ತೂರಿಘನಸಾರಸಮನ್ವಿತಂ ।
ಗಂಧಂ ಗೃಹಾಣ ಗೋವಿಂದ ನಾನಾಗಂಧಾಂಶ್ಚ ಧಾರಯ ॥
ಶ್ರೀ ಲಕ್ಷ್ಮೀ ಪದ್ಮಾವತೀ ಸಮೇತ ಶ್ರೀ ವೇಂಕಟೇಶ್ವರ ಸ್ವಾಮಿನೇ ನಮಃ
ದಿವ್ಯ ಪರಿಮಳ ಗಂಧಂ ಸಮರ್ಪಯಾಮಿ ॥
(ಚಂದನವನ್ನು ದೇವರಿಗೆ ಅರ್ಪಿಸಿ)

## ಅಕ್ಷತೆ

ಗೋವಿಂದಾ ಪರಮಾನಂದ ಹರಿದ್ರಾಸಹಿತಾಕ್ಷತಾನ್ ।
ವಿಶ್ವೇಶ್ವರ ವಿಶಾಲಾಕ್ಷ ಗೃಹಾಣ ಪರಮೇಶ್ವರ ॥

ಶ್ರೀ ಲಕ್ಷ್ಮೀ ಪದ್ಮಾವತೀ ಸಮೇತ ಶ್ರೀ ವೇಂಕಟೇಶ್ವರ ಸ್ವಾಮಿನೇ ನಮಃ ।
ಅಕ್ಷತಾನ್ ಸಮರ್ಪಯಾಮಿ ॥
(ಅಕ್ಷತೆ ಕಾಳು ಹಾಕಿ, ಅರಿಶಿನ/ಕುಂಕುಮ ಮಿಶ್ರಿತ ಅಕ್ಕಿ)

## ಪುಷ್ಪಂ

ಸುಗಂಧಾನಿ ಸುಪುಷ್ಪಾಣಿ ಜಾಜೀಕುಂದಮುಖಾನಿ ಚ ।
ಮಾಲತೀ ವಕುಲಾದೀನಿ ಪೂಜಾರ್ಥಂ ಪ್ರತಿಗೃಹ್ಯತಾಮ್ ॥
ಶ್ರೀ ಲಕ್ಷ್ಮೀ ಪದ್ಮಾವತೀ ಸಮೇತ ಶ್ರೀ ವೇಂಕಟೇಶ್ವರ ಸ್ವಾಮಿನೇ ನಮಃ ॥
ಪುಷ್ಪಂ ಸಮರ್ಪಯಾಮಿ ॥ (ದೇವರಿಗೆ ಹೂವನ್ನು ಅರ್ಪಿಸಿ)

## ಅಥ ಅಂಗ ಪೂಜಾ

(ಶ್ರೀ ಸ್ವಾಮಿಗೆ ತುಳಸಿಯ ಒಂದೊಂದು ದಳ ಅರ್ಪಿಸುತ್ತಾ ಕೆಳಗಿನ ನಾಮಸ್ಮರಣೆ ಮಾಡಬೇಕು)

ಓಂ ಶ್ರೀ ವೇಂಕಟೇಶ್ವರಾಯ ನಮಃ । ಪಾದೌ ಪೂಜಯಾಮಿ ।
ಓಂ ಶ್ರೀ ವೇಂಕಟಾಚಲಾಧೀಶಾಯ ನಮಃ । ಗುಲ್ಫೌ ಪೂಜಯಾಮಿ ।
ಓಂ ಶ್ರೀ ಶ್ರೀಪ್ರದಾಯಕಾಯ ನಮಃ । ಜಾನುನೀ ಪೂಜಯಾಮಿ ।
ಓಂ ಪದ್ಮಾವತೀಪತಯೇ ನಮಃ । ಜಂಘೇ ಪೂಜಯಾಮಿ ।
ಓಂ ಜ್ಞಾನಪ್ರದಾಯ ನಮಃ । ಊರೂಂ ಪೂಜಯಾಮಿ ।
ಓಂ ಶ್ರೀನಿವಾಸಾಯ ನಮಃ । ಕಟಿಂ ಪೂಜಯಾಮಿ ।
ಓಂ ಮಹಾಭಾಗಾಯ ನಮಃ । ನಾಭಿಂ ಪೂಜಯಾಮಿ ।
ಓಂ ನಿರ್ಮಲಾಯ ನಮಃ । ಉದರಂ ಪೂಜಯಾಮಿ ।
ಓಂ ವಿಶಾಲಹೃದಯಾಯ ನಮಃ । ಹೃದಯಂ ಪೂಜಯಾಮಿ ।
ಓಂ ಪರಿಶುದ್ಧಾತ್ಮನೇ ನಮಃ । ಸ್ತನೌ ಪೂಜಯಾಮಿ ।
ಓಂ ಪುರುಷೋತ್ತಮಾಯ ನಮಃ । ಭುಜೌ ಪೂಜಯಾಮಿ ।
ಓಂ ಸ್ವರ್ಣಹಸ್ತಾಯ ನಮಃ । ಹಸ್ತೌ ಪೂಜಯಾಮಿ ।
ಓಂ ವರಪ್ರದಾಯ ನಮಃ । ಕಂಠಂ ಪೂಜಯಾಮಿ ।
ಓಂ ಲೋಕನಾಥಾಯ ನಮಃ । ಸ್ಕಂಧೌ ಪೂಜಯಾಮಿ ।
ಓಂ ಸರ್ವೇಶ್ವರಾಯ ನಮಃ । ಮುಖಂ ಪೂಜಯಾಮಿ ।
ಓಂ ರಸಜ್ಞಾಯ ನಮಃ । ನಾಸಿಕಾಂ ಪೂಜಯಾಮಿ ।

ಓಂ ಪುಣ್ಯಶ್ರವಣಕೀರ್ತನಾಯ ನಮಃ । ಶ್ರೋತ್ರೇ ಪೂಜಯಾಮಿ ।
ಓಂ ಪುಲ್ಲಾಂಬುಜವಿಲೋಚನಾಯ ನಮಃ । ನೇತ್ರೌ ಪೂಜಯಾಮಿ ।
ಓಂ ವರ್ಚಸ್ವಿನೇ ನಮಃ । ಲಲಾಟಂ ಪೂಜಯಾಮಿ ।
ಓಂ ರಮ್ಯವಿಗ್ರಹಾಯ ನಮಃ । ಸರ್ವಾಣ್ಯಂಗಾನಿ ಪೂಜಯಾಮಿ ।
ಶ್ರೀ ಲಕ್ಷ್ಮೀ ಪದ್ಮಾವತೀ ಸಮೇತ ಶ್ರೀ ವೇಂಕಟೇಶ್ವರ ಸ್ವಾಮಿನೇ ನಮಃ ।
ದಿವ್ಯಸುಂದರವಿಗ್ರಹಂ ಪೂಜಯಾಮಿ ॥

## ಶ್ರೀ ವೆಂಕಟೇಶ್ವರ ಅಷ್ಟೋತ್ತರ ಶತನಾಮಾವಳಿ

ಓಂ ವೇಂಕಟೇಶಾಯ ನಮಃ ।
ಓಂ ಶ್ರೀನಿವಾಸಾಯ ನಮಃ ।
ಓಂ ಲಕ್ಷ್ಮೀಪತಯೇ ನಮಃ ।
ಓಂ ಅನಾಮಯಾಯ ನಮಃ ।
ಓಂ ಅಮೃತಾಂಶಾಯ ನಮಃ ।
ಓಂ ಜಗದ್ವಂದ್ಯಾಯ ನಮಃ ।
ಓಂ ಗೋವಿಂದಾಯ ನಮಃ ।
ಓಂ ಶಾಶ್ವತಾಯ ನಮಃ ।
ಓಂ ಪ್ರಭವೇ ನಮಃ ।
ಓಂ ಶೇಷಾದ್ರಿನಿಲಯಾಯ ನಮಃ । (10)
ಓಂ ದೇವಾಯ ನಮಃ ।
ಓಂ ಕೇಶವಾಯ ನಮಃ ।
ಓಂ ಮಧುಸೂದನಾಯ ನಮಃ ।
ಓಂ ಅಮೃತಾಯ ನಮಃ ।
ಓಂ ಮಾಧವಾಯ ನಮಃ ।
ಓಂ ಕೃಷ್ಣಾಯ ನಮಃ ।
ಓಂ ಶ್ರೀಹರಯೇ ನಮಃ ।
ಓಂ ಜ್ಞಾನಪಂಜರಾಯ ನಮಃ ।
ಓಂ ಶ್ರೀವತ್ಸವಕ್ಷಸೇ ನಮಃ ।
ಓಂ ಸರ್ವೇಶಾಯ ನಮಃ । (20)
ಓಂ ಗೋಪಾಲಾಯ ನಮಃ ।
ಓಂ ಪುರುಷೋತ್ತಮಾಯ ನಮಃ ।
ಓಂ ಗೋಪೀಶ್ವರಾಯ ನಮಃ ।
ಓಂ ಪರಂಜ್ಯೋತಿಷೇ ನಮಃ ।
ಓಂ ವೈಕುಂಠಪತಯೇ ನಮಃ ।
ಓಂ ಅವ್ಯಯಾಯ ನಮಃ ।
ಓಂ ಸುಧಾತನವೇ ನಮಃ ।
ಓಂ ಯಾದವೇಂದ್ರಾಯ ನಮಃ ।
ಓಂ ನಿತ್ಯಯೌವನರೂಪವತೇ ನಮಃ ।
ಓಂ ಚತುರ್ವೇದಾತ್ಮಕಾಯ ನಮಃ । (30)
ಓಂ ವಿಷ್ಣವೇ ನಮಃ ।
ಓಂ ಅಚ್ಯುತಾಯ ನಮಃ ।
ಓಂ ಪದ್ಮಿನೀಪ್ರಿಯಾಯ ನಮಃ ।
ಓಂ ಧರಾಪತಯೇ ನಮಃ ।
ಓಂ ಸುರಪತಯೇ ನಮಃ ।
ಓಂ ನಿರ್ಮಲಾಯ ನಮಃ ।
ಓಂ ದೇವಪೂಜಿತಾಯ ನಮಃ ।
ಓಂ ಚತುರ್ಭುಜಾಯ ನಮಃ ।
ಓಂ ಚಕ್ರಧರಾಯ ನಮಃ ।
ಓಂ ತ್ರಿಧಾಮ್ನೇ ನಮಃ । (40)
ಓಂ ತ್ರಿಗುಣಾಶ್ರಯಾಯ ನಮಃ ।

ಓಂ ನಿರ್ವಿಕಲ್ಪಾಯ ನಮಃ ।
ಓಂ ನಿಷ್ಕಳಂಕಾಯ ನಮಃ ।
ಓಂ ನಿರಾಂತಕಾಯ ನಮಃ ।
ಓಂ ನಿರಂಜನಾಯ ನಮಃ ।
ಓಂ ನಿರಾಭಾಸಾಯ ನಮಃ ।
ಓಂ ನಿತ್ಯತೃಪ್ತಾಯ ನಮಃ ।
ಓಂ ನಿರ್ಗುಣಾಯ ನಮಃ ।
ಓಂ ನಿರುಪದ್ರವಾಯ ನಮಃ ।
ಓಂ ಗದಾಧರಾಯ ನಮಃ । (50)
ಓಂ ಶಾಂರ್ಙ್ಗಪಾಣಯೇ ನಮಃ ।
ಓಂ ನಂದಕಿನೇ ನಮಃ ।
ಓಂ ಶಂಖಧರಾಯ ನಮಃ ।
ಓಂ ಅನೇಕಮೂರ್ತಯೇ ನಮಃ ।
ಓಂ ಅವ್ಯಕ್ತಾಯ ನಮಃ ।
ಓಂ ಕಟಿಹಸ್ತಾಯ ನಮಃ ।
ಓಂ ವರಪ್ರದಾಯ ನಮಃ ।
ಓಂ ಅನೇಕಾತ್ಮನೇ ನಮಃ ।
ಓಂ ದೀನಬಂಧವೇ ನಮಃ ।
ಓಂ ಆರ್ತಲೋಕಾಭಯಪ್ರಾದಾಯ ನಮಃ ।
(60)
ಓಂ ಆಕಾಶರಾಜವರದಾಯ ನಮಃ ।
ಓಂ ಯೋಗಿಹೃತ್ಪದ್ಮಮಂದಿರಾಯ ನಮಃ ।
ಓಂ ದಾಮೋದರಾಯ ನಮಃ ।
ಓಂ ಕರುಣಾಕರಾಯ ನಮಃ ।
ಓಂ ಜಗತ್ಪಾಲಾಯ ನಮಃ ।
ಓಂ ಪಾಪಘ್ನಾಯ ನಮಃ ।
ಓಂ ಭಕ್ತವತ್ಸಲಾಯ ನಮಃ ।
ಓಂ ತ್ರಿವಿಕ್ರಮಾಯ ನಮಃ ।
ಓಂ ಶಿಂಶುಮಾರಾಯ ನಮಃ ।
ಓಂ ಜಟಾಮಕುಟಶೋಭಿತಾಯ ನಮಃ ।
(70)
ಓಂ ಶಂಖಮಧ್ಯೋಲ್ಲಸನ್ಮಂಜುಳಾಯ ನಮಃ ।
ಓಂ ಕಿಂಕಿಣ್ಯಾಢ್ಯ ಕರಂಡಕಾಯ ನಮಃ ।
ಓಂ ನೀಲಮೇಘಶ್ಯಾಮತನವೇ ನಮಃ ।
ಓಂ ಬಿಲ್ವಪತ್ರಾರ್ಚನಪ್ರಿಯಾಯ ನಮಃ ।
ಓಂ ಜಗದ್ವ್ಯಾಪಿನೇ ನಮಃ ।
ಓಂ ಜಗತ್ಕರ್ತ್ರೇ ನಮಃ ।
ಓಂ ಜಗತ್ಸಾಕ್ಷಿಣೇ ನಮಃ ।
ಓಂ ಜಗತ್ಪತಯೇ ನಮಃ ।
ಓಂ ಚಿಂತಿತಾರ್ಥಪ್ರದಾಯ ನಮಃ ।
ಓಂ ಜಿಷ್ಣವೇ ನಮಃ । (80)
ಓಂ ದಶಾರ್ಹಾಯ ನಮಃ ।
ಓಂ ದಶರೂಪವತೇ ನಮಃ ।
ಓಂ ದೇವಕೀನಂದನಾಯ ನಮಃ ।
ಓಂ ಶೌರಯೇ ನಮಃ ।
ಓಂ ಹಯಗ್ರೀವಾಯ ನಮಃ ।
ಓಂ ಜನಾರ್ದನಾಯ ನಮಃ ।
ಓಂ ಕನ್ಯಾಶ್ರವಣತಾರೇಜ್ಯಾಯ ನಮಃ ।
ಓಂ ಪೀತಾಂಬರಧರಾಯ ನಮಃ ।
ಓಂ ಅನಘಾಯ ನಮಃ ।
ಓಂ ವನಮಾಲಿನೇ ನಮಃ । (90)
ಓಂ ಪದ್ಮನಾಭಾಯ ನಮಃ ।
ಓಂ ಮೃಗಯಾಸಕ್ತಮಾನಸಾಯ ನಮಃ ।
ಓಂ ಅಶ್ವಾರೂಢಾಯ ನಮಃ ।
ಓಂ ಖಡ್ಗಧಾರಿಣೇ ನಮಃ ।
ಓಂ ಧನಾರ್ಜನಸಮುತ್ಸುಕಾಯ ನಮಃ ।

ಓಂ ಘನಸಾರಲಸನ್ಮಧ್ಯಕಸ್ತೂರೀ ತಿಲಕೋಜ್ವಲಾಯ ನಮಃ ।
ಓಂ ಸಚ್ಚಿದಾನಂದರೂಪಾಯ ನಮಃ ।
ಓಂ ಜಗನ್ಮಂಗಲದಾಯಕಾಯ ನಮಃ ।
ಓಂ ಯಜ್ಞರೂಪಾಯ ನಮಃ ।
ಓಂ ಯಜ್ಞಾಭೋಕ್ತ್ರೆ ನಮಃ । (100)
ಓಂ ಚಿನ್ಮಯಾಯ ನಮಃ ।
ಓಂ ಪರಮೇಶ್ವರಾಯ ನಮಃ ।
ಓಂ ಪರಮಾರ್ಥಪ್ರದಾಯಕಾಯ ನಮಃ ।
ಓಂ ಶಾಂತಾಯ ನಮಃ ।
ಓಂ ಶ್ರೀಪತೇ ನಮಃ ।
ಓಂ ದೋರ್ದಂಡವಿಕ್ರಮಾಯ ನಮಃ ।
ಓಂ ಪರಾತ್ಪರಾಯ ನಮಃ ।
ಓಂ ಪರಬ್ರಹ್ಮಣೇ ನಮಃ ।
ಓಂ ಶ್ರೀವಿಭವೇ ನಮಃ ।
ಓಂ ಜಗದೀಶ್ವರಾಯ ನಮಃ । (110)

## ಶ್ರೀ ಮಹಾಲಕ್ಷ್ಮೀ ಅಷ್ಟೋತ್ತರ ಶತನಾಮಾವಳಿ

ಓಂ ಪ್ರಕೃತ್ಯೈ ನಮಃ ।
ಓಂ ವಿಕೃತ್ಯೈ ನಮಃ ।
ಓಂ ವಿದ್ಯಾಯೈ ನಮಃ ।
ಓಂ ಸರ್ವಭೂತಹಿತಪ್ರದಾಯೈ ನಮಃ ।
ಓಂ ಶ್ರದ್ಧಾಯೈ ನಮಃ ।
ಓಂ ವಿಭೂತ್ಯೈ ನಮಃ ।
ಓಂ ಸುರಭ್ಯೈ ನಮಃ ।
ಓಂ ಪರಮಾತ್ಮಿಕಾಯೈ ನಮಃ ।
ಓಂ ವಾಚ್ಯಾಯೈ ನಮಃ ।
ಓಂ ಪದ್ಮಾಲಯಾಯೈ ನಮಃ । (10)
ಓಂ ಪದ್ಮಾಯೈ ನಮಃ ।
ಓಂ ಶುಚ್ಯೈ ನಮಃ ।
ಓಂ ಸ್ವಾಹಾಯೈ ನಮಃ ।
ಓಂ ಸ್ವಧಾಯೈ ನಮಃ ।
ಓಂ ಸುಧಾಯೈ ನಮಃ ।
ಓಂ ಧನ್ಯಾಯೈ ನಮಃ ।
ಓಂ ಹಿರಣ್ಮಯ್ಯೈ ನಮಃ ।
ಓಂ ಲಕ್ಷ್ಮೈ ನಮಃ ।
ಓಂ ನಿತ್ಯಪುಷ್ಟಾಯೈ ನಮಃ ।
ಓಂ ವಿಭಾವರ್ಯೈ ನಮಃ । (20)
ಓಂ ಅದಿತ್ಯೈ ನಮಃ ।
ಓಂ ದಿತ್ಯೈ ನಮಃ ।
ಓಂ ದೀಪ್ತಾಯೈ ನಮಃ ।
ಓಂ ವಸುಧಾಯೈ ನಮಃ ।
ಓಂ ವಸುಧಾರಿಣ್ಯೈ ನಮಃ ।
ಓಂ ಕಮಲಾಯೈ ನಮಃ ।
ಓಂ ಕಾಂತಾಯೈ ನಮಃ ।
ಓಂ ಕಾಮಾಕ್ಷ್ಯೈ ನಮಃ ।
ಓಂ ಕ್ರೋಧಸಂಭವಾಯೈ ನಮಃ ।
ಓಂ ಅನುಗ್ರಹಪ್ರದಾಯೈ ನಮಃ । (30)
ಓಂ ಬುದ್ಧಯೇ ನಮಃ ।
ಓಂ ಅನಘಾಯೈ ನಮಃ ।
ಓಂ ಹರಿವಲ್ಲಭಾಯೈ ನಮಃ ।
ಓಂ ಅಶೋಕಾಯೈ ನಮಃ ।
ಓಂ ಅಮೃತಾಯೈ ನಮಃ ।
ಓಂ ದೀಪ್ತಾಯೈ ನಮಃ ।
ಓಂ ಲೋಕಶೋಕವಿನಾಶಿನ್ಯೈ ನಮಃ ।
ಓಂ ಧರ್ಮನಿಲಯಾಯೈ ನಮಃ ।

ಓಂ ಕರುಣಾಯೈ ನಮಃ ।
ಓಂ ಲೋಕಮಾತ್ರೇ ನಮಃ । (40)
ಓಂ ಪದ್ಮಪ್ರಿಯಾಯೈ ನಮಃ ।
ಓಂ ಪದ್ಮಹಸ್ತಾಯೈ ನಮಃ ।
ಓಂ ಪದ್ಮಾಕ್ಷ್ಯೈ ನಮಃ ।
ಓಂ ಪದ್ಮಸುಂದರ್ಯೈ ನಮಃ ।
ಓಂ ಪದ್ಮೋದ್ಭವಾಯೈ ನಮಃ ।
ಓಂ ಪದ್ಮಮುಖ್ಯೈ ನಮಃ ।
ಓಂ ಪದ್ಮನಾಭಪ್ರಿಯಾಯೈ ನಮಃ ।
ಓಂ ರಮಾಯೈ ನಮಃ ।
ಓಂ ಪದ್ಮಮಾಲಾಧರಾಯೈ ನಮಃ ।
ಓಂ ದೇವ್ಯೈ ನಮಃ । (50)
ಓಂ ಪದ್ಮಿನ್ಯೈ ನಮಃ ।
ಓಂ ಪದ್ಮಗಂಧಿನ್ಯೈ ನಮಃ ।
ಓಂ ಪುಣ್ಯಗಂಧಾಯೈ ನಮಃ ।
ಓಂ ಸುಪ್ರಸನ್ನಾಯೈ ನಮಃ ।
ಓಂ ಪ್ರಸಾದಾಭಿಮುಖ್ಯೈ ನಮಃ ।
ಓಂ ಪ್ರಭಾಯೈ ನಮಃ ।
ಓಂ ಚಂದ್ರವದನಾಯೈ ನಮಃ ।
ಓಂ ಚಂದ್ರಾಯೈ ನಮಃ ।
ಓಂ ಚಂದ್ರಸಹೋದರ್ಯೈ ನಮಃ ।
ಓಂ ಚತುರ್ಭುಜಾಯೈ ನಮಃ । (60)
ಓಂ ಚಂದ್ರರೂಪಾಯೈ ನಮಃ ।
ಓಂ ಇಂದಿರಾಯೈ ನಮಃ ।
ಓಂ ಇಂದುಶೀತಲಾಯೈ ನಮಃ ।
ಓಂ ಆಹ್ಲಾದಜನನ್ಯೇ ನಮಃ ।
ಓಂ ಪುಷ್ಟ್ಯೈ ನಮಃ ।
ಓಂ ಶಿವಾಯೈ ನಮಃ ।
ಓಂ ಶಿವಕರ್ತ್ರ್ಯೈ ನಮಃ ।
ಓಂ ಸತ್ತಾಯೈ ನಮಃ ।
ಓಂ ವಿಮಲಾಯೈ ನಮಃ ।
ಓಂ ವಿಶ್ವಜನನ್ಯೈ ನಮಃ । (70)
ಓಂ ತುಷ್ಟ್ಯೈ ನಮಃ ।
ಓಂ ದಾರಿದ್ರ್ಯನಾಶಿನ್ಯೈ ನಮಃ ।
ಓಂ ಪ್ರೀತಿಪುಷ್ಕರಿಣ್ಯೈ ನಮಃ ।
ಓಂ ಶಾಂತಾಯೈ ನಮಃ ।
ಓಂ ಶುಕ್ಲಮಾಲಾಂಬರಾಯೈ ನಮಃ ।
ಓಂ ಶ್ರಿಯೈ ನಮಃ ।
ಓಂ ಭಾಸ್ಕರ್ಯೈ ನಮಃ ।
ಓಂ ಬಿಲ್ವನಿಲಯಾಯೈ ನಮಃ ।
ಓಂ ವರಾರೋಹಾಯೈ ನಮಃ ।
ಓಂ ಯಶಸ್ವಿನ್ಯೈ ನಮಃ । (80)
ಓಂ ವಸುಂಧರಾಯೈ ನಮಃ ।
ಓಂ ಉದಾರಾಂಗಾಯೈ ನಮಃ ।
ಓಂ ಹರಿಣ್ಯೈ ನಮಃ ।
ಓಂ ಹೇಮಮಾಲಿನ್ಯೈ ನಮಃ ।
ಓಂ ಧನಧಾನ್ಯಕರ್ತ್ರ್ಯೈ ನಮಃ ।
ಓಂ ಸಿದ್ಧಯೇ ನಮಃ ।
ಓಂ ಸ್ತ್ರೈಣ ಸೌಮ್ಯಾಯೈ ನಮಃ ।
ಓಂ ಶುಭಪ್ರದಾಯೈ ನಮಃ ।
ಓಂ ನೃಪವೇಶ್ಮಗತಾನಂದಾಯೈ ನಮಃ
ಓಂ ವರಲಕ್ಷ್ಮ್ಯೈ ನಮಃ । (90)
ಓಂ ವಸುಪ್ರದಾಯೈ ನಮಃ ।
ಓಂ ಶುಭಾಯೈ ನಮಃ ।
ಓಂ ಹಿರಣ್ಯಪ್ರಾಕಾರಾಯೈ ನಮಃ ।
ಓಂ ಸಮುದ್ರತನಯಾಯೈ ನಮಃ ।

ಓಂ ಜಯಾಯೈ ನಮಃ ।
ಓಂ ಮಂಗಳದೇವ್ಯೈ ನಮಃ ।
ಓಂ ವಿಷ್ಣುವೃಕ್ಷಸ್ಥಳಸ್ಥಿತಾಯೈ ನಮಃ ।
ಓಂ ವಿಷ್ಣುಪತ್ನ್ಯೈ ನಮಃ ।
ಓಂ ಪ್ರಸನ್ನಾಕ್ಷ್ಯೈ ನಮಃ ।
ಓಂ ನಾರಾಯಣಸಮಾಶ್ರಿತಾಯೈ ನಮಃ । (100)
ಓಂ ದಾರಿದ್ರ್ಯಧ್ವಂಸಿನ್ಯೈ ನಮಃ ।
ಓಂ ಮಹಾದೇವ್ಯೈ ನಮಃ ।
ಓಂ ಸರ್ವೋಪದ್ರವವಾರಿಣ್ಯೈ ನಮಃ ।
ಓಂ ನವದುರ್ಗಾಯೈ ನಮಃ ।
ಓಂ ಮಹಾಕಾಳ್ಯೈ ನಮಃ ।
ಓಂ ಬ್ರಹ್ಮವಿಷ್ಣುಶಿವಾತ್ಮಿಕಾಯೈ ನಮಃ ।
ಓಂ ತ್ರಿಕಾಲಜ್ಞಾನ ಸಂಪನ್ನಾಯೈ ನಮಃ ।
ಓಂ ಭುವನೇಶ್ವರ್ಯೈ ನಮಃ ।

# ಶ್ರೀ ಪದ್ಮಾವತೀ ಅಷ್ಟೋತ್ತರ ಶತನಾಮಾವಳಿ

ಓಂ ಪದ್ಮಾವತ್ಯೈ ನಮಃ ।
ಓಂ ದೇವ್ಯೈ ನಮಃ ।
ಓಂ ಪದ್ಮೋದ್ಭವಾಯೈ ನಮಃ ।
ಓಂ ಕರುಣಾಪ್ರದಾಯಿನ್ಯೈ ನಮಃ ।
ಓಂ ಸಹೃದಯಾಯೈ ನಮಃ ।
ಓಂ ತೇಜಃಸ್ವರೂಪಿಣ್ಯೈ ನಮಃ ।
ಓಂ ಕಮಲಮುಖ್ಯೈ ನಮಃ ।
ಓಂ ಪದ್ಮಧರಾಯ ನಮಃ ।
ಓಂ ಶ್ರಿಯೈ ನಮಃ ।
ಓಂ ಪದ್ಮನೇತ್ರಾಯೈ ನಮಃ । (10)
ಓಂ ಪದ್ಮಕರಾಯೈ ನಮಃ ।
ಓಂ ಸುಗುಣಾಯೈ ನಮಃ ।
ಓಂ ಕುಂಕುಮಪ್ರಿಯಾಯೈ ನಮಃ ।
ಓಂ ಹೇಮವರ್ಣಾಯೈ ನಮಃ ।
ಓಂ ಚಂದ್ರವಂದಿತಾಯೈ ನಮಃ ।
ಓಂ ಧಗಧಗಪ್ರಕಾಶ ಶರೀರಧಾರಿಣ್ಯೈ ನಮಃ ।
ಓಂ ವಿಷ್ಣುಪ್ರಿಯಾಯೈ ನಮಃ ।
ಓಂ ನಿತ್ಯಕಲ್ಯಾಣ್ಯೈ ನಮಃ ।
ಓಂ ಕೋಟಿಸೂರ್ಯ ಪ್ರಕಾಶಿನ್ಯೈ ನಮಃ ।
ಓಂ ಮಹಾಸೌಂದರ್ಯರೂಪಿಣ್ಯೈ ನಮಃ । (20)
ಓಂ ಭಕ್ತವತ್ಸಲಾಯೈ ನಮಃ ।
ಓಂ ಬ್ರಹ್ಮಾಂಡವಾಸಿನ್ಯೈ ನಮಃ ।
ಓಂ ಸರ್ವವಾಂಛಿತ ಫಲದಾಯಿನ್ಯೈ ನಮಃ ।
ಓಂ ಧರ್ಮಸಂಕಲ್ಪಾಯೈ ನಮಃ ।
ಓಂ ದಾಕ್ಷಿಣ್ಯಕಟಾಕ್ಷಿಣ್ಯೈ ನಮಃ ।
ಓಂ ಭಕ್ತಿಪ್ರದಾಯಿನ್ಯೈ ನಮಃ ।
ಓಂ ಗುಣತ್ರಯವಿವರ್ಜಿತಾಯೈ ನಮಃ ।
ಓಂ ಕಲಾಷೋಡಶ ಸಂಯುತಾಯೈ ನಮಃ ।
ಓಂ ಸರ್ವಲೋಕಾನಾಂಜನನ್ಯೈ ನಮಃ ।
ಓಂ ಮುಕ್ತಿದಾಯಿನ್ಯೈ ನಮಃ । (30)
ಓಂ ದಯಾಮೃತಾಯೈ ನಮಃ ।
ಓಂ ಪ್ರಜ್ಞಾಯೈ ನಮಃ ।
ಓಂ ಮಹಾಧರ್ಮಾಯೈ ನಮಃ ।
ಓಂ ಧರ್ಮರೂಪಿಣ್ಯೈ ನಮಃ ।
ಓಂ ಅಲಂಕಾರಪ್ರಿಯಾಯೈ ನಮಃ ।
ಓಂ ಸರ್ವದಾರಿದ್ರ್ಯಧ್ವಸಿಂನ್ಯೈ ನಮಃ ।

ಓಂ ಶ್ರೀವೇಂಕಟೇಶ್ವರವಕ್ಷ ಸ್ಥಳಸ್ಥಿತಾಯೈ ನಮಃ ।
ಓಂ ಲೋಕಶೋಕವಿನಾಶಿನ್ಯೈ ನಮಃ ।
ಓಂ ವೈಷ್ಣವ್ಯೈ ನಮಃ ।
ಓಂ ತಿರುಚಾನೂರು ಪುರವಾಸಿನ್ಯೈ ನಮಃ । (40)
ಓಂ ವೇದವೇದ್ಯವಿಶಾರದಾಯೈ ನಮಃ ।
ಓಂ ವಿಷ್ಣುಪಾದಸೇವಿತಾಯೈ ನಮಃ ।
ಓಂ ರತ್ನಪ್ರಕಾಶಕೀರಿಟಧಾರಿಣ್ಯೈ ನಮಃ ।
ಓಂ ಜಗನ್ಮೋಹಿನ್ಯೈ ನಮಃ ।
ಓಂ ಶಕ್ತಿಸ್ವರೂಪಿಣ್ಯೈ ನಮಃ ।
ಓಂ ಪ್ರಸನ್ನೋದಯಾಯೈ ನಮಃ ।
ಓಂ ಇಂದ್ರಾದಿದೈವತ ಯಕ್ಷಕಿನ್ನರ ಕಿಂಪುರುಷ ಪೂಜಿತಾಯೈ ನಮಃ ।
ಓಂ ಸರ್ವಲೋಕನಿವಾಸಿನ್ಯೈ ನಮಃ ।
ಓಂ ಭೂಜಯಾಯೈ ನಮಃ ।
ಓಂ ಐಶ್ವರ್ಯಪ್ರದಾಯಿನ್ಯೈ ನಮಃ । (50)
ಓಂ ಶಾಂತಾಯೈ ನಮಃ ।
ಓಂ ಉನ್ನತಸ್ಥಾನಸ್ಥಿತಾಯೈ ನಮಃ ।
ಓಂ ಮಂದಾರಕಾಮಿನ್ಯೈ ನಮಃ ।
ಓಂ ಕಮಲಾಕರಾಯೈ ನಮಃ ।
ಓಂ ವೇದಾಂತಜ್ಞಾನರೂಪಿಣ್ಯೈ ನಮಃ ।
ಓಂ ಸರ್ವಸಂಪತ್ಸ್ವರೂಪಿಣ್ಯೈ ನಮಃ ।
ಓಂ ಕೋಟಿಸೂರ್ಯ ಸಮಪ್ರಭಾಯೈ ನಮಃ ।
ಓಂ ಪೂಜಾಫಲದಾಯಿನ್ಯೈ ನಮಃ ।
ಓಂ ಕಮಲಾಸನಾದಿ ಸರ್ವದೇವತಾವಂದಿತಾಯೈ ನಮಃ ।
ಓಂ ವೈಕುಂಠವಾಸಿನ್ಯೈ ನಮಃ । (60)
ಓಂ ಅಭಯದಾಯಿನ್ಯೈ ನಮಃ ।
ಓಂ ದ್ರಾಕ್ಷಾಫಲಪಾಯಸಪ್ರಿಯಾಯೈ ನಮಃ ।
ಓಂ ನೃತ್ಯಗೀತಪ್ರಿಯಾಯೈ ನಮಃ ।
ಓಂ ಕ್ಷೀರಸಾಗರೋದ್ಭವಾಯೈ ನಮಃ ।
ಓಂ ಆಕಾಶಾರಾಜ ಪುತ್ರಿಕಾಯೈ ನಮಃ ।
ಓಂ ಸುವರ್ಣಹಸ್ತಧಾರಿಣ್ಯೈ ನಮಃ ।
ಓಂ ಕಾಮರೂಪಿಣ್ಯೈ ನಮಃ ।
ಓಂ ಕರುಣಾಕಟಾಕ್ಷಧಾರಿಣ್ಯೈ ನಮಃ ।
ಓಂ ಅಮೃತಾಂಬುಧಿಜಾಯೈ ನಮಃ ।
ಓಂ ಭೂಲೋಕಸ್ವರ್ಗ ಸುಖದಾಯಿನ್ಯೈ ನಮಃ । (70)
ಓಂ ಅಷ್ಟದಿಕ್ಪಾಲಕಾಧಿಪತಯೇ ನಮಃ ।
ಓಂ ಮನ್ಮಥದರ್ಪ ಸಂಹಾರಿಣ್ಯೈ ನಮಃ ।
ಓಂ ಕಮಲಾರ್ಥಭಾಗಾಯೈ ನಮಃ ।
ಓಂ ಸ್ವಲ್ಪಾಪರಾಧ ಮಹಾಪರಾಧ ಕ್ಷಮಾಯೈ ನಮಃ ।
ಓಂ ಷಟ್ಕೋಟಿತೀರ್ಥವಾಸಿತಾಯೈ ನಮಃ ।
ಓಂ ನಾರದಾದಿಮುನಿಶ್ರೇಷ್ಠಪೂಜಿತಾಯೈ ನಮಃ ।
ಓಂ ಆದಿಶಂಕರಪೂಜಿತಾಯೈ ನಮಃ ।
ಓಂ ಪ್ರೀತಿದಾಯಿನ್ಯೈ ನಮಃ ।
ಓಂ ಸೌಭಾಗ್ಯಪ್ರದಾಯಿನ್ಯೈ ನಮಃ ।
ಓಂ ಮಹಾಕೀರ್ತಿ ಪ್ರದಾಯಿನ್ಯೈ ನಮಃ । (80)
ಓಂ ಕೃಷ್ಣಾತಿಪ್ರಿಯಾಯೈ ನಮಃ ।
ಓಂ ಗಂಧರ್ವ ಶಾಪವಿಮೋಚಕಾಯೈ ನಮಃ ।
ಓಂ ಕೃಷ್ಣಪತ್ನ್ಯೈ ನಮಃ ।
ಓಂ ತ್ರಿಲೋಕಪೂಜಿತಾಯೈ ನಮಃ ।
ಓಂ ಜಗನ್ಮೋಹಿನ್ಯೈ ನಮಃ ।

ಓಂ ಸುಲಭಾಯ್ಯೈ ನಮಃ ।
ಓಂ ಸುಶೀಲಾಯ್ಯೈ ನಮಃ ।
ಓಂ ಆಂಜನಾಸುತಾನುಗ್ರಹ ಪ್ರದಾಯಿನ್ಯೈ ನಮಃ ।
ಓಂ ಭಕ್ತ್ಯೈಯ ನಮಃ ।
ಓಂ ಸಂಧ್ಯಾವಂದಿನ್ಯೈ ನಮಃ । (90)
ಓಂ ಸರ್ವಲೋಕಮಾತೇ ನಮಃ ।
ಓಂ ಅಭಿಮತದಾಯಿನ್ಯೈ ನಮಃ ।
ಓಂ ಲಲಿತಾವಧೂತ್ಯೈ ನಮಃ ।
ಓಂ ಸಮಸ್ತಶಾಸ್ತ್ರ ವಿಶಾರದಾಯ್ಯೈ ನಮಃ ।
ಓಂ ಸುವರ್ಣಾಭರಣಧಾರಿಣ್ಯೈ ನಮಃ ।
ಓಂ ಇಹಪರಲೋಕ ಸುಖಪ್ರದಾಯಿನ್ಯೈ ನಮಃ ।
ಓಂ ಕರವೀರನಿವಾಸಿನ್ಯೈ ನಮಃ ।
ಓಂ ನಾಗಲೋಕಮಣಿಸಹ ಆಕಾಶಸಿಂಧು ಕಮಲೇಶ್ವರ ಪೂರಿತರಥಗಮನಾಯ್ಯೈ ನಮಃ ।
ಓಂ ಶ್ರೀ ಶ್ರೀನಿವಾಸಪ್ರಿಯಾಯ್ಯೈ ನಮಃ ।
ಓಂ ಚಂದ್ರಮಂಡಲಸ್ಥಿತಾಯ್ಯೈ ನಮಃ । (100)
ಓಂ ಅಳಿವೇಲು ಮಂಗಾಯ್ಯೈ ನಮಃ ।
ಓಂ ದಿವ್ಯಮಂಗಳಧಾರಿಣ್ಯೈ ನಮಃ ।
ಓಂ ಸುಕಲ್ಯಾಣಪೀಠಸ್ಥಿತಾಯ್ಯೈ ನಮಃ ।
ಓಂ ಕಾಮಕವನಪುಷ್ಪ ಪ್ರಿಯಾಯ್ಯೈ ನಮಃ ।
ಓಂ ಕೋಟಿ ಮನ್ಮಥರೂಪಿನ್ಯೈ ನಮಃ ।
ಓಂ ಭಾನುಮಂಡಲರೂಪಿಣ್ಯೈನಮಃ ।
ಓಂ ಪದ್ಮಪಾದಾಯ್ಯೈ ನಮಃ ।
ಓಂ ರಮಾಯ್ಯೈ ನಮಃ ।
ಓಂ ಸರ್ವಲೋಕಸಭಾಂತರಧಾರಿಣ್ಯೈ ನಮಃ ।
ಓಂ ಸರ್ವಮಾನಸವಾಸಿನ್ಯೈ ನಮಃ । (110)
ಓಂ ಸರ್ವಾಯ್ಯೈ ನಮಃ ।
ಓಂ ವಿಶ್ವರೂಪಾಯ್ಯೈ ನಮಃ ।
ಓಂ ದಿವ್ಯಜ್ಞಾನಾಯ್ಯೈ ನಮಃ ।
ಓಂ ಸ್ವಮಂಗಳರೂಪಿಣ್ಯೈ ನಮಃ ।
ಓಂ ಸರ್ವಾನುಗ್ರಹಪ್ರದಾಯಿನ್ಯೈ ನಮಃ ।
ಓಂ ಓಂಕಾರಸ್ವರೂಪಿಣ್ಯೈ ನಮಃ ।
ಓಂ ಬ್ರಹ್ಮಜ್ಞಾನಸಂಭೂತಾಯ್ಯೈ ನಮಃ ।
ಓಂ ಶ್ರೀಪದ್ಮಾವತ್ಯೈ ನಮಃ ।
ಓಂ ಸದ್ಯೋವೇದವತ್ಯೈ ನಮಃ ।
ಓಂ ಶ್ರೀಮಹಾಲಕ್ಷ್ಮ್ಯೈ ನಮಃ । (120)

## ಧೂಪ

ದಶಾಂಗಮ್ ಗುಗ್ಗಲೋಪೇತಂ ಗೋಘೃತೇನ ಸಮನ್ವಿತಂ ।
ಧೂಪಂ ಗೃಹಾಣ ದೇವೇಶ ಸರ್ವಲೋಕ ನಮಸ್ಕೃತ ॥
ಶ್ರೀ ಲಕ್ಷ್ಮೀ ಪದ್ಮಾವತೀ ಸಮೇತ ಶ್ರೀ ವೇಂಕಟೇಶ್ವರ ಸ್ವಾಮಿನೇ ನಮಃ । ಧೂಪಮಾಘ್ರಾಪಯಾಮಿ ॥

(ಅಗರಬತ್ತಿ ಅಥವಾ ಚಂದನದ ಬತ್ತಿಯನ್ನು ಎರಡೂ ಕೈಗಳಲ್ಲಿ ಹಿಡಿದು ಪ್ರದಕ್ಷಿಣಾಕಾರವಾಗಿ ದೇವರ ಮುಂದೆ ಆಪಾದಮಸ್ತಕವಾಗಿ ಅರ್ಪಿಸಿ.)

## ದೀಪಂ

ತ್ರಿಲೋಕೇಶ ಮಹಾದೇವ ಸರ್ವಜ್ಞಾನ ಪ್ರದಾಯಕ ।
ದೀಪಂ ದಾಸ್ಯಾಮಿ ದೇವೇಶ ರಕ್ಷ ಮಾಮ್ ಭಕ್ತವತ್ಸಲ ॥
ಶ್ರೀ ಲಕ್ಷ್ಮೀ ಪದ್ಮಾವತೀ ಸಮೇತ ಶ್ರೀ ವೇಂಕಟೇಶ್ವರ ಸ್ವಾಮಿನೇ ನಮಃ ।
ದೀಪಂ ಪರ್ಶಯಾಮಿ ॥ (ದೀಪವನ್ನು ದೇವರಿಗೆ ತೋರಿಸಿ.)

## ನೈವೇದ್ಯಂ

ದೇವರ ಬಲಭಾಗದಲ್ಲಿ ಕಲಶದ ನೀರಿನಿಂದ ಚತುಷ್ಕೋಣಮಂಡಲವನ್ನು ರಚಿಸಿ ಅದರಲ್ಲಿ ಶ್ರೀಕಾರವನ್ನು ಬರೆದು ಅದರ ಮೇಲೆ ನೈವೇದ್ಯದ ಪದಾರ್ಥಗಳನ್ನು ಇಟ್ಟು, ತುಪ್ಪದಿಂದ ಅಭಿಘಾರಮಾಡಿ, ತುಳಸೀದಳದೊಂದಿಗೆ ಸ್ವಲ್ಪ ನೀರನ್ನು ಬಲಗೈಯಲ್ಲಿ ಹಿಡಿದು ಓಂ ಶ್ರೀ ವೇಂಕಟೇಶಾಯ ನಮಃ ಎಂದು ಜಪಿಸಿ, ನೈವೇದ್ಯವನ್ನು ಪ್ರೋಕ್ಷಿಸಿ, ತುಳಸೀದಳವನ್ನು ನೈವೇದ್ಯ ಪದಾರ್ಥದ ಮೇಲಿರಿಸಿ ಮಂತ್ರಗಳನ್ನು ಪಠಿಸಬೇಕು.

ನಾನಾಖ್ಯಾದ್ಯಮಯಂ ದಿವ್ಯಂ ನೈವೇದ್ಯಂ ತೇ ನಿವೇದಿತಂ ।
ಭಕ್ತ್ಯಾ ಶ್ರೀ ಲಕ್ಷ್ಮೀವೇಂಕಟೇಶ ವೈಕುಂಠೇಶ ಗೃಹಾಣ ಭೋಃ ॥
ಓಂ ಭೂರ್ಭುವಃ ಸ್ಸುವಃ ಓಂ ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ ।
ಧಿಯೋ ಯೋ ನಃ ಪ್ರಚೋದಯಾತ್ ಸತ್ಯಂ ತ್ವರ್ತೇನ ಪರಿಷಿಂಚಾಮಿ ॥
ಅಮೃತೋಪಸ್ತರಣಮಸಿ ಸ್ವಾಹಾ ॥
ನಾನಾವಿಧಫಲೋಪೇತಂ ನೈವೇದ್ಯಂ ಪ್ರತಿಗೃಹ್ಯತಾಮ್ ।
ಷಡ್ರಸೋಪೇತಂ ಭಕ್ಷ್ಯಶಾಕಸಮನ್ವಿತಮ್ ॥
ವಿಶ್ವೇಶ್ವರಾಯ ದೇವಾಯ ತಥಾ ವಿಶ್ವೋದ್ಭವಾಯ ಚ ।
ವಿಶ್ವಾನಾಂ ಪತಯೇ ತುಭ್ಯಂ ಗೋವಿಂದಾಯ ನಮೋ ನಮಃ ॥
ಸರ್ವೈರ್ಭಕ್ಷ್ಯೈಃಸುಸಂಭೋಜ್ಯೈಃ ರಸೈಃ ಷಡ್ಭಿಃ ಸಮನ್ವಿತಮ್ ।
ನೈವೇದ್ಯಂ ತು ಮಯಾನೀತಂ ಗೃಹಾಣ ಪುರುಷೋತ್ತಮ ।
ಶ್ರೀ ಲಕ್ಷ್ಮೀ ಪದ್ಮಾವತೀ ಸಮೇತ ಶ್ರೀ ವೇಂಕಟೇಶ್ವರ ಸ್ವಾಮಿನೇ ನಮಃ ।
ನೈವೇದ್ಯಂ ಸಮರ್ಪಯಾಮಿ ॥

(ದೇವರಿಗೆ ನೈವೇದ್ಯವನ್ನು ಸಮರ್ಪಿಸುವಾಗ ಬಾಳೇ ಹಣ್ಣನ್ನು ಸಮರ್ಪಿಸುವಾಗ ಕದಲೀಫಲಂ ಎಂದೂ, ತೆಂಗಿನಕಾಯಿ ಸಮರ್ಪಿಸುವಾಗ ನಾರಿಕೇಳ ಫಲಂ ಎಂದೂ ಹೇಳುತ್ತಾ 'ನಿವೇದಯಾಮಿ' ಎಂದು ನುಡಿಯಬೇಕು. ಬೆಲ್ಲವನ್ನು ಅರ್ಪಿಸುತ್ತಿದ್ದಲ್ಲಿ 'ಗುಡೋಪಹಾರ' ನೈವೇದ್ಯಮ್ ಸಮರ್ಪಯಾಮಿ ಎಂದು ಹೇಳಬೇಕು.)

ಓಂ ಪ್ರಾಣಾಯ ಸ್ವಾಹಾ, ಓಂ ಅಪಾನಾಯ ಸ್ವಾಹಾ, ಓಂ ವ್ಯಾನಾಯ ಸ್ವಾಹಾ,
ಓಂ ಉದಾನಾಯ ಸ್ವಾಹಾ, ಓಂ ಸಮಾನಾಯ ಸ್ವಾಹಾ, ಓಂ ಬ್ರಹ್ಮಣೇ ಸ್ವಾಹಾ ॥
(ಶಂಖ/ಉದ್ಧರಣೆಯ ಮೂಲಕ ನೀರನ್ನು ಅರ್ಘ್ಯಪಾತ್ರೆಯಲ್ಲಿ ಬಿಡಬೇಕು.)
ಓಂ ಭೂಃ । ಓಂ ಭುವಃ । ಓಗ್ಂ ಸುವಃ । ಓಂ ಮಹಃ ।
ಓಂ ಜನಃ । ಓಂ ತಪಃ । ಓಗ್ಂ ಸತ್ಯಮ್ ।
ಓಂ ತತ್ಸವಿತುರ್ವರೇಣ್ಯಂ ಭರ್ಗೋ 'ದೇವಸ್ಯ' ಧೀಮಹಿ ॥
ಧಿಯೋ ಯೋ ನಃ ಪ್ರಚೋದಯಾತ್
ಓಂ ಆಪೋ ಜ್ಯೋತೀರಸೋಽಮೃತಂ ಬ್ರಹ್ಮಭೂರ್ಭುವಃಸ್ಸುವರೋಮ್ ॥
ಮಧ್ಯೇ ಮಧ್ಯೇ ಪಾನೀಯಂ ಸಮರ್ಪಯಾಮಿ ॥
(ಉದ್ಧರಣೆಯಲ್ಲಿ ಕಲಶದ ನೀರನ್ನು ತೆಗೆದುಕೊಂಡು ಅರ್ಘ್ಯಪಾತ್ರೆಯಲ್ಲಿ ಬಿಟ್ಟು)

ಅಮೃತಾಪಿಧಾನಮಸಿ ಸ್ವಾಹಾ, ಉತ್ತರಾಪೋಷಣಂ ಸಮರ್ಪಯಾಮಿ, ಹಸ್ತೌ ಪ್ರಕ್ಷಾಲಯಾಮಿ, ಪಾದೌ ಪ್ರಕ್ಷಾಲಯಾಮಿ, ಪುನರಾಚಮನೀಯಂ ಸಮರ್ಪಯಾಮಿ ॥

## ತಾಂಬೂಲಂ

ಪೂಗೀಫಲಸಮಾಯುಕ್ತಂ ನಾಗವಲ್ಲ್ಯಾ ಸಮನ್ವಿತಮ್ ।
ಕರ್ಪೂರೇಲಾಸಮಾಯುಕ್ತಂ ತಾಂಬೂಲಂ ಪ್ರತಿಗೃಹ್ಯತಾಮ್ ॥
ಶ್ರೀ ಲಕ್ಷ್ಮೀ ಪದ್ಮಾವತೀ ಸಮೇತ ಶ್ರೀ ವೇಂಕಟೇಶ್ವರ ಸ್ವಾಮಿನೇ ನಮಃ ।
ತಾಂಬೂಲಂ ಸಮರ್ಪಯಾಮಿ ॥

## ಮಂಗಳನೀರಾಜನಂ

ಶ್ರಿಯಃ ಕಾಂತಾಯ ಕಲ್ಯಾಣ ನಿಧಯೇ ನಿಧಯೇಽರ್ಥಿನಾಮ್ ।
ಶ್ರೀ ವೇಂಕಟನಿವಾಸಾಯ ಶ್ರೀನಿವಾಸಾಯ ಮಂಗಳಂ ॥
ಶ್ರಿಯೇ ಜಾತಃ ಶ್ರಿಯ ಆ ನಿರಿಯಾಯ ಶ್ರಿಯಂ ವಯೋ ಜರಿತೃಭ್ಯೋ ದಧಾತಿ ।
ಶ್ರಿಯಂ ವಸಾನಾ ಅಮೃತತ್ವಮಾಯನ್ ಭವಂತಿ ಸತ್ಯಾ ಸ ಮಿಥಾಮಿತದ್ರೌ ॥
ಶ್ರೀ ಲಕ್ಷ್ಮೀ ಪದ್ಮಾವತೀ ಸಮೇತ ಶ್ರೀ ವೇಂಕಟೇಶ್ವರ ಸ್ವಾಮಿನೇ ನಮಃ ।
ನೀರಾಜನಂದರ್ಶಯಾಮಿ ॥

(ಆರತಿ ಮಾಡಿದ ನಂತರ ಉದ್ಧರಣೆಯಲ್ಲಿ ಕಲಶದ ನೀರನ್ನು ತೆಗೆದುಕೊಂಡು ಅರ್ಘ್ಯಪಾತ್ರೆಯಲ್ಲಿ ವಿಸರ್ಜಿಸಿ. "ಪುನರಾಚಮನೀಯಂ ಸಮರ್ಪಯಾಮಿ" ಎನ್ನಬೇಕು)

# ಮಂತ್ರ ಪುಷ್ಪಂ

(ಎರಡು ಕೈಗಳಲ್ಲಿ ಒಂದು ಪುಷ್ಪ ಹಾಗೂ ಮಂತ್ರಾಕ್ಷತೆ ಕಾಳುಗಳನ್ನು ತೆಗೆದುಕೊಂಡು ಕೆಳಗಿನ ಮಂತ್ರ ಹೇಳಿ)

ಓಂ ಸಹಸ್ರ ಶೀರ್ಷಂ ದೇವಂ ವಿಶ್ವಾಕ್ಷಂ ವಿಶ್ವಶಂಭುವಂ ।
ವಿಶ್ವಂ ನಾರಾಯಣಂ ದೇವಮಕ್ಷರಂ ಪರಮಂ ಪದಮ್ ॥ 1 ॥
ವಿಶ್ವತಃ ಪರಮಾನ್ನಿತ್ಯಂ ವಿಶ್ವಂ ನಾರಾಯಣಗ್ಂ ಹರಿಮ್ ।
ವಿಶ್ವಮೇವೇದಂ ಪುರುಷಸ್ತದ್ವಿಶ್ವಮುಪಜೀವತಿ ॥ 2 ॥
ಪತಿಂ ವಿಶ್ವಸ್ಯಾತ್ಮೇಶ್ವರಗ್ಂ ಶಾಶ್ವತಗ್ಂ ಶಿವಮಚ್ಯುತಮ್ ।
ನಾರಾಯಣಂ ಮಹಾಜ್ಞೇಯಂ ವಿಶ್ವಾತ್ಮಾನಂ ಪರಾಯಣಮ್ ॥ 3 ॥
ನಾರಾಯಣ ಪರೋ ಜ್ಯೋತಿರಾತ್ಮಾ ನಾರಾಯಣಃ ಪರಃ ।
ನಾರಾಯಣ ಪರಂ ಬ್ರಹ್ಮ ತತ್ತ್ವಂ ನಾರಾಯಣಃ ಪರಃ ।
ನಾರಾಯಣಂ ಪರೋ ಧ್ಯಾತಾ ಧ್ಯಾನಂ ನಾರಾಯಣಃ ಪರಃ ॥ 4 ॥
ಯಚ್ಚ ಕಿಂಚಿಜ್ಜಗತ್ಸರ್ವಂ ದೃಶ್ಯತೇ ಶ್ರೂಯತೇಽಪಿವಾ ।
ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಸ್ಸ್ಥಿತಃ ॥ 5 ॥
ಅನಂತಮವ್ಯಯಂ ಕವಿಗ್ಂ ಸಮುದ್ರೇಂತಂ ವಿಶ್ವಶಂಭುವಮ್ ।
ಪದ್ಮಕೋಶ ಪ್ರತೀಕಾಶಗ್ಂ ಹೃದಯಂ ಚಾಪ್ಯಧೋಮುಖಂ ॥ 6 ॥
ಅಧೋನಿಷ್ಟ್ಯಾ ವಿತಸ್ತ್ಯಾಂತೇ ನಾಭ್ಯಾಮುಪರಿ ತಿಷ್ಠತಿ ।
ಜ್ವಾಲಾಮಲಾ ಕುಲಂ ಭಾತೀ ವಿಶ್ವಸ್ಯಾಯತನಂ ಮಹತ್ ॥ 7 ॥
ಸಂತತಗ್ಂ ಶಿಲಾಭಿಸ್ತು ಲಂಬತ್ಯಾಕೋಶಸನ್ನಿಭಂ ।
ತಸ್ಯಾಂತೇ ಸುಷಿರಗ್ಂ ಸೂಕ್ಷ್ಮಂ ತಸ್ಮಿನ್ ಸರ್ವಂ ಪ್ರತಿಷ್ಠಿತಂ ॥ 8 ॥
ತಸ್ಯ ಮಧ್ಯೇ ಮಹಾನಗ್ನಿರ್ವಿಶ್ವಾರ್ಚಿರ್ವಿಶ್ವತೋ ಮುಖಃ ।

ಸೋಽಗ್ರಭುಗ್ವಿಭಜಂತಿಷ್ಠನ್ನಾಹಾರಮಜರಃ ಕವಿಃ ॥ 9 ॥
ತಿರ್ಯಗೂರ್ಧ್ವಮಧಶ್ಶಾಯೀ ರಶ್ಮಯಸ್ತಸ್ಯ ಸಂತತಾ ।
ಸಂತಾಪಯತಿ ಸ್ವಂ ದೇಹಮಾಪಾದತಲಮಸ್ತಕಃ ।
ತಸ್ಯ ಮಧ್ಯೇ ವಹ್ನಿಶಿಖಾ ಅಣೀಯೋರ್ಧ್ವಾ ವ್ಯವಸ್ಥಿತಃ ॥ 10 ॥
ನೀಲತೋ ಯದಮಧ್ಯಸ್ಥಾಽದ್ವಿದ್ಯುಲ್ಲೇಖೇವ ಭಾಸ್ವರಾ ।
ನೀವಾರಶೂಕವತ್ತನ್ವೀ ಪೀತಾಭಾಸ್ವತ್ಯಣೂಪಮಾ ॥ 11 ॥
ತಸ್ಯಾಶ್ಶಿಖಾಯಾ ಮಧ್ಯೆ ಪರಮಾತ್ಮಾ ವ್ಯವಸ್ಥಿತಃ ।
ಸ ಬ್ರಹ್ಮ ಸ ಶಿವಸ್ಸ ಹರಿಸ್ಸೇಂದ್ರಸ್ಸೋಽಕ್ಷರಃ ಪರಮಸ್ಸ್ವರಾಟ್ ॥ 12 ॥
ಋತಗ್ಂ ಸತ್ಯಂ ಪರಂ ಬ್ರಹ್ಮಪುರುಷಂ ಕೃಷ್ಣಪಿಂಗಲಂ ।
ಊರ್ಧ್ವರೇತಂ ವಿರೂಪಾಕ್ಷಂ ವಿಶ್ವರೂಪಾಯ ವೈ ನಮೋ ನಮಃ ॥ 13 ॥
ಓ ನಾರಾಯಣಾಯ ವಿದ್ಮಹೇ ವಾಸುದೇವಾಯ ಧೀಮಹಿ ।
ತನ್ನೋ ವಿಷ್ಣುಃ ಪ್ರಚೋದಯಾತ್ ॥
ಶ್ರೀ ಲಕ್ಷ್ಮೀ ಪದ್ಮಾವತೀ ಸಮೇತ ಶ್ರೀ ವೇಂಕಟೇಶ್ವರ ಸ್ವಾಮಿನೇ ನಮಃ ।
ಸುವರ್ಣ ದಿವ್ಯಮಂತ್ರಪುಷ್ಪಮ್ ಸಮರ್ಪಯಾಮಿ ॥

## ಪ್ರದಕ್ಷಿಣ ನಮಸ್ಕಾರ

ಯಾನಿಕಾನಿ ಚ ಪಾಪಾನಿ ಜನ್ಮಾಂತರ ಕೃತಾನಿ ಚ ।
ತಾನಿ ತಾನಿ ಪ್ರಣಶ್ಯಂತಿ ಪ್ರದಕ್ಷಿಣ ಪದೇ ಪದೇ ॥
ಪಾಪೋಹಂ ಪಾಪಕರ್ಮಾಽಹಂ ಪಾಪಾತ್ಮಾ ಪಾಪಸಂಭವಃ ।
ಪಾಹಿಮಾಂ ಕೃಪಯಾ ದೇವಾ ಶರಣಾಗತವತ್ಸಲ ॥
ಅನ್ಯಥಾ ಶರಣಂ ನಾಸ್ತಿ ತ್ವಮೇವ ಶರಣಂ ಮಮ ।
ತಸ್ಮಾತ್ಕಾರುಣ್ಯ ಭಾವೇನ ರಕ್ಷ ರಕ್ಷ ಜನಾರ್ಧನ ॥
ಶ್ರೀ ಲಕ್ಷ್ಮೀ ಪದ್ಮಾವತೀ ಸಮೇತ ಶ್ರೀ ವೇಂಕಟೇಶ್ವರ ಸ್ವಾಮಿನೇ ನಮಃ ।
ಆತ್ಮಪ್ರದಕ್ಷಿಣ ನಮಸ್ಕಾರಂ ಸಮರ್ಪಯಾಮಿ ।
(3 ಪ್ರದಕ್ಷಿಣೆ ನಿರ್ವಹಿಸುವಾಗ ಮೇಲಿನ ಮಂತ್ರವನ್ನು ಉಚ್ಚರಿಸುತ್ತಾ ಸಾಷ್ಟಾಂಗ ನಮಸ್ಕಾರವನ್ನು ಅರ್ಪಿಸಿ)

## ಪುನಃ ಪೂಜಾ ಕರಿಷ್ಯೇ

ಛತ್ರಂ ಸಮರ್ಪಯಾಮಿ । ಚಾಮರಂ ವೀಜಯಾಮಿ ।

ನೃತ್ಯಂ ದರ್ಶಯಾಮಿ । ಗೀತಂ ಶ್ರಾವಯಾಮಿ ।

ವಾದ್ಯಂ ಘೋಷಯಾಮಿ । ಆಂದೋಳಿಕಾನ್ ಆರೋಹಯಾಮಿ ।

ಅಶ್ವಾನ್ ಆರೋಹಯಾಮಿ । ಗಜಾನ್ ಆರೋಹಯಾಮಿ ।

ಸಮಸ್ತರಾಜೋಪಚಾರ, ಶಕ್ತ್ಯೋಪಚಾರ, ಮಂತ್ರೋಪಚಾರ, ದೇವೋಪಚಾರ, ಸರ್ವೋಪಚಾರ ಪೂಜಾಂ ಸಮರ್ಪಯಾಮಿ ॥

## ಕ್ಷಮಾಪಣಂ

ಮಂತ್ರಹೀನಂ ಕ್ರಿಯಾಹೀನಂ ಭಕ್ತಿಹೀನಂ ರಮಾಪತೇ ।

ಯತ್ಪೂಜಿತಂ ಮಯಾ ದೇವ ಪರಿಪೂರ್ಣಂ ತದಸ್ತು ತೇ ।

(ದೇವರಿಗೆ ನಮಸ್ಕಾರ ಮಾಡಿ)

ಅನಯಾ ಧ್ಯಾನಾವಾಹನಾದಿ ಷೋಡಶೋಪಚಾರ ಪೂಜಾವಿಧಾನೇನ ಸರ್ವಾತ್ಮಕಃ ತತ್ ಸರ್ವಂ ಶ್ರೀಕೃಷ್ಣಾರ್ಪಣಮಸ್ತು । ಭಗವಾನ್ ಶ್ರೀ ಲಕ್ಷ್ಮೀ ವೇಂಕಟೇಶಃ ಪ್ರಿಯತಾಮ್ ॥

ಶ್ರೀ ಲಕ್ಷ್ಮೀ ಪದ್ಮಾವತೀ ಸಮೇತ ಶ್ರೀ ವೇಂಕಟೇಶ್ವರ ಸ್ವರೂಪೋ ಭಗವಾನ್ ಸುಪ್ರೀತೋ ಸುಪ್ರಸನ್ನೋ ವರದೋ ಭವತು । ಶ್ರೀ ವೇಂಕಟೇಶ್ವರ ದೇವ ಪ್ರಸಾದಂ ಪ್ರತಿಗೃಹ್ಣಾಮಿ ॥ (ನೈರ್ಮಲ್ಯವನ್ನು ಸ್ವೀಕರಿಸಿ)

## ತೀರ್ಥಂ

ಅಕಾಲ ಮೃತ್ಯುಹರಣಂ ಸರ್ವವ್ಯಾದಿ ನಿವಾರಣಂ ।

ಸಮಸ್ತ ದುರಿತೋಪಶಮನಂ ಭಗವತ್ ಪಾದೋದಕಂ ಪಾವನಂ ಶುಭಂ ॥ (ತೀರ್ಥವನ್ನು ಕುಡಿಯಿರಿ)

## ಉದ್ವಾಸನಂ

ಯಜ್ಞೇನ ಯಜ್ಞಮಯಜಂತ ದೇವಾಸ್ತಾನಿ ಧರ್ಮಾಣಿ ಪ್ರಥಮಾನ್ಯಾಸಂ ।

ತೇಹನಾಕಂ ಮಹಿಮಾನಃ ಸಚಂತ ಯತ್ರ ಪೂರ್ವೇ ಸಾಧ್ಯಾಸ್ಸಂತಿ ದೇವಾಃ ॥

ಗಚ್ಛಗಚ್ಛ ಸುರಶ್ರೇಷ್ಠ ಸ್ವಸ್ಥಾನಂ ವೇಂಕಟೇಶ್ವರ ।

ಭಕ್ತಾಭೀಷ್ಟ ಸಮೃದ್ಯರ್ಥಂ ಪುನರಾಗಮನಾಯ ಚ ॥

ಶ್ರೀ ಲಕ್ಷ್ಮೀ ಪದ್ಮಾವತೀ ಸಮೇತ ಶ್ರೀ ವೇಂಕಟೇಶ್ವರ ಸ್ವಾಮಿಂ ಯಾಥಾಸ್ಥಾನಂ ಉದ್ವಾಸಯಾಮಿ

(ಕಲಶವನ್ನು ಸ್ವಲ್ಪ ಅಲುಗಾಡಿಸಿ) (ಅಕ್ಷತೆಕಾಳುಗಳನ್ನು ನಾಲ್ಕು ಸಲ ಹಾಕಿ)

*******

# ಶ್ರೀ ವೇಂಕಟೇಶ್ವರ ವ್ರತಕಲ್ಪ

## ಪ್ರಥಮ ಅಧ್ಯಾಯ

## ಶ್ರೀ ಭಗವಾನ್ ಉವಾಚ

ಇದೇ ಕಲಿಯುಗದಲ್ಲಿ ಒಂದಾನೊಂದು ಶುಭಮುಹೂರ್ತದಲ್ಲಿ ಸಾಕ್ಷಾತ್ ಭೂವೈಕುಂಠವೆಂದು ಪ್ರಸಿದ್ಧವಾಗಿರುವ ತಿರುಮಲ ಬೆಟ್ಟದ ಮೇಲೆ 'ವಿಶ್ವಪತಿ' ಎಂಬ ಭಕ್ತನಿಗೆ ಶ್ರೀ ಶ್ರೀನಿವಾಸನ ರೂಪದಲ್ಲಿ ಕಾಣಿಸಿಕೊಂಡು, ಶ್ರೀ ವೇಂಕಟೇಶ್ವರ ಎಂದು ಭಕ್ತರಿಂದ ಕರೆಯಲ್ಪಡುತ್ತಿರುವ ಶ್ರೀಮನ್ನಾರಾಯಣನು 'ಶ್ರೀ ವೇಂಕಟೇಶ್ವರ ವ್ರತಕಲ್ಪ' ಎಂದು ಪ್ರಸಿದ್ಧಿಗೆ ಬರುವ ಈ ವ್ರತದ ಬಗ್ಗೆ ಪುಸ್ತಕವೊಂದನ್ನು ರಚಿಸಬೇಕೆಂದು, ಅನುಗ್ರಹಿಸಿ, ಅನುಜ್ಞೆ ಇತ್ತು, ಈ ವಿಧವಾಗಿ "ನನ್ನ ಪ್ರೀತಿಯ ಭಕ್ತನಾದ ವಿಶ್ವಪತಿ ನಾಮಧೇಯ, ನಿನಗೆ ಒಂದು ವಿಶೇಷ ವ್ರತಕಲ್ಪದ ಬಗ್ಗೆ ವಿವರಿಸುತ್ತಿದ್ದೇನೆ. ಈ ವ್ರತವು ತನಗೆ ಅತ್ಯಂತ ಪ್ರಿಯವಾಗಿದ್ದು, ಯಾರು ಬೇಕಾದರೂ, ಯಾವಾಗ, ಎಲ್ಲಿ ಬೇಕಾದರು ಆಚರಿಸುವಷ್ಟು ಸುಲಭವಾದದ್ದು ಎಂದು ನುಡಿದನು.

ಕಲಿಯುಗದಲ್ಲಿ ಮನುಷ್ಯರು ತಮ್ಮ ಪೂರ್ವಜನ್ಮದಲ್ಲಿ ಎಸಗಿದ ಪಾಪ ಕರ್ಮಗಳ ಅನುಸಾರ, ಈ ಜನ್ಮದಲ್ಲಿ ಅನೇಕ ಕಷ್ಟಗಳನ್ನು ಅನುಭವಿಸುತ್ತಿರುತ್ತಾರೆ. ಅವರಲ್ಲಿ ನನ್ನ ಭಕ್ತರಾದ ಕೆಲವರು, ತಮ್ಮ ಅಲ್ಪಮಟ್ಟದ ಸುಕೃತದ ಕಾರಣ ತಮ್ಮ ಕಷ್ಟಗಳನ್ನು ನಿವಾರಿಸಬೇಕೆಂದು ನನ್ನನ್ನು ಪ್ರಾರ್ಥಿಸುತ್ತಿದ್ದಾರೆ. ಎಷ್ಟೋ ಖರ್ಚು ಮಾಡಿ, ಕಷ್ಟಪಟ್ಟು ತಿರುಮಲಯಾತ್ರೆ ಮಾಡಿ, ನನ್ನ ದರ್ಶನ ಮಾಡಿಕೊಳ್ಳುತ್ತಿದ್ದಾರೆ.

ನನಗೆ ನನ್ನ ಭಕ್ತರೆಂದರೆ ಅತ್ಯಂತ ಪ್ರೀತಿ. ಅವರು ನನ್ನ ಮೇಲೆ ಸಂಪೂರ್ಣ ಭರವಸೆ ಇಟ್ಟುಕೊಂಡು, ಧರ್ಮಮಾರ್ಗದಲ್ಲಿ ಜೀವನ ನಿರ್ವಹಿಸುತ್ತಿರುವರಾದ್ದರಿಂದ ಅವರ ಬಾಧ್ಯತೆಯನ್ನು ನಾನೇ ಸ್ವತಃ ವಹಿಸಿಕೊಳ್ಳುತ್ತೇನೆ.

ಈಗ ನಾನು ವಿವರಿಸುತ್ತಿರುವ ವ್ರತವು 'ಶ್ರೀ ವೇಂಕಟೇಶ್ವರ ವ್ರತಕಲ್ಪ' ಎಂಬ ಹೆಸರಿನಿಂದ ಪ್ರಸಿದ್ಧಿ ಹೊಂದಲಿ. ಈ ವ್ರತವು ನನಗೆ ಅತ್ಯಂತ ಪ್ರಿಯವಾದದ್ದು. ಈ ವ್ರತವನ್ನು ಯಾರು ಅತ್ಯಂತ ಶ್ರದ್ಧಾಭಕ್ತಿಗಳಿಂದ ಆಚರಿಸುತ್ತಾರೋ, ಅಂತಹವರ ಕಷ್ಟಗಳನ್ನು ಕ್ಷಣಮಾತ್ರದಲ್ಲಿ ಪರಿಹರಿಸುತ್ತೇನೆ. ಈ ವ್ರತವನ್ನು ಯಾರು ಬೇಕಾದರೂ, ಯಾವಾಗ ಬೇಕಾದರೂ ಆಚರಿಸಬಹುದು. ವಿಶೇಷವಾಗಿ, ಈ ವ್ರತವನ್ನು ಮಾರ್ಗಶಿರ, ಮಾಘ ಹಾಗೂ ಕಾರ್ತೀಕ ಮಾಸಗಳಲ್ಲಿಯಾಗಲೀ, ಹುಣ್ಣಿಮೆ, ಪಂಚಮಿ, ಸಪ್ತಮಿ, ಏಕಾದಶಿ ತಿಥಿಗಳಂದು ಅಥವಾ ಶ್ರವಣ, ಸ್ವಾತಿ ನಕ್ಷತ್ರಗಳ ದಿನಗಳಲ್ಲಿ ಆಚರಿಸಿದರೆ ಹೆಚ್ಚಿನ ಫಲ ಲಭಿಸುವುದು.

ಈ ಕಲಿಯುಗದಲ್ಲಿ, ನನ್ನ ಭಕ್ತರಾದ ನೀವು ಅನುಭವಿಸುತ್ತಿರುವ ಕಷ್ಟಗಳ ಸಂಪೂರ್ಣ ಅರಿವು ನನಗಿದೆ. ನಿಮಗೆ ಯಾವಾಗ ಯಾವ ಕಷ್ಟ ಬಂದರೂ, ಆರ್ಥಿಕ ಸಂಕಷ್ಟ ಉದ್ಯೋಗದಲ್ಲಿ ಸಮಸ್ಯೆ, ವ್ಯಾಪಾರದಲ್ಲಿ ನಷ್ಟಗಳು ಎದುರಾದಾಗ, ಮನಃಶಾಂತಿ ಕದಡಿದಾಗ ಈ ವ್ರತವನ್ನು ಆಚರಿಸಿದರೆ, ಕೂಡಲೇ ನಿಮ್ಮೆಲ್ಲ ಕಷ್ಟಗಳೆಲ್ಲಾ ಮಾಯವಾಗುತ್ತವೆ ಮತ್ತು ನೀವು ನಿಮ್ಮ ಮನೆಯಲ್ಲಿ ಯಾವ ಶುಭಕಾರ್ಯಗಳನ್ನು ಮಾಡಬೇಕಾದಲ್ಲಿ, ಅವುಗಳನ್ನು ಆರಂಭಿಸುವ ಮುನ್ನ ಈ ವ್ರತವನ್ನು ಆಚರಿಸಿದರೆ, ಕೈಗೊಂಡ ಕಾರ್ಯಗಳು ನಿರ್ವಿಘ್ನವಾಗಿ ಕೈಗೂಡುತ್ತವೆ. ಈ ವ್ರತವನ್ನು ಆಚರಿಸಿದ ಕೂಡಲೇ ಸಕಲ ಸುಖ, ಸಂಪತ್ತು ಶಾಂತಿಗಳು ಲಭಿಸಿ ಅಷ್ಟೈಶ್ವರ್ಯಗಳು ದೊರೆಯುತ್ತವೆ.

ಶ್ರೀ ವೇಂಕಟೇಶ್ವರ ವ್ರತಕಲ್ಪವನ್ನು ದಿನದ ಯಾವ ಸಮಯದಲ್ಲಾಗಲೀ, ಅಂದರೆ ಬೆಳಿಗ್ಗೆ ಸಾಯಂಕಾಲಗಳಲ್ಲಿ ಆಚರಿಸಬಹುದು. ಈ ವ್ರತವು ಐದು ಅಧ್ಯಾಯಗಳಿಂದ ಕೂಡಿದೆ. ಈ ಐದು ಅಧ್ಯಾಯಗಳನ್ನು ಭಕ್ತಿಯಿಂದ ಓದಬೇಕು. ಸ್ವಗೃಹದಲ್ಲಾಗಲೀ, ವಸತಿಗೃಹಗಳಲ್ಲಾಗಲೀ, ದೇವಾಲಯಗಳಲ್ಲಾಗಲೀ, ಪುಣ್ಯಕ್ಷೇತ್ರಗಳಲ್ಲಾಗಲೀ, ನದೀ ತೀರಗಳಲ್ಲಾಗಲೀ ಈ ವ್ರತವನ್ನು ಆಚರಿಸಬಹುದು.

ಅನುಕೂಲವಿದ್ದಲ್ಲಿ, ನಿಮ್ಮ ಬಂಧು–ಮಿತ್ರರನ್ನು ಆಹ್ವಾನಿಸಿ, ಅವರೊಂದಿಗೆ ಈ ವ್ರತವನ್ನು ಆಚರಿಸಿದರೆ ಅತ್ಯುತ್ತಮ, ಹೆಚ್ಚು ಶ್ರೇಯಸ್ಕರ. ಈ ವ್ರತವನ್ನು ಆಚರಿಸಿದವರಿಗೂ, ಕೇಳಿದವರಿಗೂ, ಪ್ರಸಾದವನ್ನು ಭಕ್ತಿಯಿಂದ ಸ್ವೀಕರಿಸಿದವರಿಗೂ ಆಯುರಾರೋಗ್ಯ ಐಶ್ವರ್ಯಾಭಿವೃದ್ಧಿಗಳು ಉಂಟಾಗುತ್ತವೆ. ಈ ವ್ರತವನ್ನು ಪೂರ್ವಕಾಲದಲ್ಲಿ ನನ್ನ ಪ್ರೀತಿಯ ಭಕ್ತರಾದ ಎಷ್ಟೋ ಮುನಿಗಳು ಆಚರಿಸಿ ತಪಸ್ಸಿದ್ಧಿ, ದಿವ್ಯ ಆಶೀರ್ವಚನಗಳನ್ನು ಪಡೆದಿದ್ದಾರೆ. ಭೂಲೋಕನಿವಾಸಿಗಳಾದ ನಿಮ್ಮೆಲ್ಲರಿಗೆ ಈ ವ್ರತವು ಹೆಚ್ಚಿನ ಆನಂದವನ್ನು ತರುತ್ತಾ, ಅತ್ಯಂತ ಶುಭವನ್ನು ನೀಡುತ್ತದೆ. ಪ್ರಶಾಂತವಾದ ಮನಸ್ಸಿನಿಂದ ನನ್ನನ್ನೇ ಸ್ಮರಿಸುತ್ತಾ ಈ ವ್ರತವನ್ನು ಆಚರಿಸಿದರೆ ವಿಶೇಷ ಫಲ ಲಭಿಸುವುದು.

ಈ ವ್ರತವನ್ನು ಆಚರಿಸುವ ವಿಧಾನವೂ ಇನ್ನೂ ಸುಲಭ. ಕಲಿಯುಗದಲ್ಲಿ ನಿಮಗಾಗುವ ಕಷ್ಟಗಳೆಲ್ಲಾ ನನಗೆ ತಿಳಿದಿದೆ. ಆದ್ದರಿಂದಲೇ ಅತ್ಯಂತ ಕಠೋರ ನಿಷ್ಠೆಯಿಂದ ಮಾಡುವ ತಪಸ್ಸುಗಳಿಗೆ, ಯಜ್ಞ ಯಾಗಗಳಿಗೆ ನೀಡುವ ಫಲವನ್ನು ಸುಲಭವಾದ ಈ ಶ್ರೀ ವೇಂಕಟೇಶ್ವರ ವ್ರತಕಲ್ಪ ಆಚರಣೆಯಿಂದ ನೀವು ಗಳಿಸುತ್ತೀರಿ.

ಪ್ರಥಮವಾಗಿ, ಈ ವ್ರತವನ್ನು ಆಚರಿಸುವ ಸ್ಥಳವನ್ನು ಶುಭ್ರವಾಗಿಟ್ಟುಕೊಂಡಿರಬೇಕು. ಮಂಟಪವೊಂದನ್ನು ನಿರ್ಮಿಸಿ, ನನ್ನ ಪ್ರಿಯಭಾಮೆಯರಾದ ಶ್ರೀದೇವಿ, ಭೂದೇವಿಯರೊಂದಿಗಿರುವ ನನ್ನ ಚಿತ್ರಪಟವನ್ನು ಭದ್ರವಾಗಿ ಆ ಮಂಟಪದಲ್ಲಿಡಬೇಕು. ನಿಮ್ಮ ಇಷ್ಟದೇವತೆಗಳ ಚಿತ್ರಪಟಗಳನ್ನೂ ಸಹ ಮಂಟಪದಲ್ಲಿಡಬಹುದು. ನವಗ್ರಹದೇವತೆಗಳನ್ನು ಮತ್ತು ಅಷ್ಟದಿಕ್ಪಾಲಕರನ್ನು ಆಹ್ವಾನಿಸಬೇಕು ಅಥವಾ ಮನಸ್ಸಿನಲ್ಲೇ ಅವರೆಲ್ಲರಿಗೂ ನಮಸ್ಕರಿಸಬೇಕು.

ಆರಂಭದಲ್ಲಿ, ಅರಿಶಿನದ ಶ್ರೀ ವಿನಾಯಕನನ್ನು ಪೂಜಿಸಬೇಕು. ನಂತರ, ಈ ವ್ರತದಲ್ಲಿರುವ ಐದು ಅಧ್ಯಾಯಗಳನ್ನು ಭಕ್ತಿ ಹಾಗೂ ಶ್ರದ್ಧೆಗಳಿಂದ ಓದಬೇಕು. ಇದು ಈ ವ್ರತದ ಮೊದಲ ಅಧ್ಯಾಯವು. ಮುಂಬರುವ ನಾಲ್ಕು ಅಧ್ಯಾಯಗಳನ್ನು ನನಗೆ ಅತ್ಯಂತ ಪ್ರೀತಿಪಾತ್ರರಾದ ವಿಶ್ವಾಮಿತ್ರ, ವಸಿಷ್ಠ, ಭಾರದ್ವಾಜ ಮತ್ತು ಅತ್ರಿಮುನಿಗಳು ಹೇಳಿರುತ್ತಾರೆ. ಈ ಐದೂ ಅಧ್ಯಾಯಗಳನ್ನು ಓದಿದ ನಂತರ, ನನಗೆ ಪ್ರಿಯವಾದ ಸ್ತೋತ್ರಗಳನ್ನು ಪಠಿಸಬಹುದು. ಪ್ರತಿ ಅಧ್ಯಾಯದ ಅಂತ್ಯದಲ್ಲಿ ಗೋವಿಂದಾ, ಗೋವಿಂದಾ, ಗೋವಿಂದಾ ಎಂದು ಮೂರು ಬಾರಿ ಗಟ್ಟಿಯಾಗಿ ಹೇಳಬೇಕು.

ಈ ಕಲಿಯುಗದಲ್ಲಿ ನಿಮ್ಮೆಲ್ಲರ ದೈನಂದಿನ ಕಷ್ಟಗಳು ನನಗೆ ತಿಳಿದಿವೆ. ಅಲ್ಲದೇ, ಇನ್ನೊಂದು ವಿಶೇಷ ಸಂಗತಿಯನ್ನೂ ತಿಳಿಸಲಿಚ್ಛಿಸುತ್ತೇನೆ. ಈ ವ್ರತವನ್ನು ಸವಿವರವಾಗಿ ಆಚರಿಸಲು ಶಕ್ತಿ ಇಲ್ಲದವರು, ಏಕಾಂಗಿಯಾಗಿ, ನನ್ನ ಚಿತ್ರಪಟವನ್ನು ನಿಮ್ಮೆದುರಲ್ಲಿಟ್ಟುಕೊಂಡು, ವಿಘ್ನೇಶ್ವರನನ್ನು, ನವಗ್ರಹ ದೇವತೆಗಳನ್ನು ಮತ್ತು ಅಷ್ಟದಿಕ್ಪಾಲಕರನ್ನು ಮನಸ್ಸಿನಲ್ಲೇ ನಮಸ್ಕರಿಸಿ, ಈ ವ್ರತದಲ್ಲಿರುವ ಐದು ಕಥೆಗಳನ್ನು ಓದಿ, ನಿಮಗೆ ಅನುಕೂಲವಾದ ಯಾವುದಾದರೂ ಹಣ್ಣೊಂದನ್ನು ನನಗೆ ಸಮರ್ಪಿಸಿ, ಪ್ರಸಾದವಾಗಿ ಸ್ವೀಕರಿಸಬಹುದು. ಈ ವಿಧದಲ್ಲಿ ವ್ರತವನ್ನಾಚರಿಸಿದರೂ ಸಹ, ನಿಮ್ಮ ಕಾರ್ಯಗಳು ಕೈಗೂಡುತ್ತವೆ, ನಿಮ್ಮ ಕಷ್ಟಗಳೆಲ್ಲ ಪರಿಹಾರವಾಗುತ್ತವೆ. ನಿಮಗೆ ನೆಮ್ಮದಿ, ಶಾಂತಿ, ಸುಖ, ಆರೋಗ್ಯಗಳು ಲಭಿಸುತ್ತವೆ.

ಯಾರ್ಯಾರು ಈ ವ್ರತವನ್ನು ಅತ್ಯಂತ ಭಕ್ತಿ ಶ್ರದ್ಧೆಯಿಂದ ಆಚರಿಸುವರೋ, ಅವರ ಮನೆಗೆ ನಾನೇ ಅಪರಿಚಿತ ರೂಪದಲ್ಲಿ ಬಂದು ಪ್ರಸಾದವನ್ನು ಸ್ವತಃ ಸ್ವೀಕರಿಸುತ್ತೇನೆ. ನನ್ನ ಅನುಗ್ರಹವು ನಿಮ್ಮೆಲ್ಲರ ಮೇಲೆ ಸದಾಕಾಲವೂ ಇರುತ್ತದೆ".

ಶ್ರೀ ಶ್ರೀನಿವಾಸನು ವಿಶ್ವಪತಿ ರಾಮಕೃಷ್ಣಮೂರ್ತಿ ಎಂದು ಕರೆಯಲ್ಪಡುತ್ತಿದ್ದ 'ವಿಶ್ವಪತಿ' ಎಂಬ ಭಕ್ತನಿಗೆ ಈ ರೀತಿಯಲ್ಲಿ ತನಗೆ ಅತ್ಯಂತ ಪ್ರೀತಿಪಾತ್ರವಾದ, ತಾನು ಸರ್ವಕಾಲದಲ್ಲೂ ವಾಸಿಸುತ್ತಿರುವ ತಿರುಮಲ ಬೆಟ್ಟದ ಮೇಲೆ ಈ ವ್ರತವಿಧಾನವನ್ನು ಅನುಗ್ರಹಿಸಿರುತ್ತಾರೆ. ಕಲಿಯುಗದಲ್ಲಿ ವಿಶೇಷವಾಗಿ ಈ ವ್ರತವನ್ನು ನಾವೆಲ್ಲರೂ ಆಚರಿಸಿ ಶ್ರೀ ವೇಂಕಟೇಶ್ವರ ಸ್ವಾಮಿಯ ಅನುಗ್ರಹಕ್ಕೆ ಪಾತ್ರರಾಗೋಣ. ಈ ವ್ರತವನ್ನು ಆಚರಿಸಿದ ಕೂಡಲೇ ನಮ್ಮ-ನಿಮ್ಮೆಲ್ಲರ ಕಷ್ಟಗಳು ಕರಗಿ, ಅನೇಕ ಶುಭಫಲಗಳನ್ನು ಹೊಂದಬಹುದು.

**ಗೋವಿಂದಾ... ಗೋವಿಂದಾ... ಗೋವಿಂದಾ...**

**ಪ್ರಥಮಧ್ಯಾಯವು ಸಂಪೂರ್ಣವಾದುದು**

**ಶ್ರಿಯಃ ಕಾಂತಾಯ ಕಲ್ಯಾಣ ನಿಧಯೇ ನಿಧಯೇಽರ್ಥಿನಾಮ್ ।**

**ಶ್ರೀ ವೇಂಕಟನಿವಾಸಾಯ ಶ್ರೀನಿವಾಸಾಯ ಮಂಗಳಂ ॥**

*******

# ಶ್ರೀ ವೇಂಕಟೇಶ್ವರ ವ್ರತಕಲ್ಪ

### ಎರಡನೇ ಅಧ್ಯಾಯ

## ಶ್ರೀ ವಿಶ್ವಾಮಿತ್ರ ಉವಾಚ

ಶ್ರೀ ವೇಂಕಟೇಶ್ವರ ವ್ರತಕಲ್ಪದ ಎರಡನೇ ಅಧ್ಯಾಯವನ್ನು ತಪೋಧನರಾದ ಶ್ರೀ ವಿಶ್ವಾಮಿತ್ರರು ಅನುಗ್ರಹಿಸಿರುವರು. ಶ್ರೀ ವಿಶ್ವಾಮಿತ್ರರು ಹೇಳಿದರು: "ಎಲೈ ಕಲಿಯುಗದಲ್ಲಿ ಜನಿಸಿರುವ ಮಾನವರೇ! ನೀವೀಗ ಆಚರಿಸುತ್ತಿರುವ 'ಶ್ರೀ ವೇಂಕಟೇಶ್ವರ ವ್ರತಕಲ್ಪ'ವು ಅತ್ಯಂತ ಪವಿತ್ರ ಹಾಗೂ ಶ್ರೇಷ್ಠವಾದದ್ದು. ಈ ವ್ರತದ ಮಹಿಮೆ ವರ್ಣಿಸಲಸದಳವಾದದ್ದು. ಈ ಕಲಿಯುಗದಲ್ಲಿ ಶ್ರೀಮನ್ನಾರಾಯಣನ ಕಾರುಣ್ಯವನ್ನು ಪಡೆಯಲು ಶ್ರೀ ವೇಂಕಟೇಶ್ವರ ವ್ರತಕಲ್ಪದ ಆಚರಣೆಗಿಂತ ಸುಲಭದ ಮಾರ್ಗ ಬೇರೊಂದಿಲ್ಲ. ಪೂರ್ವಕಾಲದಲ್ಲಿ, ಈ ವ್ರತವನ್ನು ಆಚರಿಸಿದ ಶ್ರೀ ಶ್ರೀನಿವಾಸನ ಅನೇಕಾನೇಕ ಭಕ್ತಶಿರೋಮಣಿಗಳು ಸಕಲಇಷ್ಟಾರ್ಥಗಳನ್ನೂ ಸಿದ್ಧಿಸಿಕೊಂಡು ಐಹಿಕಾಮುಷ್ಮಿಕ ಫಲಗಳನ್ನು ಅನುಭವಿಸಿರುವರು. ನಮ್ಮ ಸುಕೃತದಿಂದ ಶ್ರೀ ಶ್ರೀನಿವಾಸನು ಈ ವ್ರತಕಲ್ಪವನ್ನು ಅನುಗ್ರಹಿಸಿ ಮಹದುಪಕಾರ ಮಾಡಿರುವನಾದ್ದರಿಂದ ಕರುಣಾಸಿಂಧುವಾದ ಆ ಪರಮಾತ್ಮನಿಗೆ ನಮ್ಮ ಅನಂತಾನಂತ ನಮನಗಳನ್ನು ಪ್ರಪ್ರಥಮವಾಗಿ ಸಲ್ಲಿಸೋಣ.

ಪೂರ್ವಕಾಲದಲ್ಲಿ ಅತ್ಯಂತ ಸಮೃದ್ಧವಾಗಿದ್ದ ಮಗಧ ಸಾಮ್ರಾಜ್ಯದಲ್ಲಿ ಮಹಾವಿಷ್ಣುವಿನ ಭಕ್ತಾಗ್ರೇಸರನಾಗಿದ್ದ ವಿಷ್ಣುಚಿತ್ತನೆಂಬ ಓರ್ವ ಪಂಡಿತನು ವಾಸಿಸುತ್ತಿದ್ದನು. ಆತನಿಗೆ ಒಟ್ಟು ಒಂಭತ್ತು ಹೆಣ್ಣುಮಕ್ಕಳಿದ್ದರು. ವಿಷ್ಣುಚಿತ್ತನು ಮಹಾ ಮೇಧಾವಿಯೂ ಅಪ್ರತಿಮ ಪಂಡಿತನಾಗಿದ್ದರೂ ಅತ್ಯಂತ ಬಡತನದ ಬಾಧೆಯನ್ನು ಅನುಭವಿಸುತ್ತಿದ್ದನು. ವಿಷ್ಣುಚಿತ್ತನ ಪತ್ನಿ ತಾರಾಮತಿಯು ಸದಾ ಶ್ರೀಮನ್ನಾರಾಯಣನನ್ನು ಪೂಜಿಸುತ್ತಿದ್ದಳು ಮತ್ತು ಆರಾಧಿಸುತ್ತಿದ್ದಳು.

ವಿಷ್ಣುಚಿತ್ತನು ಪುರೋಹಿತನಾಗಿದ್ದು, ಕಾಲಕಾಲದಲ್ಲಿ ಸಂಭವಿಸುತ್ತಿದ್ದ ವಿವಾಹಾದಿ ಶುಭಕಾರ್ಯಗಳಲ್ಲಿ ಪೌರೋಹಿತ್ಯವನ್ನು ವಹಿಸಿಕೊಂಡು ಅದರಲ್ಲಿ ಲಭಿಸುತ್ತಿದ್ದ ಅಲ್ಪಸ್ವಲ್ಪ ದಕ್ಷಿಣೆ ಕಾಸುಗಳಿಂದ ಜೀವನ ನಿರ್ವಹಿಸುತ್ತಿದ್ದನು. ಹೀಗಿರುವಾಗ, ಕಾಲಕ್ರಮೇಣ ವಿಷ್ಣುಚಿತ್ತ ಹಾಗೂ ತಾರಾಮತಿ ದಂಪತಿಗಳ ಪುತ್ರಿಯರು ವಿವಾಹಯೋಗ್ಯ ವಯಸ್ಸನ್ನು ತಲುಪಿದರು. ತಮ್ಮ ಬಡತನವನ್ನು ನೆನೆಸಿಕೊಂಡು ಪುತ್ರಿಯರ ವಿವಾಹವನ್ನು ಹೇಗೆ ನೆರವೇರಿಸುವುದೆಂಬ ಚಿಂತೆ ಆ ದಂಪತಿಗಳನ್ನು ಸದಾ ಕಾಲ ಕಾಡಿಸುತ್ತಿತ್ತು ಯಾವ ಉಪಾಯಗಳಾಗಲೀ ಮಾರ್ಗಗಳಾಗಲೀ ತೋಚದೆ, ತಾರಾಮತಿಯು ಶ್ರೀ ಶ್ರೀನಿವಾಸನ ಪ್ರಾರ್ಥನೆಯಲ್ಲೇ ಕಾಲ ಕಳೆಯುತ್ತಿದ್ದಳು.

ಓ ಶ್ರೀ ಶ್ರೀನಿವಾಸನ ನಿಜಭಕ್ತರೇ ಆಶ್ರಿತಜನ ರಕ್ಷಕನಾದ ಶ್ರೀ ವೇಂಕಟೇಶ್ವರ ಸ್ವಾಮಿಗೆ ತನ್ನ ಭಕ್ತರೆಂದರೆ ಅಪಾರ ಪ್ರೀತಿಯೆಂಬ ಅಂಶ ನಮ್ಮೆಲ್ಲರಿಗೂ ತಿಳಿದಿದೆಯಲ್ಲವೇ? ತನ್ನ ಭಕ್ತರ ಯೋಗಕ್ಷೇಮವನ್ನು ಆತ ಪ್ರತಿಕ್ಷಣದಲ್ಲೂ ನೋಡಿಕೊಳ್ಳುತ್ತಲೇ ಇರುವನು.

ವಿಷ್ಣುಚಿತ್ತ–ತಾರಾಮತಿ ದಂಪತಿಗಳು, ಆ ಪರಮಾತ್ಮನ ಭಕ್ತರೆಂದಾದ ಮೇಲೆ ಅವರ ನೋವನ್ನು ಅವನು ನಿವಾರಿಸದಿರುವನೇ? ಒಂದು ದಿನ, ಮಾಘಮಾಸದ ಹುಣ್ಣಿಮೆ, ಪ್ರಾತಃಕಾಲದಲ್ಲಿ ಓರ್ವ ವೃದ್ಧ ಬ್ರಾಹ್ಮಣನು ವಿಷ್ಣುಚಿತ್ತನ ಮನೆ ಬಾಗಿಲನ್ನು ತಟ್ಟಿದನು. ಬಾಗಿಲು ತೆರೆದ ವಿಷ್ಣುಚಿತ್ತನನ್ನು ಕುರಿತು ವೃದ್ಧ ಬ್ರಾಹ್ಮಣನು ಹೀಗೆಂದು ನುಡಿದನು: ಅಯ್ಯಾ, ನಾನು ಮೂಲತಃ ವಂಗದೇಶದ ನಿವಾಸಿ. ಒಂದು ಯಜ್ಞಕಾರ್ಯಕ್ಕೆಂದು ಪ್ರಯಾಣಿಸುತ್ತಿರುವೆನು. ನಾನು ಹೋಗುತ್ತಿದ್ದ ದಾರಿಯಲ್ಲಿ ನಿಮ್ಮ ಈ ದೇಶವನ್ನು ಪ್ರವೇಶಿಸಿರುವೆನು. ನನ್ನ ಪ್ರಯಾಣವನ್ನು ಮುಂದುವರಿಸುವ ಮುನ್ನ ಸ್ವಲ್ಪ ವಿಶ್ರಾಂತಿ ಪಡೆಯಲೆಂದು ನಿಮ್ಮ ಮನೆಗೆ ಬಂದಿರುವೆನು. ದಯವಿಟ್ಟು ತಾವು ಈ ಒಂದು ದಿನವನ್ನು ತಮ್ಮ ಮನೆಯಲ್ಲಿರಲು ಅವಕಾಶ ಮಾಡಿಕೊಟ್ಟರೆ ಸಾಕು. ನಾಳೆ ಮುಂಜಾನೆಯೇ ನಾನು ನನ್ನ ಪ್ರಯಾಣವನ್ನು ಮುಂದುವರಿಸುತ್ತೇನೆ.

ವಿಷ್ಣುಚಿತ್ತನು ಆ ಬ್ರಾಹ್ಮಣೋತ್ತಮರಿಗೆ ಹೀಗೆ ಉತ್ತರಿಸಿದನು: ಮಹಾಸ್ವಾಮಿ, ತಮ್ಮ ಆಗಮನವು ನಮ್ಮ ಪೂರ್ವಜನ್ಮದ ಸುಕೃತವೆಂದು ಭಾವಿಸುತ್ತೇವೆ. ಅತಿಥಿಗಳು ಶ್ರೀಮನ್ನಾರಾಯಣನಿಗೆ ಸಮಾನರೆಂದು ನಮ್ಮ ಪುರಾಣಗಳು ಹೇಳಿವೆ. ತಾವು ನಿಸ್ಸಂಕೋಚವಾಗಿ ನಮ್ಮ ಮನೆಯಲ್ಲಿ ವಿಶ್ರಾಂತಿಯನ್ನು ಪಡೆಯಿರಿ. ಇದು ನಮ್ಮ ಕೋರಿಕೆಯೆಂದೇ ಭಾವಿಸಿ. ಇಷ್ಟು ಹೇಳಿ ವಿಷ್ಣುಚಿತ್ತನು, ವೃದ್ಧ ಬ್ರಾಹ್ಮಣರನ್ನು ಆತ್ಮೀಯವಾಗಿ ತನ್ನ ಮನೆಯೊಳಗೆ ಬರಮಾಡಿಕೊಂಡನು. ವಿಷ್ಣುಚಿತ್ತನು ವೃದ್ಧ ಬ್ರಾಹ್ಮಣರಿಗೆ ಯಥಾಶಕ್ತಿ ಉಪಚಾರಾದಿಗಳನ್ನೂ ಮಾಡಿದನು.

ಅದೇ ದಿನ ಅಪರಾಹ್ನದಲ್ಲಿ ಎಲ್ಲರೂ ವೃದ್ಧ ಬ್ರಾಹ್ಮಣನೊಂದಿಗೆ ಭೋಜನವನ್ನು ಸ್ವೀಕರಿಸಿದ ನಂತರ ಆ ಬ್ರಾಹ್ಮಣನು ತಾರಾಮತಿಯನ್ನು ಕುರಿತು ಹೀಗೆಂದನು: ಏನು ಬಹಳ ಭಯಗ್ರಸ್ತಳಾಗಿರುವಂತೆ ತೋರುತ್ತಿರುವೆ? ನಿನ್ನ ನೋವೇನೆಂದು ನನ್ನೊಡನೆ ನಿಸ್ಸಂಕೋಚವಾಗಿ ಹೇಳಿಕೋ ತಾಯಿ. ತಾರಾಮತಿ ನುಡಿದಳು: ಮಹಾಸ್ವಾಮೀ! ತಾವು ಮಹಾತಪಸ್ವಿಗಳಂತೆ ಕಾಣುವಿರಿ. ತಮ್ಮ ಮುಖಮೇಲಿರುವ ತೇಜಸ್ಸು ವೈಕುಂಠನಿವಾಸಿಯಾದ ಸಾಕ್ಷಾತ್ ಶ್ರೀಮನ್ನಾರಾಯಣನ ಮುಖಾರವಿಂದದಲ್ಲಿ ಕಾಣುವ ತೇಜಸ್ಸನ್ನು ಹೋಲುತ್ತದೆ. ತಮ್ಮಿಂದ ಮುಚ್ಚಿಡುವಂತಹ ಯಾವ ರಹಸ್ಯವೂ ನಮ್ಮ ಜೀವನದಲ್ಲಿಲ್ಲ. ನನ್ನ ಮನೋವ್ಯಥೆಗೆ ಕಾರಣ ನನ್ನ ಹೆಣ್ಣುಮಕ್ಕಳ ವಿವಾಹಕ್ಕೆ ಮಾತ್ರ ಸೀಮಿತವಾದುದು. ತಾರಾಮತಿಯ ಮಾತನ್ನು ಕೇಳಿದ ವಿಪ್ರೋತ್ತಮನು ಕಿರುನಗೆಯೊಂದಿಗೆ ಹೀಗೆ ಉತ್ತರಿಸಿದನು: ತಾಯೀ, ನಿನ್ನ ಕಷ್ಟವೇನೆಂಬುದನ್ನು ನಾನು ಅರಿತೆನು. ಯೋಚಿಸಬೇಡ! ನಿನ್ನ ಚಿಂತೆಗಳೆಲ್ಲ ನಿವಾರಣೆಯಾದುವೆಂದೇ ತಿಳಿ. ನಿನ್ನ ಹೆಣ್ಣುಮಕ್ಕಳ ವಿವಾಹವು ಸಮರ್ಪಕವಾಗಿ ಸಂಪನ್ನಗೊಳಿಸುವ ಅತ್ಯದ್ಭುತವಾದ, ಸುಲಭಸಾಧ್ಯವಾದ ವ್ರತವೊಂದಿರುವುದು. ಆ ವ್ರತದ ವಿಚಾರವನ್ನು ನಾನೀಗ ನಿನಗೆ ತಿಳಿಸುತ್ತೇನೆ. ನೀನು ಶ್ರದ್ಧಾಭಕ್ತಿಪೂರ್ವಕವಾಗಿ ನಾನು ಹೇಳಲಿರುವ ಈ ವ್ರತವನ್ನು ಆಚರಿಸಿಬಿಟ್ಟರೆ, ನಿಮ್ಮ ಕಷ್ಟಗಳೆಲ್ಲಾ ಪರಿಹಾರವಾಗಿ, ನಿಮ್ಮ ಕುಟುಂಬದಲ್ಲಿ ಸುಖ ಶಾಂತಿಗಳು ನೆಲೆಯೂರುತ್ತವೆ. ಶ್ರೀ ವೇಂಕಟೇಶ್ವರ ವ್ರತವೆಂದೇ ಪ್ರಸಿದ್ಧವಾಗಿರುವ ಈ ವ್ರತವು ಅತ್ಯಂತ ಸುಲಭವಾದುದು. ಆದ್ದರಿಂದ, ಈ ವ್ರತವನ್ನು ತಪ್ಪದೇ ಆಚರಿಸಿ ನಿಮ್ಮ ಸಮಸ್ಯೆಗಳಿಗೆ ಪರಿಹಾರವನ್ನು ಪಡೆಯಿರಿ, ಎಂದು ವಿಪ್ರೋತ್ತಮರು ನುಡಿದರು.

ಅಲ್ಲಿಯೇ ಉಪಸ್ಥಿತನಿದ್ದ ವಿಷ್ಣುಚಿತ್ತನು ಅತ್ಯಂತ ಸಂತೋಷಗೊಂಡು, ವಿಪ್ರೋತ್ತಮರಿಗೆ ಅರುಹಿದನು: ವಿಪ್ರೋತ್ತಮರೇ, ಅದಕ್ಕಿಂತ ಸೌಭಾಗ್ಯವೇನಿದೆ. ವ್ರತಾಚರಣೆಗೆ ತಡವೇಕೆ ನಮ್ಮ ಹಿರಿಯರು ಶುಭಸ್ಯ ಶೀಘ್ರಂ ಎಂದು ಅಪ್ಪಣೆ ಮಾಡಿರುತ್ತಾರೆ. ಇಂದು ಮಾಘಮಾಸದ ಹುಣ್ಣಿಮೆಯಾಗಿದ್ದು, ಇದಕ್ಕಿಂತ ಪವಿತ್ರವಾದ ದಿನವನ್ನು ಕಾಯುವ ಅವಶ್ಯಕತೆಯೇ ಇಲ್ಲ. ತಾವು ಅನುಜ್ಞೆ ನೀಡಿದರೆ, ಇಂದೇ, ಈಗಲೇ ಶ್ರೀ ವೇಂಕಟೇಶ್ವರ ವ್ರತಕಲ್ಪವನ್ನು ಆಚರಿಸುವೆ. ಇದಕ್ಕೆ ತಮ್ಮ ಅನುಮತಿ ಹಾಗೂ ಆಶೀರ್ವಾದಗಳು ಮಾತ್ರಬೇಕು. ವಿಪ್ರೋತ್ತಮರು ನಗುತ್ತಾ ತಮ್ಮ ಅನುಮತಿಯನ್ನು ಸೂಚಿಸಲು, ವಿಷ್ಣುಚಿತ್ತ–ತಾರಾಮತಿ ದಂಪತಿಗಳು, ತಮ್ಮ ಹೆಣ್ಣುಮಕ್ಕಳೊಂದಿಗೆ, ಆ ದಿನ ಸಾಯಂಕಾಲವೇ ಬಂಧು–ಮಿತ್ರರನ್ನು ಕರೆದು, ವಿಪ್ರೋತ್ತಮರ ಸಮ್ಮುಖದಲ್ಲೇ ಶ್ರೀ ವೇಂಕಟೇಶ್ವರ ವ್ರತಕಲ್ಪವನ್ನು ಆಚರಿಸಿದರು. ಬಂದ ಭಕ್ತರೆಲ್ಲ ವ್ರತವು ಪೂರ್ತಿಯಾದ ಕೂಡಲೇ, ತೀರ್ಥ ಪ್ರಸಾದವನ್ನು ಸ್ವೀಕರಿಸಿ, ತಮ್ಮ ತಮ್ಮ ಗೃಹಗಳಿಗೆ ತೆರಳಿದರು. ವ್ರತವು ಸಂಪನ್ನವಾದ ನಂತರ ಪುನಃ ಆ ಕುಟುಂಬದವರೆಲ್ಲರೂ ವಿಪ್ರೋತ್ತಮರಿಗೆ ನಮಸ್ಕರಿಸಿ, ಆಶೀರ್ವಾದಗಳನ್ನು ನೀಡಬೇಕೆಂದು ಬೇಡಿಕೊಂಡರು. ವಿಪ್ರೋತ್ತಮರು ಮನೋಭೀಷ್ಟ ಸಿದ್ಧಿರಸ್ತು! ಶ್ರೀ ಲಕ್ಷ್ಮೀ ಶ್ರೀನಿವಾಸ ಕೃಪಾಕಟಾಕ್ಷ ಪ್ರಾಪ್ತಿರಸ್ತು ಎಂದು ಆಶೀರ್ವದಿಸಿದನಲ್ಲದೆ, ಆ ಕುಟುಂಬದವರೊಡನೆ ಸೇರಿ ತೀರ್ಥಪ್ರಸಾದಗಳನ್ನೂ ಸ್ವೀಕರಿಸಿದರು.

ಹಗಲು ಸರಿದು ಇರುಳ ಕತ್ತಲೆ ಆವರಿಸಿದಮೇಲೆ ನಿದ್ರಾಸಮಯವಾಯಿತು. ಮಲಗಲು ತಯಾರಾಗುತ್ತಿದ್ದ ಬ್ರಾಹ್ಮಣೋತ್ತಮರಿಗೆ ವಿಷ್ಣುಚಿತ್ತನು ಹೊದಿಯಲು ಅತ್ಯಂತ ಖಿನ್ನಮನಸ್ಕನಾಗಿ, ಒಂದು ಹರಿದ ಹೊದಿಕೆಯನ್ನು ನೀಡುತ್ತಾ ಸ್ವಾಮೀ! ದಯವಿಟ್ಟು ಕ್ಷಮಿಸಿ. ಕಡುಬಡತನದಲ್ಲಿರುವ ನನ್ನ ಬಳಿ ಇದಕ್ಕಿಂತ ಉತ್ತಮವಾದ, ಹೊದೆಯಲು ಯೋಗ್ಯವಾದ ಯಾವ ವಸ್ತ್ರವೂ ಇರುವುದಿಲ್ಲ. ಅನ್ಯಥಾ ಭಾವಿಸದೆ ತಾವು ಇದನ್ನೇ ಹೊದೆದು ರಾತ್ರಿ ವಿಶ್ರಮಿಸಬೇಕು. ಇದು ನನ್ನ ಸವಿನಯ ಪ್ರಾರ್ಥನೆ, ಎಂದು ಹೇಳಿದನು.

ಆ ವಿಪ್ರೋತ್ತಮರು ಏನೂ ಚಿಂತಿಸಬೇಡಿ ಎಂದು ಕಿರುನಗೆಯೊಂದಿಗೆ ನುಡಿದು ತಾನು ಹೊರವಠಾರದಲ್ಲಿ ವಿಶ್ರಮಿಸುವುದಾಗಿ ಹೇಳಿ ಹೊರನಡೆದರು. ಎಲ್ಲರೂ ನಿದ್ರಾವಶರಾದರು.

ರಾತ್ರಿಯ ನಾಲ್ಕನೆಯ ಜಾಮದಲ್ಲಿ ಇದ್ದಕ್ಕಿದ್ದಂತೆ ಗಾಳಿ, ಸಿಡಿಲು, ಮಿಂಚುಗಳಿಂದ ಕೂಡಿದ ಭಯಂಕರ ವರ್ಷಧಾರೆ ಸುರಿಯಲಾರಂಭಿಸಿತು. ಗಾಢಾಂಧಕಾರ ಕತ್ತಲೆ ಎಲ್ಲೆಡೆ ಪಸರಿಸಿತ್ತು. ಕಣ್ಣುಗಳಿಗೆ ಏನೂ ಗೋಚರವಾಗದ ಪರಿಸ್ಥಿತಿ. ಈ ಸಂದರ್ಭದಲ್ಲಿ ಎಚ್ಚರಗೊಂಡ ವಿಷ್ಣುಚಿತ್ತನಿಗೆ ತಕ್ಷಣ ಅಂತಹ ಭೀಕರ ಸನ್ನಿವೇಶದಲ್ಲಿ, ವಿಪರೀತ ಪರಿಸ್ಥಿತಿಯಲ್ಲಿ ತಮ್ಮ ಅತಿಥಿಯಾಗಿ ಬಂದು ಹೊರಾಂಗಣದಲ್ಲಿ ಮಲಗಿದ್ದ ವಿಪ್ರೋತ್ತಮನು ಹೇಗಿರುವರೋ ಎಂದು ಗಾಬರಿಗೊಂಡುಬಿಟ್ಟನು. ಗಾಢಾಂಧಕಾರದ ಆ ವಿಪರೀತ, ವಿಷಮಕಾಲದಲ್ಲಿ, ಕಣ್ಣುಗಳಿಗೆ ಏನೂ ಕಾಣುತ್ತಿರಲಿಲ್ಲವಾದ್ದರಿಂದ, ಆತನಿಗೆ ಏನೂ ಮಾಡಲೂ ತೋಚದೆ, ಬೆಳಗಾಗುವುದನ್ನೇ ಕಾಯುತ್ತಾ ರಾತ್ರಿಯನ್ನು ಕಳೆದನು. ಬೆಳಗಾದ ಕೂಡಲೇ, ವಿಷ್ಣುಚಿತ್ತ ಹಾಗೂ ಅವನ ಕುಟುಂಬದವರು, ಅತ್ಯಂತ ದುಗುಡ, ವ್ಯಥೆ, ಚಿಂತೆಗಳೊಂದಿಗೆ, ಹೊರಗೆ ಮಲಗಿದ್ದ ವಿಪ್ರೋತ್ತಮರು ಎಷ್ಟು ಕಷ್ಟಪಟ್ಟರೋ, ಏನು ಮಾಡಿದರೋ, ಹೇಗೆ ರಾತ್ರಿಯನ್ನು ಕಳೆದರೋ ಎಂದು ಮರುಗುತ್ತಾ ಹೊರಗೆ ನೋಡಲು ಹೊರಟರು. ಅಷ್ಟು ವೇಳೆಗೆ ಬೆಳಕೂ

ಹರಿದಿತ್ತು, ಮಳೆಯೂ ಶಾಂತವಾಗಿತ್ತು. ಬಾಗಿಲು ತೆರೆದು ನೋಡಿದರೆ ಅವರಿಗೆಲ್ಲ ಒಂದು ಆಶ್ಚರ್ಯ ಕಾದಿತ್ತು. ಅಲ್ಲಿ ವಿಪ್ರೋತ್ತಮರು ಇರಲಿಲ್ಲ! ವಿಷ್ಣುಚಿತ್ತನು ಆತನಿಗೆ ಹೊದೆಯಲೆಂದು ನೀಡಿದ ಚಿಂದಿಯಾದ ಹೊದಿಕೆಯ ಜಾಗದಲ್ಲಿ, ಥಳಥಳ ಹೊಳೆಯುವ, ನವನವೀನವಾದ ಪೀತಾಂಬರವು ರಾರಾಜಿಸುತ್ತಿತ್ತು. ಆ ಸುಂದರ ಪೀತಾಂಬರದ ಮೇಲೆ ಕಿರುನಗೆ ಹೊತ್ತ ಶ್ರೀ ವೇಂಕಟೇಶ್ವರನ ಮನೋಹರವಾದ ವಿಗ್ರಹವೊಂದಿತ್ತು. ದಂಪತಿಗಳು ಹಿಂದಿನ ದಿನ ಜರುಗಿದ ಎಲ್ಲ ಘಟನೆಗಳನ್ನೂ ಪುನಃ ಅವಲೋಕಿಸಿಕೊಳ್ಳುತ್ತಾ ಭಕ್ತಿ ಭಾವದಿಂದ ಆನಂದತುಂದಿಲರಾದರು. ಅವರ ಆನಂದಕ್ಕೆ ಪಾರವೇ ಇರಲಿಲ್ಲ. ತಮ್ಮೊಡನೆ ದಿನವಿಡೀ ಕಾಲ ವ್ಯಯಿಸಿದ್ದ, ವೃದ್ಧ ವಿಪ್ರನು ಶ್ರೀಮನ್ನಾರಾಯಣನಲ್ಲದೇ ಬೇರಾರೂ ಅಲ್ಲವೇಂಬುದು ಅವರಿಗೆಲ್ಲ ತಕ್ಷಣ ಹೊಳೆದುಬಿಟ್ಟಿತು! ಆನಂದಬಾಷ್ಪ ಅವರ ಕಣ್ಣುಗಳನ್ನು ತುಂಬಿತು. ತಮ್ಮ ಸ್ವಾಮಿಯನ್ನು ಗುರುತಿಸಲಾರದೇ ಹೋದೆವೇಂದು ಖೇದಗೊಂಡರು! ವೈಕುಂಠಪತಿಗೆ ಹರಿದ ಹೊದಿಕೆಯನ್ನು ಕೊಡಬೇಕಾಗಿಬಂದ ತಮ್ಮ ಸ್ಥಿತಿಯ ಬಗ್ಗೆ ನೋವಾಯಿತು. ಪೀತಾಂಬರದೊಡನೆ ಪರಮಾತ್ಮನು ಕರುಣಿಸಿದ್ದ ತನ್ನ ಬಿಂಬಾತ್ಮಕ ವಿಗ್ರಹವನ್ನು ಎರಡು ಕೈಗಳಿಂದ ಅನನ್ಯ ಭಕ್ತಿಪೂರ್ವಕ ಎತ್ತಿಕೊಂಡು ಕಣ್ಣುಗಳಿಗೆ ಒತ್ತಿಕೊಂಡರು. ವಿಗ್ರಹದೊಂದಿಗೆ ತಮ್ಮ ಗೃಹವನ್ನು ಪ್ರವೇಶಿಸಲು, ಅವರಿಗೆ ಮತ್ತೊಂದು ಸೋಜಿಗ ಕಂಡಿತು. ತಮ್ಮ ಗೃಹವು ಸ್ವರ್ಣಮಯವಾಗಿ ಪರಿವರ್ತಿತವಾಗಿತ್ತು. ಮನೆಯಲ್ಲಿ, ಎಲ್ಲಿ ನೋಡಿದರಲ್ಲಿ ಧನಕನಕಗಳು ತುಂಬಿತುಳುಕುತ್ತಿದ್ದವು! ಇದೆಲ್ಲವೂ ಶ್ರೀ ವೇಂಕಟೇಶ್ವರ ವ್ರತಕಲ್ಪದ ಮಹಾತ್ಮೆಯೆಂಬುದು ಅವರಿಗೆ ಕೂಡಲೇ ತಿಳಿಯಿತು. ಶ್ರೀ ವೇಂಕಟೇಶ್ವರನಿಗೆ ಪುನಃಪುನಃ ನಮಸ್ಕರಿಸಿ ತಮ್ಮ ಭಕ್ತಿಯನ್ನು ಪ್ರದರ್ಶಿಸಿದರು.

ನೋಡಿದಿರಲ್ಲಾ! ಎಂತಹ ಅದ್ಭುತ! ತನ್ನ ಭಕ್ತನ ಮನೆಗೆ ಸಾಮಾನ್ಯ ವಿಪ್ರನಂತೆ ಸಾಕ್ಷಾತ್ ಶ್ರೀ ವೇಂಕಟೇಶ್ವರನು ಆಗಮಿಸಿ, ತಾನೇ ವ್ರತವಿಧಾನವನ್ನು ತಿಳಿಸಿ, ವ್ರತಾಚರಣೆಯ ನಂತರ ತೀರ್ಥಪ್ರಸಾದಗಳನ್ನು ಸಾಧಾರಣ ಮನುಷ್ಯನಂತೆ ಸ್ವೀಕರಿಸಿ, ತನ್ನ ಭಕ್ತನಿಗೆ ಸರ್ವರೀತಿಯಲ್ಲಿ ಅನುಗ್ರಹ ಮಾಡಿದನು. ಅವನ ಕಾರುಣ್ಯಕ್ಕೆ ಎಣೆಯೆಂಬುದಿಲ್ಲ. ಶ್ರದ್ಧಾಭಕ್ತಿಪೂರ್ವಕವಾಗಿ ಶ್ರೀ ವೇಂಕಟೇಶ್ವರ ವ್ರತವನ್ನು ಯಾರು ಆಚರಿಸುವರೋ, ಅವರಿರುವಲ್ಲಿಗೆ ಶ್ರೀ ವೇಂಕಟೇಶನು ಯಾವುದಾದರೊಂದು ರೀತಿಯಲ್ಲಿ ಬಂದು ತಮಗೆಲ್ಲಾ ಪರಮಾನುಗ್ರಹ ಮಾಡುವನೆಂಬುದರಲ್ಲಿ ಯಾವ ಸಂಶಯವೂ ಕೂಡದು. ನೀವೂ ಕೂಡ ಶ್ರೀ ವೇಂಕಟೇಶ್ವರ ವ್ರತವನ್ನು ನಿಮ್ಮ ಶಕ್ತ್ಯಾನುಸಾರ ಮನಃಪೂರ್ವಕವಾಗಿ, ಭಕ್ತಿಪೂರ್ವಕವಾಗಿ ಆಚರಿಸಿ, ಶ್ರೀ ಸ್ವಾಮಿಯ ಕಾರುಣ್ಯಕ್ಕೆ ಪಾತ್ರರಾಗಿರಿ. ಶ್ರೀ ಲಕ್ಷ್ಮೀ ಶ್ರೀನಿವಾಸ ಪೂರ್ಣಕೃಪಾಕಟಾಕ್ಷ ಪ್ರಾಪ್ತಿರಸ್ತು" ಎಂದು ಶ್ರೀ ವಿಶ್ವಾಮಿತ್ರ ಮಹಾಮುನಿಗಳು ತಮ್ಮ ವ್ರತಕಥೆಯನ್ನು ಸಂಪನ್ನಗೊಳಿಸಿದರು.

**ಗೋವಿಂದಾ... ಗೋವಿಂದಾ... ಗೋವಿಂದಾ...**

**ಎರಡನೇ ಅಧ್ಯಾಯವು ಸಂಪೂರ್ಣವಾದುದು**

**ಶ್ರಿಯಃ ಕಾಂತಾಯ ಕಲ್ಯಾಣ ನಿಧಯೇ ನಿಧಯೇಽರ್ಥಿನಾಮ್ ।**

**ಶ್ರೀ ವೇಂಕಟನಿವಾಸಾಯ ಶ್ರೀನಿವಾಸಾಯ ಮಂಗಳಂ ॥**

*******

# ಶ್ರೀ ವೇಂಕಟೇಶ್ವರ ವ್ರತಕಲ್ಪ

## ಮೂರನೇ ಅಧ್ಯಾಯ

## ಶ್ರೀ ವಸಿಷ್ಠ ಉವಾಚ

ಶ್ರೀ ವೇಂಕಟೇಶ್ವರ ವ್ರತಕಲ್ಪದ ಈ ಅಧ್ಯಾಯವನ್ನು ಮಹಾತಪಸ್ವಿಗಳಾದ ಶ್ರೀ ವಸಿಷ್ಠ ಮುನಿಗಳು, ಶ್ರೀ ಶ್ರೀನಿವಾಸನ ಅಪ್ಪಣೆ, ಅನುಗ್ರಹಗಳ ಮೇರೆಗೆ ತಿಳಿಸಿರುತ್ತಾರೆ. "ಓ ಕಲಿಯುಗದಲ್ಲಿ ಜನಿಸಿರುವ ಭಗವದ್ಭಕ್ತರೇ! ವೈಕುಂಠನಿವಾಸಿಯಾದ ಶ್ರೀ ವೇಂಕಟೇಶನು, ಕಲಿಯುಗದಲ್ಲಿ ತಾವುಗಳು ಎದುರಿಸುವ ಕಷ್ಟಗಳನ್ನೂ ದುರಿತಗಳನ್ನೂ ತನ್ನ ಅನುಗ್ರಹವಿಶೇಷದಿಂದ ದೂರಮಾಡುವ ಉದ್ದೇಶದಿಂದ, ನಿಮ್ಮ ಸುಕೃತದಿಂದ ನಿಮ್ಮ ಸನಿಹದಲ್ಲೇ ಇರುವ ಶ್ರೀ ತಿರುಮಲ ಬೆಟ್ಟದ ಮೇಲೆ ಶ್ರೀ ಶ್ರೀನಿವಾಸನಾಗಿ ಅವತರಿಸಿ ನೆಲೆನಿಂತಿರುವನು. ಶ್ರೀ ಶ್ರೀನಿವಾಸನನ್ನು ಪ್ರಸನ್ನಗೊಳಿಸಲು 'ಶ್ರೀ ವೇಂಕಟೇಶ್ವರ ವ್ರತಕಲ್ಪ'ದ ಆಚರಣೆಯಷ್ಟು ಸುಲಭದ ಮಾರ್ಗ ಬೇರೊಂದಿರುವುದಿಲ್ಲ. ಶ್ರೀ ವೇಂಕಟೇಶ್ವರ ವ್ರತಕಲ್ಪವನ್ನು ಆಚರಿಸುವವರ ಸಕಲ ಇಷ್ಟಾರ್ಥಗಳೂ ಸಿದ್ಧಿಸುವುವು, ಸುಖ, ಶಾಂತಿ ಹಾಗೂ ನೆಮ್ಮದಿಯ ಬಾಳ್ವೆ ಲಭ್ಯವಾಗುವುದು.

ಪೂರ್ವಕಾಲದಲ್ಲಿ ಅವಂತೀ ಎಂಬ ದೇಶದಲ್ಲಿ ಭಾಗ್ಯನಗರವೆಂಬ ಪ್ರಸಿದ್ಧವಾದ ಪಟ್ಟಣವೊಂದಿತ್ತು. ಹೆಸರಿಗೆ ತಕ್ಕಂತೆ ಆ ಪಟ್ಟಣದಲ್ಲಿ ಭಾಗ್ಯವಂತರಾದ ಹೇರಳವಾದ ಸಂಪತ್ತಿನಿಂದ ಕೂಡಿದ್ದ ಅನೇಕ ಜನರು ವಾಸಿಸುತ್ತಿದ್ದರು. ಆದರೆ, ಅವರೆಲ್ಲ ಅತ್ಯಂತ ಗರ್ವಿಷ್ಠರಾಗಿದ್ದರು. ತಮ್ಮ ಸುತ್ತಮುತ್ತಲಿನ ಸಾಮಾನ್ಯಜನರನ್ನು ನಿಕೃಷ್ಟವಾಗಿ ಕಾಣುತ್ತಿದ್ದರು ಮತ್ತು ಅವಹೇಳನ ಮಾಡುತ್ತಿದ್ದರು. ತಮ್ಮ ಐಶ್ವರ್ಯವೇ ತಮ್ಮ ದೊಡ್ಡಸ್ತಿಕೆಯೆಂದು ಬೀಗುತ್ತಿದ್ದರು. ತಮ್ಮ ನಿತ್ಯಾನುಷ್ಠಾನಗಳನ್ನು, ದೈನಂದಿನ ಪೂಜೆಗಳನ್ನೂ ಮಾಡುತ್ತಿರಲಿಲ್ಲ. ಅಷ್ಟೇ ಅಲ್ಲ, ವಿಶೇಷ ಹಬ್ಬ ಹರಿದಿನಗಳಲ್ಲೂ ಸಹ ಯಾವುದೇ ಪೂಜೆಗಳನ್ನು ಮಾಡುತ್ತಿರಲ್ಲಿಲ್ಲ. ಅವರ ನಡೆನುಡಿಗಳನ್ನು ಗಮನಿಸಿದ ಶ್ರೀಮನ್ನಾರಾಯಣನು ಅವರಿಗೆಲ್ಲ ಜ್ಞಾನೋದಯವಾಗುವಂತೆ ಮಾಡಬೇಕೆಂದು ಸಂಕಲ್ಪಿಸಿದನು.

ಹೀಗಿರುವಾಗ, ಒಂದಾನೊಂದು ದಿನ, ಆ ಪಟ್ಟಣದಲ್ಲಿದ್ದ ಧನವಂತರೆಲ್ಲರೂ ಸುಖ–ಸಂಭ್ರಮಗಳಲ್ಲಿ ಮುಳುಗಿದ್ದರು. ಆದರೆ, ಆ ಪಟ್ಟಣದ ಪೂರ್ವಭಾಗದಲ್ಲಿದ್ದ ಶ್ರೀ ಲಕ್ಷ್ಮೀನಾರಾಯಣ ದೇವಾಲಯದಲ್ಲಿ ದೇವರ ದೀಪ ಹಚ್ಚಲೂ ಯಾರೂ ಇಲ್ಲದಂತಾಯಿತು. ಅಂದು ಶಯನೀ ಏಕಾದಶಿಯಾಗಿತ್ತು. ಅದೊಂದು ಪರ್ವದಿನ, ಪವಿತ್ರ ದಿನವಾಗಿತ್ತೆಂದು ಬೇರೆ ಹೇಳಬೇಕಾಗಿಲ್ಲವಷ್ಟೆ? ಆದಾಗ್ಯೂ, ಆ ಧನವಂತ ಪಟ್ಟಣಿಗರಿಗ್ಯಾರಿಗೂ ಶ್ರೀ ಲಕ್ಷ್ಮೀನಾರಾಯಣರ ದೇವಾಲಯದಲ್ಲಿ ಪೂಜಾಕಾರ್ಯವನ್ನು ನಡೆಸಬೇಕೆಂಬ ಆಲೋಚನೆಯೇ ಬರಲಿಲ್ಲ. ಸೂರ್ಯಾಸ್ತವಾದ ನಂತರ, ಇದ್ದಕ್ಕಿದ್ದಂತೆ ಆ ಪಟ್ಟಣದಲ್ಲಿ ಗಾಢವಾದ ಕತ್ತಲೆ ಆವರಿಸಿತು. ಅಲ್ಪ ಸಮಯದಲ್ಲೇ ಕುಂಭವೃಷ್ಟಿ ಆರಂಭಿಸಿ ಧನವಂತರ ಮನೆಗಳೆಲ್ಲಾ ನೀರಿನಿಂದ ತುಂಬಿಹೋದುವಲ್ಲದೇ, ರಾತ್ರಿ ಕಳೆದು ಬೆಳಗಾಗುವುದರೊಳಗೆ ಅವರ ಮನೆಗಳೆಲ್ಲಾ ನೆಲಸಮವಾಗಿದ್ದವು. ಅವರ ಧನಕನಕಾದಿಗಳಾದಿಯಾಗಿ ಸರ್ವವೂ

ನಾಶಹೊಂದಿ ಅವರವರು ಉಟ್ಟಿದ್ದ ವಸ್ತ್ರಗಳಷ್ಟೇ ಉಳಿದಿದ್ದವು. ಅಂತಹ ಉಪದ್ರವ ಹಾಗೂ ಜಲಪ್ರಳಯಕ್ಕೆ ಕಾರಣವೇನೆಂದು ಅವರೆಲ್ಲರೂ ಯೋಚಿಸುತ್ತಿರಲು ಅವರಿಗೊಂದು ವಿಶಿಷ್ಟ ವಿಸ್ಮಯಕರ ದೃಶ್ಯ ಕಾಣಿಸಿತು. ಅದೇನೆಂದರೆ, ಆ ಪಟ್ಟಣದ ಹೊರಭಾಗದಲ್ಲಿದ್ದ ಕೆಲವು ಗುಡಿಸಲೊಂದರ ಸುತ್ತಮುತ್ತ ಯಾವ ತೊಂದರೆಗಳೂ ಉಂಟಾಗಿರಲಿಲ್ಲ. ಧನವಂತರಿಗೆ ಅದನ್ನು ಕಂಡು ಪರಮಾಶ್ಚರ್ಯವಾಯಿತು. ಹಿಂದಿನ ಕರಾಳರಾತ್ರಿ ಸುರಿದ ಕುಂಭವೃಷ್ಟಿಯಲ್ಲಿ ತಮ್ಮೆಲ್ಲ ಆಸ್ತಿಪಾಸ್ತಿಗಳೂ ನಾಶವಾಗಿದ್ದರೂ ಸಹ, ಗುಡಿಸಲಿಗೆ ಮಾತ್ರ ಯಾವುದೇ ಅಹಿತಕರ ಪರಿಣಾಮಗಳಾಗಿರಲಿಲ್ಲ. ಇದು ಹೇಗೆಂದು ಅವರೆಲ್ಲರೂ ತಮ್ಮತಮ್ಮಲ್ಲೇ ಚರ್ಚಿಸಿಕೊಳ್ಳುತ್ತಿದ್ದಾಗಾ ಅವರಿಗೊಂದು ಅತ್ಯಂತ ಪ್ರಕಾಶಮಾನವಾದ ಮಿಂಚೊಂದು ಗೋಚರವಾಗಿ ಅಶರೀರವಾಣಿಯೊಂದು ಮೊಳಗಿತು.

ಎಲೈ ಮೂರ್ಖರೇ! ನಿಮ್ಮ ಸಂಪತ್ತನ್ನೆಲ್ಲಾ ನಿಮ್ಮ ದೊಡ್ಡಸ್ತಿಕೆಯ ಸಂಕೇತವೆಂದು ನೀವು ತಿಳಿದಿದ್ದುದರಿಂದ ಹೀಗಾಯಿತು. ಆ ಗುಡಿಸಿಲಿನಲ್ಲಿ ವಾಸಿಸುತ್ತಿರುವ ದೇವಯ್ಯ, ನನ್ನ ಪರಮಭಕ್ತ. ಆ ದೇವಯ್ಯನು ನಿಮ್ಮ ಪಟ್ಟಣದಲ್ಲಿರುವ ಶ್ರೀ ಲಕ್ಷ್ಮೀನಾರಾಯಣರ ದೇವಾಲಯದಲ್ಲಿ ಪ್ರತಿನಿತ್ಯ ತಪ್ಪದೇ ದೀಪವನ್ನು ಬೆಳಗಿಸುತ್ತಾನೆ. ಮೇಲಾಗಿ, ಪ್ರತಿ ಏಕಾದಶೀ ತಿಥಿಯಂದು ತನ್ನ ಶಕ್ತ್ಯಾನುಸಾರ ಶ್ರೀ ವೇಂಕಟೇಶ್ವರ ವ್ರತಕಲ್ಪವನ್ನು ಆಚರಿಸುತ್ತಾನೆ. ಅವನು ಆಚರಿಸುವ ವ್ರತಕಲ್ಪದ ಮಹಿಮೆಯಿಂದಲೇ, ಅದರ ಫಲಸ್ವರೂಪವಾಗಿ, ಆತನ ಗುಡಿಸಲಲ್ಲಿರುವವರಾರಿಗೂ ಯಾವುದೇ ತೊಂದರೆಗಳಾಗಿಲ್ಲ. ಆತನ ವ್ರತಾಚರಣೆಯಿಂದ ಅವನ ಕುಟುಂಬದವರೆಲ್ಲರೂ ರಕ್ಷಿಸಲ್ಪಟ್ಟರು. ನೀವೂ ಶ್ರೀ ವೇಂಕಟೇಶ್ವರ ವ್ರತಕಲ್ಪವನ್ನು ಶ್ರದ್ಧಾಭಕ್ತಿಗಳಿಂದ ಆಚರಿಸಿದರೆ, ನಿಮ್ಮ ಸಂಪತ್ತನ್ನು ಹಿಂದೆಪಡೆಯುತ್ತೀರಿ.

ಅಶರೀರವಾಣಿಯಿಂದ ಎಚ್ಚೆತ್ತ ಧನವಂತರು, ಕೂಡಲೇ ಶ್ರೀ ಲಕ್ಷ್ಮೀನಾರಾಯಣರ ದೇವಾಲಯಕ್ಕೆ ಹೋಗಿ, ಒಬ್ಬೊಬ್ಬರೂ ಒಂದೊಂದು ಕೆಲಸವನ್ನು ಕೈಗೊಂಡು ಶ್ರೀ ವೇಂಕಟೇಶ್ವರ ವ್ರತಕಲ್ಪವನ್ನು ಶ್ರದ್ಧೆ ಮತ್ತು ಭಕ್ತಿಯಿಂದ ಆಚರಿಸಿದರು. ಅವರ ವ್ರತಾಚರಣೆ ಹಾಗೂ ಅವರು ತೋರಿದ ಭಕ್ತಿ ಶ್ರದ್ಧೆಗಳಿಂದ ಸುಪ್ರೀತನಾದ ಶ್ರೀ ವೇಂಕಟೇಶ್ವರನ ಅನುಗ್ರಹದಿಂದ ನಾಶಗೊಂಡಿದ್ದ ಅವರೆಲ್ಲರ ಮನೆಗಳೂ ಮೂಲರೂಪದಲ್ಲಿ, ಸ್ವಸ್ಥಾನದಲ್ಲಿ ಗೋಚರಿಸಿದುವು. ಅಂದು ಮೊದಲ್ಗೊಂಡು, ಭಾಗ್ಯನಗರದ ಧನವಂತ ವ್ಯಾಪಾರಿಗಳೆಲ್ಲರೂ ಪ್ರತಿ ಏಕಾದಶಿಯಂದು ಶ್ರೀ ವೇಂಕಟೇಶ್ವರ ವ್ರತಕಲ್ಪವನ್ನು ಯಾವುದೆ ಲೋಪವಿಲ್ಲದೆ, ಭಕ್ತಿ ಹಾಗೂ ಶ್ರದ್ಧೆಗಳಿಂದ ಆಚರಿಸುವರು. ಅವರೆಲ್ಲರೂ ಶ್ರೀ ವೇಂಕಟೇಶ್ವರ ಸ್ವಾಮಿಯ ಭಕ್ತರಾದರು. ಇದರಿಂದ ಅವರು ತಮ್ಮ ಜೀವಿತದಲ್ಲಿ ಸುಖ, ಸಂತೋಷ, ಸಂಪತ್ತುಗಳನ್ನು ಅನುಭವಿಸಿ ಮುಕ್ತಿಯನ್ನೂ ಪಡೆದರು", ಎಂಬಲ್ಲಿಗೆ ಶ್ರೀ ವಸಿಷ್ಠ ಮುನಿಗಳಿಂದ ಹೇಳಲ್ಪಟ್ಟ ಶ್ರೀ ವೇಂಕಟೇಶ್ವರ ವ್ರತಕಲ್ಪದ ಮೂರನೇ ಆಧ್ಯಾಯವು ಸಂಪೂರ್ಣವಾಯಿತು.

**ಗೋವಿಂದ....... ಗೋವಿಂದ......ಗೋವಿಂದ...**

**ಮೂರನೇ ಅಧ್ಯಾಯವು ಸಂಪೂರ್ಣವಾದುದು**

**ಶ್ರಿಯಃ ಕಾಂತಾಯ ಕಲ್ಯಾಣ ನಿಧಯೇ ನಿಧಯೇಽರ್ಥಿನಾಮ್ ।**

**ಶ್ರೀ ವೇಂಕಟನಿವಾಸಾಯ ಶ್ರೀನಿವಾಸಾಯ ಮಂಗಳಂ ॥**

*******

# ಶ್ರೀ ವೇಂಕಟೇಶ್ವರ ವ್ರತಕಲ್ಪ

## ನಾಲ್ಕನೇ ಅಧ್ಯಾಯ
## ಶ್ರೀ ಭಾರದ್ವಾಜ ಉವಾಚ

ಶ್ರೀಮನ್ನಾರಾಯಣನಿಗೆ ಅತ್ಯಂತ ಪ್ರಿಯವಾಗಿರುವ ಶ್ರೀ ವೇಂಕಟೇಶ್ವರ ವ್ರತಕಲ್ಪದ ನಾಲ್ಕನೇ ಅಧ್ಯಾಯವನ್ನು ಮಹಾತಪಸ್ವಿಗಳಾದ ಶ್ರೀ ಭಾರದ್ವಾಜ ಮುನಿವರೇಣ್ಯರು ಅನುಗ್ರಹಿಸಿರುವರು. "ಎಲೈ ಕಲಿಯುಗದಲ್ಲಿ ಜನಿಸಿರುವ ಶ್ರೀಮನ್ನಾರಾಯಣನ ಪ್ರಿಯಭಕ್ತರೇ! ನೀವು ಆಚರಿಸುತ್ತಿರುವ ಶ್ರೀ ವೇಂಕಟೇಶ್ವರ ವ್ರತಕಲ್ಪವು ಅತ್ಯಂತ ಶ್ರೇಷ್ಠವಾದದ್ದು ಮತ್ತು ಅತ್ಯದ್ಭುತವಾದದ್ದು. ನಿಮ್ಮ ಮನೋಭಿಲಾಶೆಗಳನ್ನು ಈಡೇರಿಸಿಕೊಳ್ಳಲು ಪರಮಾತ್ಮನು ಅನುಗ್ರಹಿಸಿರುವ, ತಕ್ಷಣ ಫಲವನ್ನೀಯುವ, ಸುಲಭವಾದ ಅನನ್ಯವಾದ ಉಪಾಯಮಾರ್ಗವಾಗಿದೆ. ಈ ವ್ರತಾಚರಣೆಯಿಂದ ಶ್ರೀ ವೇಂಕಟೇಶ್ವರನು ಅತಿ ಶೀಘ್ರವಾಗಿ ಪ್ರಸನ್ನಗೊಳ್ಳುವನು, ಒಲಿಯುವನು ಮತ್ತು ನಿಮ್ಮೆಲ್ಲ ಆಶೋತ್ತರಗಳನ್ನೂ ಕ್ಷಣಮಾತ್ರದಲ್ಲಿ ಈಡೇರಿಸುವನು. ವೈಕುಂಠಪತಿಯಾದ ಶ್ರೀಮನ್ನಾರಾಯಣನೇ ಕಲಿಯುಗದಲ್ಲಿ ಶ್ರೀ ಶ್ರೀನಿವಾಸನಾಗಿ ಶ್ರೀ ತಿರುಮಲಗಿರಿಯ ಮೇಲೆ ನೆಲೆನಿಂತಿರುವನು. ಹಲವು ಜನ್ಮಗಳ ಪುಣ್ಯವಿಶೇಷವಿಲ್ಲದೆ, ಶ್ರೀ ತಿರುಮಲಗಿರಿಯ ಮೇಲೆ ಪಾದಗಳನ್ನಿಡಲು ಸಾಧ್ಯವಿಲ್ಲ. ಸ್ವಾಮಿಯ ದರ್ಶನವಂತೂ ಯೋಚಿಸಲೂ ಸಾಧ್ಯವಿಲ್ಲ. ಅದೇ ರೀತಿ, ಶ್ರೀ ವೇಂಕಟೇಶ್ವರ ವ್ರತಕಲ್ಪವನ್ನಾಚರಿಸಲು ಮನಸ್ಸಿನಲ್ಲಿ ಸಂಕಲ್ಪಿಸಿಕೊಳ್ಳುವುದಕ್ಕೂ ಜನ್ಮಜನ್ಮಾಂತರದ ಪುಣ್ಯವಿರಲೇಬೇಕು. ಈ ವ್ರತವನ್ನು ಆಚರಿಸುತ್ತಿರುವವರು, ಕಥೆಗಳನ್ನು ಕೇಳುವವರೂ, ಪ್ರಸಾದವನ್ನು ಸ್ವೀಕರಿಸುವವರೂ ಶ್ರೀ ವೇಂಕಟೇಶ್ವರನ ವಿಶೇಷ ಕೃಪೆಗೆ ಪಾತ್ರರಾಗಿ ಅನೂಹ್ಯ ಭಾಗ್ಯಗಳನ್ನು ಪಡೆಯುವರು.

ಪ್ರಾಚೀನ ಕಾಲದಲ್ಲಿ 'ನಗರಿ' ಎಂದೇ ಕರೆಯಲ್ಪಡುತ್ತಿದ್ದ ಗ್ರಾಮವೊಂದರಲ್ಲಿ ಧನಗುಪ್ತನೆಂಬ ವ್ಯಾಪಾರಿಯೊಬ್ಬನು ವಾಸಿಸುತ್ತಿದ್ದನು. ಸ್ವಭಾವತಃ ಧನಗುಪ್ತನು ಅತ್ಯಂತ ಜಿಪುಣನಾಗಿದ್ದನು. ಆತನಿಗೆ ಎಷ್ಟೇ ಐಶ್ವರ್ಯವು ಬಂದರೂ ಸಹ, ಜಿಪುಣತನ ಮಾತ್ರ ಸ್ವಲ್ಪವೂ ಕಡಿಮೆಯಾಗುತ್ತಿರಲಿಲ್ಲ. ಮೇಲಾಗಿ ತನ್ನ ಐಶ್ವರ್ಯವೇ ಅಹಂಕಾರದ ಕುರುಹೆಂದು ಬಗೆದಿದ್ದನು ಧನಗುಪ್ತ. ಈ ಪ್ರಪಂಚದಲ್ಲಿ ಅನೇಕಾನೇಕ ಐಶ್ವರ್ಯವಂತರು ತಮ್ಮ ಸಂಪತ್ತಿನ ಮದದಿಂದಲೇ ಅಧೋಗತಿಯನ್ನು ತಲುಪಿರುವ ನಿದರ್ಶನಗಳಿಗೇನೂ ಕೊರತೆಯಿಲ್ಲವಷ್ಟೆ?

ಧನಗುಪ್ತನ ಪತ್ನಿ ಕಾಂತಿಮತಿ ಮಾತ್ರ ಅತ್ಯಂತ ದೈವಭಕ್ತಿಯುಳ್ಳವಳಾಗಿದ್ದಳು. ಧನಗುಪ್ತ–ಕಾಂತಿಮತಿ ದಂಪತಿಗಳಿಗೆ ಮೂವರು ಪುತ್ರಿಯರಿದ್ದರು. ಅವರಲ್ಲಿ ಕೊನೆಯ ಪುತ್ರಿಯ ಹೆಸರು ಕುಮಾರಿ ಎಂಬುದಾಗಿತ್ತು. ಮೂವರು ಹೆಣ್ಣುಮಕ್ಕಳಲ್ಲಿ, ಕುಮಾರಿಗೆ

ದೈವಭಕ್ತಿ ಅಧಿಕವಾಗಿತ್ತು. ಆ ಹೆಣ್ಣುಮಗಳು ಸದಾಕಾಲವೂ ಶ್ರೀ ಶ್ರೀನಿವಾಸನನ್ನೇ ನೆನೆಯುತ್ತಾ ಶ್ರೀ ಶ್ರೀನಿವಾಸನನ್ನೇ ಧ್ಯಾನಿಸುತ್ತಿದ್ದಳು.

ಕುಮಾರಿಯು, ತನ್ನ ತಂದೆಯ ಗಮನಕ್ಕೆ ಬಾರದಂತೆ ಸಮಯ ಸಿಕ್ಕಾಗಲೆಲ್ಲ, ಶ್ರೀ ವೇಂಕಟೇಶ್ವರ ಸ್ವಾಮಿಯ ದೇವಸ್ಥಾನಕ್ಕೆ ಹೋಗಿ, ಸ್ವಾಮಿಯ ದರ್ಶನ ಪಡೆದು ಬರುತ್ತಿದ್ದಳು. ಪ್ರಸಾದವನ್ನು ಆಕೆಯು ಮನೆಗೆ ತರುತ್ತಿದ್ದಳಾದರೂ, ತಂದೆಯನ್ನು ಬಿಟ್ಟು ಉಳಿದವರೆಲ್ಲರೂ ಆ ಪ್ರಸಾದವನ್ನು ಸ್ವೀಕರಿಸುತ್ತಿದ್ದರು. ಕಾಂತಿಮತಿಗೆ ತನ್ನ ಪತಿದೇವರ ಈ ವರ್ತನೆ ಇಷ್ಟವಾಗುತ್ತಿರಲಿಲ್ಲ. ಮೇಲಾಗಿ ಆಕೆಗೆ ತನ್ನ ಪತಿಯ ಬಗ್ಗೆ ಚಿಂತೆಯಾಗುತ್ತಿತ್ತು.

ಒಮ್ಮೆ ಕುಮಾರಿಯ ಸ್ನೇಹಿತೆಯೊಬ್ಬಳ ಮನೆಯಲ್ಲಿ ಶ್ರೀ ವೇಂಕಟೇಶ್ವರ ವ್ರತವನ್ನು ಆಚರಿಸಲಿರುವರೆಂದು ತಿಳಿಯಿತು. ತನ್ನ ತಾಯಿಯ ಅನುಮತಿ ಪಡೆದು, ಕುಮಾರಿಯು ವ್ರತಕಥೆಗಳನ್ನು ಶ್ರವಣಮಾಡುವ ಉದ್ದೇಶದಿಂದ ತನ್ನ ಸ್ನೇಹಿತೆಯ ಮನೆಗೆ ತೆರಳಿದಳು. ವ್ರತವು ಪೂರ್ಣಗೊಂಡಾಗ ಮಧ್ಯಾಹವಾಗಿಬಿಟ್ಟಿತ್ತು. ಪ್ರಸಾದ ವಿತರಣಾ ಕಾರ್ಯಕ್ರಮದಲ್ಲಿ ತಾನೂ ಭಾಗವಹಿಸಿ, ಸ್ವಲ್ಪ ಪ್ರಸಾದವನ್ನು ಒಂದು ಪೊಟ್ಟಣ ಮಾಡಿಕೊಂಡು ಕುಮಾರಿಯು ತನ್ನ ಮನೆಗೆ ಹೊರಟಳು. ಆದರೆ ಮಾರ್ಗಮಧ್ಯದಲ್ಲಿ ಬಿಸಿಲಿನ ಝಳ ಜಾಸ್ತಿಯಾಗಿದ್ದು, ಆಕೆಗೆ ತೀವ್ರವಾದ ಬಾಯಾರಿಕೆಯುಂಟಾಯಿತು. ಎಲ್ಲಾದರೂ ಸ್ವಲ್ಪ ನೀರು ಕುಡಿದು ಬಾಯಾರಿಸಿಕೊಳ್ಳೋಣವೇಂದುಕೊಂಡಾಗ, ಆಕೆಯು ಹೋಗುತ್ತಿದ್ದ ಹಾದಿಯ ಪಕ್ಕದ ಬೀದಿಯಲ್ಲೇ ತನ್ನ ತಂದೆಯ ಅಂಗಡಿ ಇರುವುದೆಂದು ನೆನಪಾಯಿತು. ತಂದೆಯ ಅಂಗಡಿಯಲ್ಲಿ ಜಲಪಾನಮಾಡಿ ಬಾಯಾರಿಕೆಯನ್ನು ತೀರಿಸಿಕೊಂಡು, ಮನೆಗೆ ಹೋಗಲು ತೀರ್ಮಾನಿಸಿದ ಕುಮಾರಿಯು, ತಂದೆಗೆ ತಾನು ವ್ರತಾಚರಣೆಯಲ್ಲಿ ಭಾಗವಹಿಸಿ ಬಂದಿರುವ ವಿಷಯವನ್ನು ತಿಳಿಸಿದರೆ ಆತನು ಕೋಪಗೊಳ್ಳುವನೆಂದು ಯೋಚಿಸಿ ಆ ವಿಷಯವನ್ನು ತಿಳಿಸಲಿಲ್ಲ. ನೀರು ಕುಡಿಯುವಾಗ ಪ್ರಸಾದದ ಪೊಟ್ಟಣವನ್ನು ಒಂದೆಡೆ ಇಟ್ಟಿದ್ದಳು. ಆದರೆ ತಂದೆಯ ಬಗೆಗಿನ ಭಯದಿಂದ, ಮನೆಗೆ ಹಿಂದಿರುಗುವಾಗ ಪ್ರಸಾದದ ಪೊಟ್ಟಣವನ್ನು ಕುಮಾರಿಯು ಅಂಗಡಿಯಲ್ಲೇ ಮರೆತುಬಿಟ್ಟಳು.

ಏತನಧ್ಯೆ, ಕುಮಾರಿಯ ತಂದೆಯವರ ಅಂಗಡಿಯಿದ್ದ ಪೇಟೆಯಲ್ಲಿ ಇದ್ದಕ್ಕಿದ್ದಂತೆ ಗಲಭೆ ಆರಂಭವಾಯಿತು. ದಾರಿಹೋಕರೆಲ್ಲ ಭಯಗೊಂಡು ಕಿರುಚುತ್ತಾ ಓಡಲಾರಂಭಿಸಿದರು. ಅಷ್ಟರಲ್ಲೇ ಅಲ್ಲೊಂದು ಅಗ್ನಿದುರಂತವೂ ಕಾಣಿಸಿಕೊಂಡು, ಅಂಗಡಿಗಳೆಲ್ಲಾ ಅಗ್ನಿಗೆ ಆಹುತಿಯಾಗಲು ಶುರುವಾಯಿತು. ಅದು ಮಧ್ಯಾಹ್ನದ ಸಮಯವಾಗಿದ್ದುದರಿಂದಲೂ, ಅಗ್ನಿಯು ಎಲ್ಲೆಡೆ ಪಸರಿಸುತ್ತಿದ್ದುದರಿಂದ ಮತ್ತು ಆಗಲೇ ತಲೆದೋರಿದ ಬಿರುಗಾಳಿಯಿಂದ ಧನಗುಪ್ತ ತನ್ನ ಅಂಗಡಿಗೆ ಹಾನಿಯಾಬಹುದೆಂದು ಊಹಿಸಿ ಮಹಾಭಯದಿಂದ ಕಂಪಿಸಲಾರಂಭಿಸಿದನು. ತನ್ನ ಕಣ್ಣೆದಿರಿನಲ್ಲೇ, ತನ್ನ ಅಂಗಡಿಯೂ

ಭಸ್ಮವಾಗುವುದೆಂದು ನೆನೆದು ಧನಗುಪ್ತನ ಕೈಕಾಲುಗಳು ನಡುಗಲಾರಂಭಿಸಿದವು. ಆತನ ಅಂಗಡಿಯಲ್ಲಿದ್ದ ಬೇರೆಲ್ಲರೂ ಹೊರಗೋಡಿದರಾದರೂ ಧನಗುಪ್ತ ಮಾತ್ರ ಅಲ್ಲಿಂದ ಕದಲಲಿಲ್ಲ. ಅಂಗಡಿ ಬಿಟ್ಟು ಹೋಗಲು ಆತನಿಗೆ ಮನಸ್ಸಾಗಲಿಲ್ಲ. ಆತನ ಬುದ್ಧಿಯು ಮಂಕಾಗಿರುವಂತೆ ಆತನು ಏನೂ ತೋಚದವನಂತೆ ನಿಂತುಬಿಟ್ಟನು. ತಾನು ಅಲ್ಲೇ ಇದ್ದರೆ ತಾನೂ ಅಗ್ನಿಗಾಹುತಿಯಾಗಬೇಕಾದೀತೆಂದು ತೋಚಿದರೂ, ಆತನು ಗಾಬರಿಯಲ್ಲಿ ಕೈಗಳನ್ನು ಆಚೀಚೆ ಆಡಿಸಿದನು. ಆತನ ಕೈಗೆ ಇದ್ದಕ್ಕಿದ್ದಂತೆ ಯಾವುದೋ ಪೊಟ್ಟಣವು ತಾಗಿದಂತಾಯಿತು. ಅರ್ಥಾತ್ ಕುಮಾರಿಯು ಬಿಟ್ಟುಹೋಗಿದ್ದ ಪ್ರಸಾದವನ್ನು, ತೆಗೆದು ಬಾಯಿಗೆ ಹಾಕಿಕೊಂಡನು. ಬಾಯಿಗೆ ಸಿಹಿರುಚಿಯಾಯಿತು. ಅದರ ಜೊತೆಗೇ ಆತನ ಮನಸ್ಸು ಸ್ಥಿಮಿತಕ್ಕೆ ಬಂದಿತು. ಬಹಳವಾದ ನೆಮ್ಮದಿಯುಂಟಾದುದು ಆತನ ಗಮನಕ್ಕೆ ಬಂದಿತು.

ಅದೇ ಘಳಿಗೆಯಲ್ಲಿ ಒಂದು ಅದ್ಭುತ ಘಟನೆ ಜರುಗಿತು. ಎಲ್ಲೆಡೆ ವ್ಯಾಪಿಸುತ್ತಿದ್ದ ಬೆಂಕಿಯು ಧನಗುಪ್ತನ ಅಂಗಡಿಯನ್ನು ಸೋಕಲೇ ಇಲ್ಲ. ಬೆಂಕಿಯ ಒಂದು ಕಿಡಿ ಕೂಡ ಧನಗುಪ್ತನ ಅಂಗಡಿಯ ಸಮೀಪ ಬಂದಿರಲಿಲ್ಲ. ಏನಿದು ಮಾಯೆ! ಇದು ಹೇಗಾಯಿತು ಎಂದು ಧನಗುಪ್ತನು ಯೋಚಿಸತೊಡಗಿದನು. ಆತನ ಬಾಯಲ್ಲಿ ಮಾತು ಹೊರಡಲೇ ಇಲ್ಲ. ಅಷ್ಟರಲ್ಲಿ ಆತನ ಅಂಗಡಿಯಿದ್ದ ಬೀದಿಯಲ್ಲಿ ಅಗ್ನಿದುರಂತ ಸಂಭವಿಸಿದ ಸುದ್ದಿಯನ್ನು ತಿಳಿದ ಧನಗುಪ್ತನ ಪತ್ನಿ ಕಾಂತಿಮತಿ, ತನ್ನ ಕುಮಾರಿಯರೊಂದಿಗೆ ಅತ್ಯಂತ ಗಾಬರಿಯಿಂದ ಅಂಗಡಿಗೆ ಧಾವಿಸಿದಳು. ದಾರಿಯುದ್ದಕ್ಕೂ ಆಕೆಯು ಶ್ರೀ ಶ್ರೀನಿವಾಸನನ್ನೇ ಧ್ಯಾನಿಸುತ್ತಾ ಹೋದಳು. ಅಂಗಡಿಯನ್ನು ಸಮೀಪಿಸಿದ ಕೂಡಲೇ ಆಕೆಗೆ ಗೋಚರಿಸಿದ ಅಂಶವೇನೆಂದರೆ, ಅಗ್ನಿಯು ತಮ್ಮ ಅಂಗಡಿಯ ಪಕ್ಕದಲ್ಲಿದ್ದ ಅಂಗಡಿಯವರೆಗೆ ಮಾತ್ರ ಹರಡಿ ಅಲ್ಲಿಗೇ ನಂದಿಹೋಗಿತ್ತು. ಆಕೆಗಾದ ಆಶ್ಚರ್ಯ, ಸಂತಸಗಳಿಗೆ ಪಾರವೇ ಇರಲಿಲ್ಲ. ಇಷ್ಟರಲ್ಲಿ ಕುಮಾರಿಗೆ ತಾನು ಅಂಗಡಿಯಲ್ಲಿ ಮರೆತಿದ್ದ ಪ್ರಸಾದದ ಪೊಟ್ಟಣವು ಕಾಣಿಸಿತು. ಧನಗುಪ್ತನಿಗೆ ತಾನು ಆ ಪೊಟ್ಟಣದಲ್ಲಿದ್ದ ಪದಾರ್ಥವನ್ನು ಈ ಮೊದಲು ತಿಂದಿರುವ ನೆನಪಾಯಿತು. ಕುಮಾರಿಯು ಆ ಪೊಟ್ಟಣದಲ್ಲಿದ್ದುದು ಶ್ರೀ ವೇಂಕಟೇಶ್ವರನ ಪ್ರಸಾದವೆಂದೂ, ತಾನು ಶ್ರೀ ವೇಂಕಟೇಶ್ವರ ವ್ರತಾಚರಣೆಯನ್ನು ನೋಡಿ ಬಂದಿದ್ದ ವಿಷಯವನ್ನೂ ವಿವರವಾಗಿ ತನ್ನ ತಂದೆಗೆ ಅರುಹಿದಳು. ಇದೀಗ ಧನಗುಪ್ತನಿಗೆ ತಾನು ತನ್ನ ಅರಿವಿಲ್ಲದೆಯೇ ಭುಂಜಿಸಿದ ಶ್ರೀ ವೇಂಕಟೇಶ್ವರನ ಪ್ರಸಾದದ ಮಹಿಮೆಯಿಂದ, ಉಳಿದುಕೊಂಡಿರುವೆನೆಂಬ ಅರಿವುಂಟಾಯಿತು.

ತನ್ನ ತಪ್ಪಿನ ಅರಿವಾಗಿ ಧನಗುಪ್ತನು ಪ್ರಾಯಶ್ಚಿತ್ತಾರ್ಥದಲ್ಲಿ ತನ್ನ ಕೆನ್ನೆಗೆ ತಟ್ಟಿಕೊಂಡು ತನ್ನ ಅಪರಾಧವನ್ನು ಕ್ಷಮಿಸಬೇಕೆಂದು ಶ್ರೀ ಶ್ರೀನಿವಾಸನಲ್ಲಿ ಬೇಡಿಕೊಂಡನು. ತನ್ನ ಹಳ್ಳಿಯವರನ್ನೆಲ್ಲ ಆಹ್ವಾನಿಸಿ ಶ್ರೀ ವೇಂಕಟೇಶ್ವರ ವ್ರತವನ್ನು ಭಕ್ತಿಶ್ರದ್ಧೆಯಿಂದ ಆಚರಿಸಿದನು. ಅಂದು ಮೊದಲ್ಗೊಂಡು ಧನಗುಪ್ತನು ಶ್ರೀ ವೇಂಕಟೇಶನ ಭಕ್ತನಾಗಿ ಸದಾಕಾಲವೂ ಶ್ರೀ

ವೇಂಕಟೇಶ್ವರನ ಸೇವೇಯನ್ನು ಮಾಡುತ್ತಾ ತನ್ನ ಜೀವಿತವನ್ನು ಕಳೆಯಲಾರಂಭಿಸಿದನು. ಕೊನೆಯಲ್ಲಿ ಧನಗುಪ್ತನು ಮೋಕ್ಷವನ್ನೂ ಪಡೆದನು.

ಯಾವ ಅರಿವೂ ಇಲ್ಲದೆ, ಅಜ್ಞಾನದಿಂದ ಸ್ವೀಕರಿಸಿದ ಶ್ರೀ ವೇಂಕಟೇಶ್ವರನ ಪ್ರಸಾದದ ಮಹಿಮೆಯನ್ನು ಬಣ್ಣಿಸಲು ಸಾಧ್ಯವೆ? ಶ್ರೀ ವೇಂಕಟೇಶ್ವರ ವ್ರತವು ಮಹಾಮಹಿಮೆಯುಳ್ಳದ್ದು. ಅದು ಅತ್ಯಂತ ಶೀಘ್ರವಾಗಿ ಫಲವನ್ನು ನೀಡುವುದು. ತಾವೆಲ್ಲರೂ ಅನುಕೂಲವಾದಾಗಲೆಲ್ಲ ಶ್ರೀ ವೇಂಕಟೇಶ್ವರ ವ್ರತವನ್ನು ಆಚರಿಸಿ, ಶ್ರೀ ಶ್ರೀನಿವಾಸನ ಅಚಿಂತ್ಯ ಕೃಪೆಗೆ ಪಾತ್ರರಾಗಬೇಕು" ಎಂದು ಶ್ರೀ ಭಾರದ್ವಾಜ ಮುನಿಗಳು ನುಡಿದರು ಎಂಬಲ್ಲಿಗೆ ಶ್ರೀ ವೇಂಕಟೇಶ್ವರ ವ್ರತಕಲ್ಪದ ನಾಲ್ಕನೇ ಅಧ್ಯಾಯವು ಸಂಪೂರ್ಣವಾಯಿತು.

**ಗೋವಿಂದಾ... ಗೋವಿಂದಾ... ಗೋವಿಂದಾ...**

**ನಾಲ್ಕನೇ ಅಧ್ಯಾಯವು ಸಂಪೂರ್ಣವಾದುದು**

**ಶ್ರಿಯಃ ಕಾಂತಾಯ ಕಲ್ಯಾಣ ನಿಧಯೇ ನಿಧಯೇಽರ್ಥಿನಾಮ್ ।**

**ಶ್ರೀ ವೇಂಕಟನಿವಾಸಾಯ ಶ್ರೀನಿವಾಸಾಯ ಮಂಗಳಂ ॥**

*******

# ಶ್ರೀ ವೇಂಕಟೇಶ್ವರ ವ್ರತಕಲ್ಪ

### ಐದನೇ ಅಧ್ಯಾಯ

## ಶ್ರೀ ಅತ್ರಿ ಉವಾಚ

ಶ್ರೀ ತಿರುಮಲ ತಿರುಪತಿಯು ಭೂವೈಕುಂಠವೆಂದೇ ಪರಿಗಣಿಸಲ್ಪಟ್ಟಿರುವ ಪರಮ ಪವಿತ್ರವಾದ ಸ್ಥಳ. ಶ್ರೀ ತಿರುಮಲ ತಿರುಪತಿಗೆ ಸಮಾನವಾದ ಯಾತ್ರಾ ಸ್ಥಳವಾಗಲಿ, ಶ್ರೀ ವೇಂಕಟೇಶ್ವರನಿಗೆ ಸಮನಾದ ಬೇರೊಂದು ದೈವವಾಗಲೀ ಈ ಭೂಲೋಕದಲ್ಲಿ ಖಂಡಿತ ದೊರೆಯಲಾರದು, ಊಹಿಸಲೂ ಸಾಧ್ಯವಾಗದು. ಇದೊಂದು ನಿತ್ಯಸತ್ಯವಾದ ಸಂಗತಿ. ಈ ವಿಷಯವನ್ನು, ಶ್ರೀ ತಿರುಮಲ ತಿರುಪತಿ ಹಾಗೂ ಶ್ರೀ ವೇಂಕಟೇಶ್ವರನ ಮಹಿಮೆಗಳನ್ನು ಪುರಾಣೇತಿಹಾಸಗಳಲ್ಲಿ ವಿವಿಧ ರೀತಿಯಲ್ಲಿ ಬಣ್ಣಿಸಿ ಹೇಳಲಾಗಿದೆ. ಶ್ರೀ ತಿರುಮಲಗಿರೀಶನಾಗಿರುವ ಶ್ರೀಮನ್ನಾರಾಯಣನ ಅವತಾರಸ್ವರೂಪನಾಗಿರುವ ಶ್ರೀ ಶ್ರೀನಿವಾಸನಿಗೆ ತನ್ನ ಭಕ್ತರ ಮೇಲೆ ಅಗಾಧವಾದ ಪ್ರೀತಿ. ಅವನನ್ನೇ ನಂಬಿ, ತಮ್ಮೆಲ್ಲ ಯೋಗಕ್ಷೇಮದ ಹೊಣೆಯನ್ನು ಶ್ರೀ ವೇಂಕಟೇಶ್ವರನಿಗೆ ಒಪ್ಪಿಸಿ, ದಿನನಿತ್ಯವೂ ಆತನ ಸ್ಮರಣೆಯನ್ನು ಮಾಡುತ್ತಾ, ಸಾತ್ವಿಕ ಜೀವನವನ್ನು ಸಾಗಿಸುತ್ತಾ ಇದ್ದರೆ, ಪರಮಾತ್ಮನು ಅವರವರ ಭಕ್ತಿ ವೈರಾಗ್ಯಗಳಿಗನುಸಾರವಾಗಿ, ಅವರವರ ಕರ್ಮಾನುಸಾರವಾಗಿ ಸಕಲಾಭೀಷ್ಟಗಳನ್ನೂ ನೆರವೇರಿಸುತ್ತಾನೆ. ಶ್ರೀ ಶ್ರೀನಿವಾಸನನ್ನು ಅತ್ಯಂತ ಸುಲಭವಾಗಿ ಪ್ರಸನ್ನಗೊಳಿಸಲು ಶ್ರೀ ಶ್ರೀನಿವಾಸನೇ ಅನುಗ್ರಹಿಸಿರುವ, ಮಹಾಮುನಿವರೇಣ್ಯರು ಅನುಮೋದಿಸಿರುವ ಶ್ರೀ ವೇಂಕಟೇಶ್ವರ ವ್ರತವನ್ನಾಚರಿಸುವುದು ಸರಳವಾದ ಮಾರ್ಗವಾಗಿದೆ.

ಇಂತಹ ಅದ್ಭುತವಾದ ಶ್ರೀ ವೇಂಕಟೇಶ್ವರ ವ್ರತಕಲ್ಪದ ಐದನೇಯ ಅಧ್ಯಾಯವನ್ನು ತಪೋಧನರಾದ ಶ್ರೀ ಅತ್ರಿ ಮಹರ್ಷಿಗಳು ಈ ರೀತಿಯಲ್ಲಿ ಅನುಗ್ರಹಿಸಿರುತ್ತಾರೆ: "ಭಗವದ್ಭಕ್ತರೇ! ಕಲಿಯುಗದಲ್ಲಿ ಜನಿಸಿರುವ ನಿಮ್ಮ ಅದೃಷ್ಟವನ್ನು ಹೇಳತೀರದು. ಕೃತ, ತ್ರೇತಾ ಹಾಗೂ ದ್ವಾಪರಯುಗಗಳಲ್ಲಿ ಪರಮಾತ್ಮನನ್ನು ಪ್ರಸನ್ನಗೊಳಿಸಬೇಕೆಂದರೆ ಅತ್ಯಂತ ಕಠಿಣವಾದ ತಪಸ್ಸು, ವ್ರತ ನಿಯಮ ನಿಷ್ಠೆಗಳನ್ನು ಸ್ವಲ್ಪವೂ ಲೋಪವಿಲ್ಲದೇ ಆಚರಿಸಬೇಕಾಗುತ್ತಿತ್ತು. ಆದರೆ, ಕಲಿಯುಗದಲ್ಲಿ ಶ್ರೀಮನ್ನಾರಾಯಣನು ಕೇವಲ ಆತನ ನಾಮಸ್ಮರಣೆಯಿಂದ ಒಲಿದುಬಿಡುತ್ತಾನೆ; ಭಕ್ತಿಭಾವದಿಂದ ಒಮ್ಮೆ ಕರೆದರೆ ಕೂಡಲೇ ಓಗೊಡುತ್ತಾನೆ; ಅಪ್ರಮೇಯನಾದ, ಅಚಿಂತ್ಯ ಕರುಣಾಶಾಲಿಯಾದ ಶ್ರೀ ಶ್ರೀನಿವಾಸನು ನೆಲೆಸಿರುವ ಶ್ರೀ ತಿರುಮಲ ತಿರುಪತಿ ಕ್ಷೇತ್ರವೆಲ್ಲವೂ ಸಾಲಿಗ್ರಾಮದಷ್ಟೇ ಪವಿತ್ರ. ಆ ಪವಿತ್ರ ಗಿರಿಯಮೇಲೆ ನೀವಿಡುವ ಪ್ರತಿ ಹೆಜ್ಜೆಯೂ ಅನಂತ ಫಲಕಾರಿ. ಶ್ರೀ ತಿರುಮಲ ಬೆಟ್ಟಕ್ಕೆ ಹೋಗುವುದೇ ಅಥವಾ ಹೋಗಲು ಸಂಕಲ್ಪಿಸುವುದೇ ಹಲವು ಜನ್ಮಗಳ ಸುಕೃತದ ಫಲವೆಂದಾದ ಮೇಲೆ ಬೇರೇನು ಹೇಳಲು ಸಾಧ್ಯ?

ಹಲವು ಶತಮಾನಗಳ ಹಿಂದೆ ಕೌಮಾರ ಎಂಬ ದೇಶವೊಂದಿತ್ತು. ಆ ದೇಶದ ಹಳ್ಳಿಯೊಂದರಲ್ಲಿ 'ಮಿತ್ರುಡು' ಎಂದು ಕರೆಯಲ್ಪಡುತ್ತಿದ್ದ ಅಗಸನೊಬ್ಬನು ಜೀವಿಸುತ್ತಿದ್ದನು. ಆತನು ತನ್ನ ಜೀವನ ನಿರ್ವಹಣೆಗೆ ಬೇಕಾದಷ್ಟು ಸಂಪಾದನೆಯನ್ನು ತನ್ನ ವೃತ್ತಿಯಿಂದ ಮಾಡಿಕೊಂಡು ಸಾಧ್ಯವಾದಷ್ಟು ಮಟ್ಟಿಗೆ ದಾನಧರ್ಮಾದಿಗಳನ್ನು ಮಾಡುತ್ತಾ ಅತ್ಯಂತ ಸಾತ್ವಿಕವಾದ ಜೀವನವನ್ನು ಮಾಡುತ್ತಿದ್ದನು. ಆದರೆ ಆತನನ್ನು ಬಹಳವಾಗಿ ಕಾಡುತ್ತಿದ್ದ ಏಕೈಕ ಚಿಂತೆಯೆಂದರೆ, ಆತನ ಊನವಾದ ಕಾಲುಗಳು. ಬಟ್ಟೆಗಳನ್ನು ಶುಭ್ರಗೊಳಿಸಿದ ನಂತರ ವಸ್ತ್ರಗಳನ್ನು ಹೊತ್ತುಕೊಂಡು ಹೋಗಿ ಅವುಗಳ ಮಾಲೀಕರಿಗೆ ತಲಪಿಸಲು ಆತನಿಗೆ ಬಹಳ ಕಷ್ಟವಾಗುತ್ತಿತ್ತು. ಅದರೂಂದಿಗೆ ಆತನದು ಅತಿ ದೊಡ್ಡ ಸಂಸಾರ ಬೇರೆ. ತನ್ನ ದೊಡ್ಡ ಸಂಸಾರವನ್ನು ನಿರ್ವಹಿಸಲು ಕಷ್ಟಪಡಬೇಕಾದದ್ದು ಆತನಿಗೆ ಅನಿವಾರ್ಯವಾದ ಕರ್ಮವಾಗಿತ್ತು. ಇಷ್ಟೆಲ್ಲಾ ನೋವಿನ ನಡುವೇಯೂ ಮಿತ್ರುಡು, ಶ್ರೀ ಶ್ರೀನಿವಾಸನ ಸ್ಮರಣೆಯನ್ನು ಮಾತ್ರ ಮರೆಯುತ್ತಿರಲಿಲ್ಲ. ಸದಾ ಕಾಲವೂ ಆ ಸ್ವಾಮಿಯನ್ನೇ ನೆನೆಯುತ್ತಿದ್ದನು. ಯಾವುದಾದರೊಂದು ದಿನ ಆ ಸ್ವಾಮಿಯು ತನ್ನ ಮೇಲೆ ಕೃಪೆಮಾಡುತ್ತಾನೆ, ತನ್ನ ಕಷ್ಟಗಳನ್ನೆಲ್ಲಾ ಕ್ಷಣಮಾತ್ರದಲ್ಲಿ ಪರಿಹರಿಸುತ್ತಾನೆಂಬುದು ಆತನ ಅಚಲವಾದ ನಂಬಿಕೆ, ದೃಢವಾದ ವಿಶ್ವಾಸ. ಶ್ರೀಮನ್ನಾರಾಯಣನು ತನ್ನ ಭಕ್ತರೆಲ್ಲರ ಬದುಕನ್ನೂ ಸದಾಕಾಲವೂ ಗಮನಿಸುತ್ತಲೇ ಇರುತ್ತಾನೆ. ಅವರವರ ಪೂರ್ವಜನ್ಮದ ಕರ್ಮಗಳು ನಿವೃತ್ತಿಹೊಂದಿದ ಕೂಡಲೇ ಆ ಸ್ವಾಮಿಯು ಅವರ ಸಹಾಯಕ್ಕೆಂದು ಯಾವುದಾದರೊಂದು ರೂಪದಲ್ಲಿ ಧಾವಿಸಿ ಅವರ ಕಷ್ಟಗಳನ್ನೆಲ್ಲಾ ಖಂಡಿತವಾಗಿಯೂ ದೂರಮಾಡುತ್ತಾನೆ. ಇದರಲ್ಲಿ ಎಳ್ಳಷ್ಟೂ ಸಂಶಯವಿರುವುದಿಲ್ಲ.

ಹೀಗೊಂದು ದಿನ, ಸಾಯಂಕಾಲದ ಸಮಯ. ಮಿತ್ರುಡು ಎಂದಿನಂತೆ ತಾನು ಬೆಳಗಿನಿಂದ ಶುಭ್ರಗೊಳಿಸಿದ್ದ ವಸ್ತ್ರಗಳನ್ನು ಪಟ್ಟಣದಲ್ಲಿದ್ದ ಅವುಗಳ ಮಾಲೀಕರಿಗೆ ತಲುಪಿಸಿ ಅತ್ಯಂತ ಆಯಾಸದಿಂದ ತನ್ನ ಮನೆಯ ಕಡೆಗೆ ಹಿಂದಿರುಗುತ್ತಿದ್ದನು. ಮಾರ್ಗಮಧ್ಯದಲ್ಲಿ ಆತನಿಗೆ ಓರ್ವ ವೃದ್ಧ ಬ್ರಾಹ್ಮಣನು ಎದುರಾಗುತ್ತಾನೆ. ಮಿತ್ರುಡು ತನ್ನಲ್ಲಿ ಇನ್ನೂ ಉಳಿದಿದ್ದ ಮಾರನೇ ದಿನ ಶುಭ್ರಗೊಳಸಲೆಂದು ತಂದಿದ್ದ ವಸ್ತ್ರಗಳ ಮೂಟೆಯನ್ನು ಹೆಗಲಿನಿಂದ ಕೆಳಗಿಳಿಸಿ ವಿನಮ್ರನಾಗಿ, ಅತ್ಯಂತ ಗೌರವ ಹಾಗೂ ಭಕ್ತಿಯಿಂದ ವೃದ್ಧ ಬ್ರಾಹ್ಮಣನಿಗೆ ಎರಡು ಕೈಗಳನ್ನೆತ್ತಿ ನಮಸ್ಕರಿಸಿದನು. ವಿಪ್ರೋತ್ತಮರು ಆತನ ಅವಸ್ಥೆಯನ್ನು ನೋಡಿ ಈ ಊನವಾದ ಕಾಲುಗಳನ್ನಿಟ್ಟುಕೊಂಡು ಅತ್ಯಂತ ಭಾರವಾದ ವಸ್ತ್ರಗಳ ಗಂಟನ್ನು ಹೊತ್ತುಕೊಂಡು ತಿರುಗಾಡಲು ನೀನು ಬಹಳ ಕಷ್ಟಪಡುತ್ತಿರುವೆ ಎಂದೆನಿಸುತ್ತದೆ, ಅಲ್ಲವೇ?. ಅದಕ್ಕೆ ಮಿತ್ರುಡು ತನ್ನ ಉಸಿರನ್ನು ಸ್ವಲ್ಪ ಎಳೆದುಕೊಂಡು ಹೀಗೆ ಉತ್ತರಿಸಿದನು: ಸ್ವಾಮಿ, ತಾವ್ಯಾರೋ ಅತ್ಯಂತ ಮಹಾನುಭಾವರೆಂದು ತೋರುತ್ತದೆ. ನನ್ನ ದೊಡ್ಡದಾದ ಸಂಸಾರವನ್ನು ಸಾಕಲು ನಾನು ಕಷ್ಟಪಡದೆ ಗತ್ಯಂತರವಿಲ್ಲ. ಈ ಊನತೆಯನ್ನು ಕಳೆದುಕೊಳ್ಳುವ ಮಾರ್ಗ ಯಾವುದಾದರೂ ತಮಗೆ ಗೊತ್ತಿದ್ದರೆ, ದಯವಿಟ್ಟು ಅದನ್ನು ತಿಳಿಸಿ ಪುಣ್ಯ ಕಟ್ಟಿಕೊಳ್ಳಿ ಸ್ವಾಮಿ. ನಾನು ಕೃತಾರ್ಥನಾಗುತ್ತೇನೆ.

ವೃದ್ಧ ಬ್ರಾಹ್ಮಣನು ನಸುನಗುತ್ತಾ ಹೀಗೆ ಉತ್ತರಿಸುತ್ತಾನೆ: ಪುತ್ರ! ಖಂಡಿತಾ ಅದನ್ನು ನಿನಗೆ ತಿಳಿಸುತ್ತೇನೆ. ನಿಧಾನವಾಗಿ ಕೇಳಿ ಅದನ್ನು ಪಾಲಿಸು. ನಿನ್ನ ಊನವು ಮಾಯವಾಗುತ್ತದೆ. ಅಷ್ಟೇ ಅಲ್ಲದೆ ನಿನಗೆ ಅಷ್ಟೈಶ್ವರ್ಯಗಳೂ ಲಭಿಸುವುವು. ನಾನೀಗ ವ್ರತವೊಂದನ್ನು ತಿಳಿಸುವೆನು. ಆ ವ್ರತವನ್ನು ಆಚರಿಸಿದ ಕೂಡಲೇ ನಿನಗೆ ಒಂದು ಸಾವಿರ ಹೊನ್ನ ವರಹಗಳು ಲಭಿಸುವುವು. ಆದರೆ ಒಂದು ನಿಬಂಧನೆಯಿದೆ. ಅದೇನೆಂದರೆ, ವ್ರತಾಚರಣೆಯ ನಂತರ ನಿನಗೆ ದೊರೆಯುವ ಒಂದು ಸಹಸ್ರ ಹೊನ್ನ ವರಹಗಳಲ್ಲಿ ಅರ್ಧದಷ್ಟನ್ನು ನೀನು ನನಗೆ ನೀಡಬೇಕು. ನಾಳೆಯ ದಿನ ಇದೇ ಸಮಯದಲ್ಲಿ, ಇದೇ ಸ್ಥಳದಲ್ಲಿ ನಾನು ನಿನ್ನನ್ನು ನಿರೀಕ್ಷಿಸುತ್ತಿರುತ್ತೇನೆ. ಈ ಮಾತನ್ನು ನೀನು ಮರೆಯುವ ಹಾಗಿಲ್ಲ, ಎಂದನು ವೃದ್ಧ ಬ್ರಾಹ್ಮಣನು.

ಅತ್ಯಂತ ಸಂತಸ ಹಾಗೂ ವಿಸ್ಮಯಗಳನ್ನು ಹೊಂದಿದ ಮಿತ್ರುಡು ಉತ್ತರಿಸುತ್ತಾನೆ: ಮಹಾಸ್ವಾಮಿ! ಇದಕ್ಕಿಂತ ಮಿಗಿಲಾದ ಸೌಭಾಗ್ಯವೇನಿದೆ. ಆ ವ್ರತವು ಯಾವುದೇ ಇರಲಿ, ತಾವದನ್ನು ಹೇಳಿ, ನಾನು ಇಂದೇ ಆ ವ್ರತವನ್ನು ಆಚರಿಸುತ್ತೇನೆ. ದಯವಿಟ್ಟು ಕನಿಕರಿಸಿ ನನ್ನನ್ನು ಉದ್ಧರಿಸಿ. ವಿಪ್ರೋತ್ತಮನು ಮಿತ್ರುಡುವಿಗೆ ಶ್ರೀ ವೇಂಕಟೇಶ್ವರ ವ್ರತಕಲ್ಪವನ್ನು ಸವಿವರವಾಗಿ ತಿಳಿಸಿದನು.

ಮಿತ್ರುಡು ಅತ್ಯಂತ ಸಂತೋಷಭರಿತನಾಗಿ, ಉತ್ಸಾಹದಿಂದ ತನ್ನ ಮನೆಯನ್ನು ಶೀಘ್ರವಾಗಿ ತಲುಪಿ ತನ್ನ ಪ್ರಿಯಪತ್ನಿಗೆ ದಾರಿಯಲ್ಲಿ ನಡೆದ ಸಂಗತಿಯನ್ನೆಲ್ಲಾ ವಿವರಿಸಿ ಹೇಳಿದನು. ತನ್ನ ಅಕ್ಕ–ಪಕ್ಕದವರನ್ನೆಲ್ಲಾ ಆಹ್ವಾನಿಸಿ, ಶ್ರೀ ವೇಂಕಟೇಶ್ವರ ವ್ರತಕಲ್ಪವನ್ನು ಶ್ರದ್ಧಾಭಕ್ತಿಗಳಿಂದ ಆಚರಿಸಿ ತೀರ್ಥಪ್ರಸಾದಗಳನ್ನು ಬಂದವರಿಗೆಲ್ಲ ಹಂಚಿ ತಾನೂ ಸ್ವೀಕರಿಸಿದನು. ಅದೇ ಸಂದರ್ಭದಲ್ಲಿ ಅವನ ಮನೆಯ ಹೊರಗೆ ಏನೋ ಗಲಾಟೆ, ಗದ್ದಲ ಕೇಳಿಬಂದಿತು. ಕುತೂಹಲದಿಂದ ಮನೆಯ ಹೊರಗೆ ಬಂದ ಮಿತ್ರುಡು, ತನ್ನ ಪುತ್ರನು ಓಡೋಡಿ ಬರುತ್ತಿರುವುದನ್ನು ಕಂಡು ವಿಸ್ಮಯಗೊಂಡನು. ಅಷ್ಟರಲ್ಲಿ ಮನೆಯನ್ನು ತಲುಪಿದ ಆತನ ಮಗ ‘ಅಪ್ಪಾ, ರಾಜಭಟರು ನಿನ್ನನ್ನು ಹುಡುಕಿಕೊಂಡು ಬರುತ್ತಿದ್ದಾರೆ. ಮಹಾರಾಜರು ನಿನಗೆ ಯಾವುದೋ ಗಹನವಾದ, ಬೃಹತ್ತಾದ ಉಡುಗೊರೆಯನ್ನು ಕಳುಹಿಸಿರುವನೆಂದು ರಾಜಭಟರು ಹೇಳಿದರು’ ಎಂದು ನುಡಿದನು. ಅಷ್ಟು ಹೊತ್ತಿಗೆ ರಾಜಭಟರು ಮಿತ್ರುಡುವಿನ ಮನೆಯನ್ನು ತಲುಪಿದ್ದರು. ಅವರೆಂದರು: ಮಿತ್ರುಡು, ಮಹಾರಾಜರು ನಿನ್ನನ್ನು ತಮ್ಮ ಆಸ್ಥಾನದ ಅಗಸನನ್ನಾಗಿ ನೇಮಿಸಿರುವರು. ಒಂದು ವಾರದೊಳಗೆ ನೀನು ಆಸ್ಥಾನದಲ್ಲಿ ಕಾರ್ಯ ನಿರ್ವಹಿಸಲು ಬರಬೇಕೆಂದು ಆಜ್ಞಾಪಿಸಿರುವರು. ಬಹುಮಾನ ಪೂರ್ವಕವಾಗಿ ನಿನಗೆ ಸಾವಿರ ಹೊನ್ನುಗಳನ್ನು ಕಳುಹಿಸಿರುವರು. ದಯವಿಟ್ಟು ಸ್ವೀಕರಿಸು. ಇಷ್ಟು ಹೇಳಿ ರಾಜಭಟರು ತಾವು ತಂದಿದ್ದ ಸಾವಿರ ವರಹಗಳ ಚೀಲವನ್ನು ಮಿತ್ರುಡುವಿನ ಮುಂದಿಟ್ಟು ಹಿಂದಿರುಗಲು ಅವನ ಅಪ್ಪಣೆಯನ್ನು ಕೋರಿದರು.

ಮಿತ್ರುಡುವಿಗಾದ ಸಂತೋಷಕ್ಕೆ ಪಾರವೇ ಇರಲಿಲ್ಲ. ವಾರದ ತನಕ ಕಾಯಬೇಕೇಕೆಂದು ಯೋಚಿಸಿದ ಮಿತ್ರುಡು ಮರುದಿನವೇ ಹೋಗಬೇಕೆಂದು ತೀರ್ಮಾನಿಸಿ, ಮರುದಿನ ಪ್ರಾತಃಕಾಲದಲ್ಲೇ ರಾಜಾಸ್ಥಾನಕ್ಕೆ ಪ್ರಯಾಣ ಮಾಡಿದನು. ಆಕಸ್ಮಿಕವಾಗಿ ತನಗೆ ದೊರೆತ

ಕೆಲಸ, ರಾಜರ ಕರೆ, ಸಾವಿರ ಹೊನ್ನುಗಳ ಸಂತಸದಲ್ಲಿ ತೇಲುತ್ತಿದ್ದ ಮಿತ್ರುಡುವಿಗೆ ತಾನು ವೃದ್ಧ ಬ್ರಾಹ್ಮಣನಿಗೆ ಕೊಟ್ಟಿದ್ದ ಮಾತು ಮರೆತುಹೋಯಿತು. ರಾಜಾಸ್ಥಾನಕ್ಕೆ ಹೋಗುವ ಮಾರ್ಗಮಧ್ಯದಲ್ಲಿ ಆತನಿಗೆ ಅದರ ನೆನಪಾಯಿತಾದರೂ ಹೆಚ್ಚು ತಲೆ ಕೆಡಿಸಿಕೊಳ್ಳಲಿಲ್ಲ. ಒಂದು ತಿಂಗಳ ನಂತರ ಆ ವಿಪ್ರನಿಗೆ ಹೊನ್ನುಗಳನ್ನು ತಲುಪಿಸಿದರಾಯಿತೆಂದುಕೊಂಡು ರಾಜನ ಮುಂದೆ ನಿಂತು ತಲೆಬಾಗಿ ಪ್ರಣಾಮ ಮಾಡಿದನು. ತನ್ನ ಕೆಲಸದಲ್ಲೇ ಮುಳುಗಿಹೋದ ಮಿತ್ರುಡುವಿಗೆ ವೇಗವಾಗಿ ಜಾರುತ್ತಿದ್ದ ದಿನಗಳು, ತಿಂಗಳುಗಳು ಗಮನಕ್ಕೆ ಬಾರದೆ, ತಾನು ವಿಪ್ರನಿಗೆ ಕೊಟ್ಟಿದ್ದ ಮಾತೂ ನೆನಪಿಗೆ ಬರಲಿಲ್ಲ. ವಿಪ್ರನ ರೂಪದಲ್ಲಿ ಅಗಸನಿಗೆ ಕಾಣಿಸಿಕೊಂಡಿದ್ದ ಶ್ರೀ ವೇಂಕಟೇಶ್ವರನಿಗೆ ತನ್ನ ಭಕ್ತನು ತಪ್ಪು ಮಾಡುತ್ತಿರುವನೆಂದೂ ಅವನಿಗೆ ಸರಿದಾರಿಯನ್ನು ತೋರಬೇಕೆಂದೂ ಸಂಕಲ್ಪಿಸಿದನು.

ಮಾರನೇ ದಿನ ಇದ್ದಕ್ಕಿದ್ದಂತೆ ಮಹಾರಾಣಿಯವರ ಆಭರಣಗಳು ಮಾಯವಾದವು. ಅವುಗಳನ್ನು ಮಿತ್ರುಡುವೇ ಕದ್ದಿರುವನೆಂದು ರಾಜನು ತೀರ್ಮಾನಿಸಿದನು.

ಮಹಾರಾಜನು ಮಿತ್ರುಡುವಿಗೆ ಕಠಿಣವಾದ ಕಾರಾಗೃಹ ಶಿಕ್ಷೆಯನ್ನು ವಿಧಿಸಿದನು. ರಾಜಭಟರು ಮಿತ್ರುಡುವಿಗೆ ಅನೇಕ ರೀತಿಯ ಶಿಕ್ಷೆಗಳನ್ನು ಕೊಟ್ಟರು. ರಾತ್ರಿಯಾಗುತ್ತಲೇ ಮಿತ್ರುಡು ತಾನು ಮಾಡಿರದಿದ್ದ ಅಪರಾಧವು ತನ್ನ ಮೇಲೆ ಬರಲು ಕಾರಣವೇನು, ಏಕೆ ತನಗೇ ಈ ಕಷ್ಟವು ಎದುರಾಯಿತು ಎಂದು ಚಿಂತಿಸಲಾರಂಭಿಸಿದನು. ಆತನು ನಿದ್ರಾವಸ್ಥೆಗೆ ತಿರುಗಿದ ಮೇಲೆ, ಶ್ರೀ ವೇಂಕಟೇಶ್ವರನು ಅವನ ಕನಸಿನಲ್ಲಿ ತೋರಿಬಂದು ಹಿಂದೊಮ್ಮೆ ನಡೆದಿದ್ದ ಸಂಗತಿಯನ್ನೂ, ಅದರ ಕಾರಣದಿಂದಲೇ ತನಗೆ ರಾಜಾಸ್ಥಾನದಲ್ಲಿ ಕೆಲಸ ದೊರಕಿದುದೂ, ತಾನು ವಿಪ್ರನಿಗೆ ನೀಡಿದ್ದ ಮಾತನ್ನು ಮರೆತಿದ್ದುದೂ ನೆನಪಿಗೆ ಬಂದವು. ಆಗಲೇ ಅವನಿಗೆ ವೃದ್ಧ ಬ್ರಾಹ್ಮಣನ ರೂಪದಲ್ಲಿ ಬಂದಿದ್ದವರು ಶ್ರೀ ಶ್ರೀನಿವಾಸನೇ ಎಂದು ತಿಳಿದುಬಿಟ್ಟಿತು. ಮಿತ್ರುಡು ಕೂಡಲೇ ಪರಮಾತ್ಮನನ್ನು ಪ್ರಾರ್ಥಿಸಿದನು: 'ಪರಮಾತ್ಮ ನಾನು ಪರಮಪಾಪಿಯು. ಅರಿಯದೇ ಅಪರಾಧವನ್ನು ಮಾಡಿರುವೆನು. ಇಂದು ಮೊದಲ್ಗೊಂಡು ಪ್ರತಿ ತಿಂಗಳಿಗೊಮ್ಮೆ ಶ್ರೀ ವೇಂಕಟೇಶ್ವರ ವ್ರತವನ್ನು ತಪ್ಪದೇ ಆಚರಿಸುವೆನು. ನನ್ನ ಸಂಪಾದನೆಯಲ್ಲಿ ಅರ್ಧ ಭಾಗವನ್ನು ಪ್ರತಿ ತಿಂಗಳೂ ನಿಮಗೇ ಸಮರ್ಪಿಸುತ್ತೇನೆ. ನನ್ನ ಮೇಲೆ ಕರುಣೆ ತೋರಿ, ನನ್ನ ಅಪರಾಧವನ್ನು ಕ್ಷಮಿಸಿ'. ಪಶ್ಚಾತ್ತಾಪದ ಬೇಗೆಯಲ್ಲಿ ಬೇಯುತ್ತಿದ್ದ ಮಿತ್ರುಡು, ಪ್ರಾಯಶ್ಚಿತ್ತಾರ್ಥವಾಗಿ ತನ್ನ ಕೆನ್ನೆಗಳಿಗೆ ತಾನೇ ಹೊಡೆದುಕೊಂಡನು. ಪರಮಾತ್ಮನು ಎಂದಿಗೂ ತನ್ನ ಭಕ್ತರ ಮೇಲೆ ಕೋಪಗೊಳ್ಳುವುದಿಲ್ಲ. ಹಾಗೆಂದ ಮಾತ್ರಕ್ಕೆ ತನ್ನ ಭಕ್ತರು ಎಸಗುವ ತಪ್ಪುಗಳಿಗೆ ಶಿಕ್ಷೆಯನ್ನೂ ನೀಡಲು ಮರೆಯುವುದಿಲ್ಲ. ಆತನು ಅತ್ಯಂತ ಕರುಣಾಶಾಲಿ. ಮಿತ್ರುಡು ನಿಜವಾಗಿ ತನ್ನ ತಪ್ಪನ್ನು ಅರಿತಿರುವನು ಎಂದು ಪರಮಾತ್ಮನಿಗೆ ಮನದಟ್ಟಾಯಿತು. ಪುನಃ ಮಿತ್ರುಡುವಿನ ಮೇಲೆ ಪರಮಾತ್ಮನು ಕರುಣೆ ತೋರಿದನು. ಅವನ ಅನುಗ್ರಹದಿಂದ ಮಹಾರಾಣಿಯವರ ಕಣ್ಮರೆಯಾಗಿದ್ದ ಆಭರಣಗಳು ಬೇರೊಂದೆಡೆ ದೊರೆತುಬಿಟ್ಟವು. ಮಿತ್ರುಡು ಆ ಆಭರಣಗಳನ್ನು ಕದ್ದಿರಲಿಲ್ಲವೇಂದು ಮಹಾರಾಜನಿಗೆ ಮನವರಿಕೆಯಾಯಿತು. ಅವನನ್ನು ಕಾರಾಗೃಹದಿಂದ ರಾಜನು ಬಿಡುಗಡೆಗೊಳಿಸಿದನು.

ಮಿತ್ರುಡು ಶ್ರೀ ವೇಂಕಟೇಶ್ವರನಿಗೆ ನೀಡಿದ್ದ ಮಾತಿನಂತೆ ಪ್ರತಿ ತಿಂಗಳೂ ಶ್ರೀ ವೇಂಕಟೇಶ್ವರ ವ್ರತವನ್ನು ಶ್ರದ್ಧಾಭಕ್ತಿಗಳಿಂದ ಆಚರಿಸುತ್ತಾ ತನ್ನ ಸಂಪಾದನೆಯಲ್ಲಿ ಅರ್ಧ ಭಾಗವನ್ನು ಶ್ರೀ ಶ್ರೀನಿವಾಸನಿಗೆ ಸಮರ್ಪಿಸುತ್ತ, ನೆಮ್ಮದಿಯ ಬದುಕನ್ನು ಪಡೆದನು. ಅನೇಕ ವರ್ಷಗಳು ಸುಖ ಸಂತೋಷಗಳನ್ನು ಅನುಭವಿಸಿದ ನಂತರ ಮುಕ್ತಿಯನ್ನು ಪಡೆದನು" ಎಂದು ಶ್ರೀ ಅತ್ರಿ ಮಹರ್ಷಿಗಳು ತಮ್ಮ ಕಥನವನ್ನು ಪೂರ್ಣಗೊಳಿಸಿದರು.

**ಗೋವಿಂದಾ... ಗೋವಿಂದಾ... ಗೋವಿಂದಾ...**

**ಐದನೇ ಅಧ್ಯಾಯವು ಸಂಪೂರ್ಣವಾದುದು**

**ಶ್ರಿಯಃ ಕಾಂತಾಯ ಕಲ್ಯಾಣ ನಿಧಯೇ ನಿಧಯೇಽರ್ಥಿನಾಮ್ ।**

**ಶ್ರೀ ವೇಂಕಟನಿವಾಸಾಯ ಶ್ರೀನಿವಾಸಾಯ ಮಂಗಳಂ ॥**

**ಶ್ರೀ ವೇಂಕಟೇಶ್ವರ ವ್ರತಕಲ್ಪವು ಸಂಪೂರ್ಣವಾಯಿತು.**

*******



